CC-0. In Public Domain. Digitized by eGangotri

ಸ್ವಯಂಪ್ರಕಾಶ

SWAYAMPRAKASHA ಶ್ರೀಮಠ, ಹರಿಹರಪುರ

ಒಳಪುಟದಲ್ಲಿ
ಗೀತಾ
ಪ್ರಶ್ನೋತ್ತರ ಸ್ಪರ್ಧೆ

ಸಂಪುಟ 14, ಸಂಚಿಕೆ 3, ಡಿಸೆಂಬರ್ 2014 ಶ್ರೀ ಸಯನಾಮ ಸಂವತ್ಸರ ಮಾರ್ಗಶಿರ - ಪುಷ್ಯ ಮಾಸ

Sri Vidyabharati Book Centre, Sringeri

ಧಾರ್ಮಿಕ, ಆಧ್ಯಾತ್ಮಿಕ ಮಾಸಪತ್ರಿಕೆ • ವಾರ್ಷಿಕ ಚಂದಾ ರೂ. 150 • ಪುಟಗಳು - 48 + 4

CC-O. In Public Domain. Digitized by eGangotri

ಜಯ ಜಯ ಲಕ್ಷ್ಮೀನರಸಿಂಹ । ವಜ್ರಸ್ತಂಭಜ ನರಸಿಂಹ ॥



ಸಂಪೂರ್ಣಗೊಂಡ ಶ್ರೀ ಲಕ್ಷ್ಮೀ ಕಿರೀಟ

ಲಕ್ಷ್ಮೀಯ ಪ್ರಭಕ್ತರೇ,

ಹರಿಹರಪುರದ, ಅಗಸ್ತ್ಯ ಕರಾರ್ಚಿತ
ಯಂತ್ರರಾಜ ವಜ್ರಸ್ತಂಭಜ
ಲಕ್ಷ್ಮೀನೃಸಿಂಹ ಸ್ವಾಮಿಗೆ ರತ್ನಖಚಿತ
ಕಿರೀಟವನ್ನು ಸಮರ್ಪಿಸಲು
ಸ್ವಾಮಿಯ ಅನುಗ್ರಹದಿಂದ
ಸಂಕಲ್ಪಿಸಲಾಗಿದ್ದು,
ಈ ಪುಣ್ಯಸೇವೆಗೆ ಸುಮಾರು
2 ಕೆ.ಜಿ ಚಿನ್ನದ ಅವಶ್ಯಕತೆಯಿದ್ದು,
ಇದೀಗ ಭಕ್ತಾದಿಗಳ ಸಹಕಾರದಿಂದ
'ಶ್ರೀಲಕ್ಷ್ಮೀ' ಕಿರೀಟ
ಸಂಪೂರ್ಣಗೊಂಡಿರುತ್ತದೆ.
ಇನ್ನು ಮುಂದೆ 'ಶ್ರೀ ನರಸಿಂಹ'
ಸ್ವಾಮಿಯ ಕಿರೀಟಕ್ಕೆ ಚಿನ್ನವನ್ನು
ಸಮರ್ಪಿಸಲು ಅವಕಾಶವಿದ್ದು,
ಭಕ್ತಾದಿಗಳು ಈ ಪುಣ್ಯಸೇವೆಯಲ್ಲಿ
ಪಾಲ್ಗೊಂಡು ಭಗವಂತನ
ಹಾಗೂ ಮಹಾಸ್ವಾಮಿಗಳವರ
ಪೂರ್ಣಾನುಗ್ರಹಕ್ಕೆ
ಪಾತ್ರರಾಗಬೇಕೆಂದು
ಈ ಮೂಲಕ ಕೋರುತ್ತಿದ್ದೇನೆ.

ಪಿ.ಎನ್. ವಿಶ್ವನಾಥನ್,
ಕಾರ್ಯನಿರ್ವಹಣಾಧಿಕಾರಿಗಳು,
ಶ್ರೀಮಠ, ಹರಿಹರಪುರ

Sri Vidyabharathi Book Centre, Sringeri

CC-0. In Public Domain. Digitized by eGangotri

ಶಾರದಾಚನ್ದ್ರಮೌಲೀಶಕೃಪಯಾ ಧರ್ಮಬೋಧಿನೀ । ಸ್ವಯಂಪ್ರಕಾಶಸಂಜ್ಞೇಯಂ ಪತ್ರಿಕಾ ವರ್ಧತಾಂ ಚಿರಮ್ ।।

ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿನಃ

ಸಂಪುಟ 14, ಸಂಚಿಕೆ 3, ಡಿಸೆಂಬರ್ 2014, ಶ್ರೀ ಜಯನಾಮ ಸಂವತ್ಸರ ಮಾರ್ಗಶಿರ - ಪುಷ್ಯಮಾಸ

ಸಂರಕ್ಷಕರು : ಪರಮಪೂಜ್ಯ ಜಗದ್ಗುರು ಅನಂತ ಶ್ರೀ ವಿಭೂಷಿತ ಭಾರತೀತೀರ್ಥ ಮಹಾಸ್ವಾಮಿಗಳವರು
ದಕ್ಷಿಣಾಮ್ನಾಯ ಶೃಂಗಗಿರಿ ಶ್ರೀ ಶಾರದಾ ಪೀಠಾಧೀಶ್ವರರು, ಶೃಂಗೇರಿ

ಸಂಸ್ಥಾಪಕರು : ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳವರು
ಶ್ರೀ ಮಠ, ಹರಿಹರಪುರ, ಚಿಕ್ಕಮಗಳೂರು ಜಿಲ್ಲೆ - 577 120

ಸಂಪಾದಕರು : ''ಗುರುಸೇವಾರತ್ನ'', ''ಸಂಸ್ಕೃತಶ್ರೀ'' ಶ್ರೀಹರಿಹರಪುರ ಬಿ. ಸುಬ್ರಹ್ಮಣ್ಯಂ
ಸ್ವಾನಂದಕಲಾಶ್ರೀ - ಸಾಹಿತ್ಯಭೂಷಣ - ಜ್ಯೋತಿಷರತ್ನಂ (ಅಯೋಧ್ಯಾ)
ನಂ.5/ಎ, 'ಕುಟೀರ', ಆಂಜನೇಯ ದೇವಸ್ಥಾನದ ಬೀದಿ, ಅರಕೆರೆ ಗ್ರಾಮ ಬನ್ನೇರುಘಟ್ಟ ರಸ್ತೆ
ಐ.ಐ.ಎಮ್. ಅಂಚೆ, ಬೆಂಗಳೂರು - 560 076. ದೂರವಾಣಿ : 080 26585578

ಪ್ರಕಾಶಕರು : ಶ್ರೀ ಪಿ. ಎನ್. ವಿಶ್ವನಾಥನ್, ಸ್ವಯಂಪ್ರಕಾಶ ಪಬ್ಲಿಕೇಷನ್ಸ್ ಟ್ರಸ್ಟ್, ''ಭಕ್ತಿಮಂದಿರಂ''
1370/ಎಂ, ನೆಹರೂ ರಸ್ತೆ, ಗಿರಿನಗರ, ಬೆಂಗಳೂರು - 560 085 ದೂರವಾಣಿ: 080 26426116

ಸಂಚಾಲಕರು : ಅಣ್ಣುಕೊಡಿಗೆ ನಾಗರಾಜ, ದೂರವಾಣಿ: 08265 274039

ಪುಟ ವಿನ್ಯಾಸ : ರಾಧಾಕೃಷ್ಣ ಕಲ್ಚಾವಡಿ

ಮುದ್ರಕರು : ಜ್ವಾಲಾಮುಖಿ ಮುದ್ರಣಾಲಯ ಪ್ರೈವೇಟ್ ಲಿಮಿಟೆಡ್
44/1, ಕೆ.ಆರ್. ರಸ್ತೆ, ಬಸವನಗುಡಿ, ಬೆಂಗಳೂರು - 4. ದೂರವಾಣಿ: 26617243, 266601064

ಪತ್ರಿಕಾ ಪ್ರಸಾರ ಬಳಗ

ಶ್ರೀ ಪ್ರಸನ್ನ ಮೂರ್ತಿ ಎನ್.ಜಿ, ಕುಮಾರಸ್ವಾಮಿ ಲೇಔಟ್, ದೂರವಾಣಿ: 98441 30720
ಶ್ರೀ ರಮೇಶ್ ದಿಂಡೋಡಿ, ಕತ್ರಿಗುಪ್ಪೆ, ದೂರವಾಣಿ: 94492 04176
ಶ್ರೀ ಶೃಂಗನಾಥ್, ಕೋಣನಕುಂಟೆ, ದೂರವಾಣಿ: 99456 96263
ಶ್ರೀ ನರಸಿಂಹಮೂರ್ತಿ, ಕೋಣನಕುಂಟೆ, ದೂರವಾಣಿ: 99458 87486
ಶ್ರೀ ಬಿ.ವಿ. ರಮೇಶ್, ದೂರವಾಣಿ: 98805 96436

ಚಂದಾ ವಿವರ

1 ವರ್ಷಕ್ಕೆ ರೂ.150/- 30 ತಿಂಗಳಿಗೆ ರೂ. 300/- 5 ವರ್ಷಕ್ಕೆ ರೂ.600/-

ಹಣವನ್ನು ಸ್ವಯಂಪ್ರಕಾಶ ಪಬ್ಲಿಕೇಷನ್ಸ್ ಟ್ರಸ್ಟ್ ಹೆಸರಿಗೆ
ಕರ್ಣಾಟಕ ಬ್ಯಾಂಕ್ ಲಿಮಿಟೆಡ್, ಶ್ರೀನಗರ ಶಾಖೆ, ಬೆಂಗಳೂರು, ಇಲ್ಲಿಗೆ ಪಾವತಿಸಿ
S.B. A/c No. 0992500102159101 IFSC: KARB 0000099

ಈ ಪತ್ರಿಕೆಯಲ್ಲಿ ಮುದ್ರಿತವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು
ಲೇಖಕರ ವೈಯಕ್ತಿಕವಾದವೇ ಹೊರತು ಸಂಪಾದಕರ ಅನಿಸಿಕೆಗಳಲ್ಲ.

Purohit Darpan, Astrological Magazine, Jyotish Magazine, Jyotri

ಸ್ವಯಂಪ್ರಕಾಶಾಂತರಂಗ

1. ವೈದಿಕ ಪ್ರಾರ್ಥನೆ 3
2. ಭಗವದ್ವಾಣಿ 4
3. ಶ್ರೀ ಶಂಕರವಾಣಿ 5
4. ಜಗದ್ಗುರುವಾಣಿ 6
5. ಶ್ರೀ ಪರಮಗುರುವಾಣಿ 7
6. ವಿದ್ಯುತ್ ವಾಣಿ 8
7. ಶ್ರೀ ಸದ್ಗುರು ವಾಣಿ 9
8. ಸಂಪಾದಕೀಯ 11
9. ಸುದ್ದಿ ಸಮಾಚಾರಗಳು 15
10. ಶ್ರೀ ರಮಣ ಮಹರ್ಷಿ 16
11. ಸುಭಾಷಿತಗಳು 18
12. ಧರ್ಮನಿರಪೇಕ್ಷ ರಾಷ್ಟ್ರದಲ್ಲಿ ಅರ್ಥ... 19
13. ಕಗ್ಗದ ಬೆಳಕಿನಲ್ಲಿ 21
14. ಶ್ರೀಮದ್ಭಗವದ್ಗೀತಾ ಪ್ರಶ್ನೋತ್ತರ ಸ್ಪರ್ಧೆ 22
15. ಸಂಸ್ಕೃತ ನಮಗೆಷ್ಟು ಅನಿವಾರ್ಯ? 26
16. ಧಾರ್ಮಿಕ ಆಚರಣೆ ಅವೈಜ್ಞಾನಿಕವೇ? 29
17. ಕಣ್ವ ಮಹರ್ಷಿಗಳು 32
18. ಸಂಸ್ಕೃತ ಶ್ಲೋಕಾರ್ಥ ವೈಭವ 34
19. ಶ್ರೀ ಶಂಕರಾಯಣ 36
20. ಸೆಕ್ಯುಲರ್ ವಾದಿಗಳು 30
21. ಬ್ರಿಟಿಷ್‌ಪೂರ್ವ ಭಾರತದಲ್ಲಿ ಶಿಕ್ಷಣ... 38
22. ಕಾರ್ಗಿಲ್ ಕದನ 40
23. ದೊಡ್ಡಪತ್ರೆ 42
24. ಚಿಣ್ಣರಿಗಾಗಿ 44
25. ಗಾದೆಗೊಂದು ಕಥೆ 45
26. ಪದಕ್ರೀಡೆ 48

ನೀತಿಶತಕ

ಕೃಪೆ: ಭರ್ತೃಹರಿಯ ಶತಕತ್ರಯ

ಭೋದ್ಧಾರೋ ಮತ್ಸರಗ್ರಸ್ತಾಃ ಪ್ರಭವಃ ಸ್ಮಯದೂಷಿತಾಃ ।
ಅಜ್ಞೋಪಹತಾಶ್ಚಾನ್ಯೇ ಜೀರ್ಣಮಂಗೇ ಸುಭಾಷಿತಮ್ ॥ 1 ॥

ಅನೇಕ ವಿಷಯಗಳನ್ನು ಅರಿತವರಾದರೂ ಪರರ ಉತ್ಕರ್ಷವನ್ನು ಬಯಸದ ಅಸೂಯೆಯಿಂದ ಹೊರಗೆಡುಹದೇ, ರಾಜರು ಅಹಂಕಾರ ಮದದಿಂದ ಸುಭಾಷಿತಗಳನ್ನು ಲಕ್ಷಿಸದೇ, ಅರಿಯದ, ಸಾಮಾನ್ಯ ನಾಗರಿಕರಿಗೆ, ಈ ಒಳ್ಳೆಯ ಸಲಹೆಗಳು ಆಹಾರವಿಲ್ಲದ, ವೃದ್ಧರ ಅವಯವಗಳಂತೆ ತೆಳ್ಳಗೆ ಮೆತ್ತಗಾಗಿವೆ. (ಇಂಥ ಸತ್ಯಪೂರ್ಣ, ಸುಂದರ ಸ್ಮರಣೀಯ ವಾಕ್ಯಗಳನ್ನು ಶಕ್ತಿಯುತಗೊಳಿಸಿ, ಅಜ್ಞಾನಿಗಳಿಗೂ ತಿಳಿಸಲು – ಅವರ ಜೀವನೋತ್ಕರ್ಷಕ್ಕೆ ಬೆಂಬಲಿಸಲು – ಸಿದ್ಧನಾಗುತ್ತೇನೆಂಬ ಸೂಚನೆ).

Sri Vidyabharathi Book Centre, Sringeri

CC-O. In Public Domain. Digitized by eGangotri

ವೈದಿಕ ಪ್ರಾರ್ಥನೆ

ಅಗ್ನಿಃ ಪೂರ್ವೇಭಿರ್ಋಷಿಭಿರೀಡ್ಯೋ ನೂತನೈರುತ ।

ಸ ದೇವಾ ಏಹ ವಕ್ಷತಿ ॥ (1-1-2)

ಅಗ್ನಿಃ - ಪರಮೇಶ್ವರನು; **ಪೂರ್ವೇಭಿಃ ಋಷಿಭಿಃ** - ಪ್ರಾಚೀನ ಋಷಿಗಳಿಂದ; **ಉತ ನೂತನೈಃ** - ಮತ್ತು ಆಧುನಿಕರಿಂದ; **ಈಡ್ಯಃ** - ಸ್ತುತಿ ಮಾಡಲು ಯೋಗ್ಯನಾಗಿದ್ದಾನೆ. **ಸಃ** - ಅವನು; **ದೇವಾನ್** - ದೇವತೆಗಳನ್ನು; **ಇಹ** - ಈ ಸಂಸಾರದಲ್ಲಿ; **ಆ ವಕ್ಷತಿ** - ಪ್ರಾಪ್ತ ಮಾಡುತ್ತಾನೆ.

ಭಾವಾರ್ಥ : ಪೂರ್ವಕಲ್ಪದಲ್ಲಿ ಯಾವ ವೇದಾರ್ಥವನ್ನರಿತ ಮಹರ್ಷಿಗಳು ಆಗಿ ಹೋಗಿದ್ದಾರೋ ಮತ್ತು ಯಾವ ಬ್ರಹ್ಮಚರ್ಯಾದಿ ಸಾಧನಗಳಿಂದ ನವೀನ ಮಹಾಪುರುಷರಾಗಿದ್ದಾರೋ ಇವರೆಲ್ಲರಿಂದಲೂ ಆ ಪೂಜ್ಯ ಪರಮಾತ್ಮನೇ ಸ್ತುತಿಸಲು ಯೋಗ್ಯನಾಗಿದ್ದಾನೆ. ಆ ದಯಾಳು ಪ್ರಭುವೇ ಈ ಜಗತ್ತಿನಲ್ಲಿ ದಿವ್ಯ ಶಕ್ತಿಯುಳ್ಳ ವಾಯು, ಅಗ್ನಿ, ಸೂರ್ಯ, ಚಂದ್ರ ಮತ್ತು ವಿದ್ಯುತ್ ಮೊದಲಾದ ದೇವತೆಗಳನ್ನೂ ಮತ್ತು ನಮ್ಮ ಶರೀರದಲ್ಲಿಯೂ ವಿದ್ಯೆ ಮೊದಲಾದ ಸದ್ಗುಣಗಳನ್ನೂ ಮನ, ನೇತ್ರ, ಶೋತ್ರ, ಘ್ರಾಣಾದಿ ದೇವತೆಗಳನ್ನೂ ಪ್ರಾಪ್ತಿಗೊಳಿಸಿದ್ದಾನೆ. ಈ ದೇವತೆಗಳ ಸಹಾಯದಿಂದ ನಾವು ನಮ್ಮ ಲೋಕ ಮತ್ತು ಪರಲೋಕ ಸುಧಾರಣೆ ಮಾಡುತ್ತಾ ನಮ್ಮ ಜನ್ಮಗಳನ್ನು ಸಫಲಗೊಳಿಸಿಕೊಳ್ಳಬಹುದು.

- ಸಂಪಾದಕ

ಈ ಪುಟದ ಪ್ರಾಯೋಜಕರು
Sri Vidyabharathi Book Centre, Sringeri
ಶ್ರೀ ಕೃಷ್ಣಸ್ವಾಮಿ, ಕೋಣನಕುಂಟೆ, ಬೆಂಗಳೂರು

CC-0. In Public Domain. Digitized by eGangotri

ಭಗವದ್ವಾಣಿ

ಗೀತಾ ಮಾಹಾತ್ಮ್ಯ

ಏತತ್ಪುಣ್ಯಂ ಪಾಪಹರಂ ಧನ್ಯಂ ದುಃಖಿಪ್ರಕಾಶನಮ್ ।
ಪಠತಾಂ ಶೃಣ್ವತಾಂ ವಾಪಿ ವಿಷ್ಣೋರ್ಮಾಹಾತ್ಮ್ಯಮುತ್ತಮಮ್ ॥ 4 ॥

ಅಷ್ಟಾದಶಪುರಾಣಾನಿ ನವವ್ಯಾಕರಣಾನಿ ಚ ।
ನಿರ್ಮಥ್ಯ ಚತುರೋ ವೇದಾನ್ ಮುನಿನಾ ಭಾರತಂ ಕೃತಮ್ ॥ 5 ॥

ಭಾರತೋದಧಿನಿರ್ಮಥ್ಯ ಗೀತಾನಿರ್ಮಥಿತಸ್ಯ ಚ ।
ಸಾರಮುದ್ ದೃತ್ಯ ಕೃಷ್ಣೇನ ಅರ್ಜುನಸ್ಯ ಮುಖೇ ಧೃತಮ್ ॥ 6 ॥

ಭಗವಾನ್ ವಿಷ್ಣುವಿನ ಈ ಉತ್ತಮ ಮಾಹಾತ್ಮ್ಯ (ಗೀತಾಶಾಸ್ತ್ರ) ಓದುವ ಮತ್ತು ಕೇಳುವವರ ಪುಣ್ಯವನ್ನು ಹೆಚ್ಚಿಸುವಂತಹುದು, ಪಾಪನಾಶಕ, ಧನ್ಯವಾದಕ್ಕೆ ಯೋಗ್ಯ ಮತ್ತು ಸಮಸ್ತ ದುಃಖಿಗಳನ್ನು ದೂರಮಾಡುವಂತಹುದಾಗಿದೆ. ಮುನಿವರ ಶ್ರೀ ವೇದವ್ಯಾಸರು ಹದಿನೆಂಟು ಪುರಾಣಗಳು, ಒಂಭತ್ತು ವ್ಯಾಕರಣಗಳನ್ನು ಮತ್ತು ನಾಲ್ಕು ವೇದಗಳನ್ನು ಮಂಥನಗೈದು ಮಹಾಭಾರತದ ರಚನೆ ಮಾಡಿದರು. ಪುನಃ ಮಹಾಭಾರತರೂಪೀ ಸಮುದ್ರ ಮಂಥನಗೈದು ಪ್ರಕಟವಾದ ಗೀತೆಯನ್ನು ಮಂಥನಗೈದು (ಮೇಲೆ ಹೇಳಿದ) (ಗೀತಾಸಾರ ರೂಪದಲ್ಲಿ) ಅದರ ಅರ್ಥದ ಸಾರವನ್ನು ತೆಗೆದು ಅದನ್ನು ಭಗವಾನ್ ಶ್ರೀಕೃಷ್ಣನು ಅರ್ಜುನನ ಮುಖದಲ್ಲಿ ಹಾಕಿಬಿಟ್ಟನು.

॥ 1-3 ॥

Sri Vidyaprasanna Publications, Bengaluru. Sringeri

ಈ ಪುಟವು ಪ್ರಾಯೋಜಕರು
ಶ್ರೀಮತಿ ಮತ್ತು ಶ್ರೀ ಟಿ.ಬಿ. ಮಾರುತೀಶ, ಬೆಂಗಳೂರು 560 086

CC-0. In Public Domain. Digitized by eGangotri

ಶ್ರೀ ಗಣೇಶ ಪಂಚಕ

ಮುದಾಕರಾತ್ತಮೋದಕಂ ಸದಾ ವಿಮುಕ್ತಿ ಸಾಧಕಂ ।
ಕಲಾಧರಾವತಂಸಕಂ ವಿಲಾಸಿ ಲೋಕರಕ್ಷಕಮ್ ॥
ಅನಾಯಕೈಕನಾಯಕಂ ವಿನಾಶಿತೇಭದೈತ್ಯಕಂ ।
ನತಾಶುಭಾಶುನಾಶಕಂ ನಮಾಮಿ ತಂ ವಿನಾಯಕಂ ॥ ॥ 1 ॥

ಸಂತೋಷದಿಂದ ಕಡುಬನ್ನು ಕೈಯಲ್ಲಿ ಹಿಡಿದಿರುವವನೂ, ಮೋಕ್ಷಸಾಧಕನೂ, ಶಿರಸ್ಸಿನಲ್ಲಿ ಚಂದ್ರನನ್ನು ಧರಿಸಿದವನೂ, ಲೀಲೆಯೆಂದು ತಿಳಿದು ಲೋಕವನ್ನು ರಕ್ಷಿಸುವವನೂ, ಅನಾಥರನ್ನು ಕಾಪಾಡುವವನೂ, ಗಜಾಸುರನನ್ನು ಸಂಹರಿಸಿದವನೂ, ನಮಿಸಿದ ಭಕ್ತರ ಸಂಕಷ್ಟಗಳನ್ನು ಪರಿಹರಿಸುವವನೂ ಆದ ಆ ವಿನಾಯಕನನ್ನು (ನಾನು) ನಮಿಸುತ್ತೇನೆ.

ನಮ್ಮ ಮಾಸಪತ್ರಿಕೆಗಳು

ಸ್ವಯಂಪ್ರಕಾಶ (ಕನ್ನಡ)		ಸದ್ಗುರೂಸ್ ಬ್ಲೆಸ್ಸಿಂಗ್ಸ್ (ಇಂಗ್ಲೀಷ್)	
ಒಂದು ವರ್ಷಕ್ಕೆ	ರೂ. 150.00	ಒಂದು ವರ್ಷಕ್ಕೆ	ರೂ. 220.00
30 ತಿಂಗಳಿಗೆ ಚಂದಾ	ರೂ. 300.00	30 ತಿಂಗಳಿಗೆ ಚಂದಾ	ರೂ. 500.00
ಐದು ವರ್ಷಗಳಿಗೆ	ರೂ. 600.00	ಐದು ವರ್ಷಗಳಿಗೆ	ರೂ. 1000.00

ಸದಸ್ಯತ್ವದ ಮೊಬಲಗನ್ನು ''ಸ್ವಯಂಪ್ರಕಾಶ ಪಬ್ಲಿಕೇಷನ್ಸ್ ಟ್ರಸ್ಟ್'' ಹೆಸರಿಗೆ ಬೆಂಗಳೂರಿನಲ್ಲಿ ಪಾವತಿ ಆಗುವಂತೆ ಚೆಕ್/ಡ್ರಾಫ್ಟ್ ಮೂಲಕ ''ಸ್ವಯಂಪ್ರಕಾಶ ಪಬ್ಲಿಕೇಷನ್ಸ್ ಟ್ರಸ್ಟ್'' ''ಭಕ್ತಿಮಂದಿರಂ'', 1370/ಎಂ, ನೆಹರೂ ರಸ್ತೆ, 4ನೇ ಅಡ್ಡರಸ್ತೆ, 4ನೇ 'ಎ' ಮುಖ್ಯ ರಸ್ತೆ, ಗಿರಿನಗರ, ಬೆಂಗಳೂರು 560 085

ಈ ಪುಟದ ಪ್ರಾಯೋಜಕರು
Sri Vidyabharathi Book Centre, Sringeri
ಶ್ರೀ ಹೆಚ್.ಎಸ್. ಅನಂತ ಸುಬ್ರಾವ್, ಬ್ರಾಹ್ಮಣ ವ್ಯಾಲಿ, ಮಡಿಕೇರಿ

CC-0. In Public Domain. Digitized by eGangotri

ಜಗದ್ಗುರುವಾಣಿ



ಅನಂತಶ್ರೀ ವಿಭೂಷಿತ ಜಗದ್ಗುರು
ಭಾರತೀತೀರ್ಥ ಮಹಾಸ್ವಾಮಿಗಳವರು, ಶೃಂಗೇರಿ

(ಮುಂದುವರೆದುದು)

ಧರ್ಮದ ಆಚರಣೆ

ನಮ್ಮ ಪರಮೇಷ್ಠಿ ಗುರುಗಳು ಶಾಸ್ತ್ರಾಧ್ಯಯನಕ್ಕೆ ಬೆಂಗಳೂರಿನಲ್ಲಿ ಒಂದು ಪಾಠಶಾಲೆಯನ್ನು ಮಾಡಿ, ನಿರಂತರವಾಗಿ ಶಾಸ್ತ್ರಾಧ್ಯಯನ ನಡೆಯುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿದರು. ಇದನ್ನು ಯಾಕೆ ಹೇಳುತ್ತೇನೆ ಅಂದರೆ, ಈ ಮಠದ ಅಧಿಪತಿಗಳಿಗೆ ಆಯಾ ಕಾಲದಲ್ಲಿ ಬರುವ ಧರ್ಮದ ಅವನತಿಯನ್ನು ತಡೆಗಟ್ಟುವುದು, ತಮ್ಮ ಕರ್ತ್ಯವ್ಯ ವಿಶೇಷವಾಗಿದೆ ಎಂಬ ಕರ್ತವ್ಯಪ್ರಜ್ಞೆ ಅನುಸ್ಯೂತವಾಗಿ ಬಂದಿದೆ ಎಂಬುದನ್ನು ಹೇಳಲು ಈ ವಿಚಾರವನ್ನು ಪ್ರಸ್ತಾಪಿಸಿದ್ದೇನೆ. ಹೀಗೆ ನಮ್ಮ ಗುರುಗಳು, ಸಂಸ್ಕೃತ ಪ್ರಚಾರ ಇನ್ನೂ ಕ್ಷೀಣವಾಗುತ್ತಿದೆಯಲ್ಲಾ ಅಂತ 'ಸುರಸರಸ್ವತೀ ಸಭೆ'ಯನ್ನು ಪ್ರಾರಂಭ ಮಾಡಿದರು. ವೇದಗಳು, ವೇದಾಧ್ಯಯನ ಕಡಿಮೆಯಾಗುತ್ತಿದೆಯಲ್ಲಾ ಎಂದು 'ವೇದಪೋಷಣ ಸಭಾ' ಎಂಬುದನ್ನು ಪ್ರಾರಂಭ ಮಾಡಿದರು. ಹಾಗೆ ನಾವು ಶಾಸ್ತ್ರಾಧ್ಯಯನ ಇನ್ನೂ ಕಡಿಮೆಯಾಗುತ್ತಿದೆಯಲ್ಲ ಎಂದು 'ಶಾಸ್ತ್ರಸಂವರ್ಧಿನೀ ಸಭಾ' ಎಂಬ ಸಭೆಯನ್ನು ಪ್ರಾರಂಭ ಮಾಡಿದ್ದೇವೆ. ಇದೆಲ್ಲಾ ನಮ್ಮ ಸನಾತನ ಧರ್ಮದ ರಕ್ಷಣೆಗೆ ನಾವು ಮಾಡಬೇಕಾದದ್ದು, ನಮ್ಮ ಅತ್ಯಗತ್ಯ ಕರ್ತವ್ಯ ಎಂಬುದಕ್ಕಾಗಿ ನಾವು ಮಾಡಿರತಕ್ಕಂತಹುದು. ಇದರಲ್ಲಿ ಶಿಷ್ಯ ಜನರ, ಭಕ್ತ ಜನರ ಸಹಾಯ ಅತ್ಯಗತ್ಯವಾಗಿರುತ್ತದೆ. ಒಂದು ಕಾಲದಲ್ಲಿ ರಾಜಮಹಾರಾಜರು ಗುರುಪೀಠಗಳಿಗೆ ಆಶ್ರಯವನ್ನು ನೀಡುತ್ತಿದ್ದರು. ಈಗ ಆ ರೀತಿಯಾದ ಪರಿಸ್ಥಿತಿಯನ್ನು ನಾವು ನೋಡುವುದಕ್ಕೆ ಸಾಧ್ಯವಿಲ್ಲ. ಆದರೆ ಶಿಷ್ಯವರ್ಗ ಗುರುಪೀಠಕ್ಕೆ ಸಂಪೂರ್ಣ ಸಹಾಯ ಮಾಡಲು ಉದ್ಯುಕ್ತವಾಗಿರುವುದು ಬಹಳ ಮೆಚ್ಚಬೇಕಾದ ವಿಷಯ.

(ಮುಂದುವರೆಯುವುದು)

ಈ ಸಂಚಿಕೆಯ ಪ್ರಾಯೋಜಕರು
Sri Vidyabharathi Book Centre, Sringeri
ಶ್ರೀ ಕಿರಣ್ ಎನ್., ಜೆ.ಪಿ.ನಗರ, ಬೆಂಗಳೂರು

CC-0. In Public Domain. Digitized by eGangotri

ಪರಮಗುರುವಾಣಿ

(ಮುಂದುವರೆದುದು)

ಶ್ರೀದೇವೀ ಪೂಜಾಸ್ತುತಿ

ದೀಪಂ ಸಮುಜ್ವಲಮಹಂ ಪ್ರದದೇ ತಥಾಪಿ
ನಾನೇನ ಗಚ್ಛತಿ ಮದೀಯಹೃದಂಧಕಾರಃ ।
ವಿಶ್ವೇಶಿ ತಾವಕಕಟಾಕ್ಷವಿನಿರ್ಗತಾಸ್ತಾಃ
ಆಪ ಸೃಜಂತು ಮಮ ಹೃತ್ಕಮಲೇ ಪ್ರಕಾಶಂ ॥

ಅಮ್ಮಾ ! ಉಜ್ವಲವಾಗಿ ಪ್ರಕಾಶಿಸುವ ದೀಪವನ್ನು ನಿನ್ನೆದುರಿನಲ್ಲಿಟ್ಟು ಬೆಳಗಿಸುವೆ. ಕೇವಲ ಇದರಿಂದ ನನ್ನ ಹೃದಯದೊಳಗಿನ ಅಜ್ಞಾನವೆಂಬ ಕತ್ತಲೆಯು ದೂರ ವಾಗುವುದಿಲ್ಲ. ಆದರೆ ಸರ್ವತ್ರ ವ್ಯಾಪಕವಾಗಿರುವ ನಿನ್ನ ಕೃಪಾಕಟಾಕ್ಷವು ನನ್ನ ಹೃದಯದಲ್ಲಿ ತಂಪೆರೆದು ಪ್ರಕಾಶವನ್ನುಂಟು ಮಾಡಲಿ ತಾಯೇ!

- ಅಭಿರಾಮ ಭಿಕ್ಷು

ಹರಿಹರಪುರದ ಗೋಶಾಲೆಯಲ್ಲಿ ನಡೆದ ''ಗೋಪೂಜೆ''ಯ ಸಂದರ್ಭ



ಈ ಪುಟದ ಪ್ರಾಯೋಜಕರು
Sri Vidyabharathi Book Centre, Sringeri
ಶ್ರೀ ಎ.ವಿ. ಶೇಷಾಚಲಂ, ಬನಶಂಕರಿ 3ನೇಹಂತ, ಬೆಂಗಳೂರು

Digitized by eGangotri

ವಿದ್ಯುತ್‌ವಾಣಿ

ಸ್ವಾಮೀ ವಿವೇಕಾನಂದರ ನುಡಿಮುತ್ತುಗಳು

ನಮ್ಮ ದುಃಖಿಗಳನ್ನು ಸರ್ವತ್ರ ನಿವಾರಿಸಿಕೊಳ್ಳಲು ಇರುವ ಒಂದೇ ಒಂದು ಮಾರ್ಗವೆಂದರೆ ಅದು ಅಧ್ಯಾತ್ಮಜ್ಞಾನದೆಡೆಗೆ ಸಾಗುವುದೇ ಆಗಿದೆ.

ಯಾರಿಗೆ ತನ್ನ ಮೇಲೆ ತನಗೆ ನಂಬಿಕೆ ಇಲ್ಲವೋ ಅವನಿಗೆ ಪರಮಾತ್ಮನಲ್ಲಿ ನಂಬಿಕೆ ಇಡಲು ಸಾಧ್ಯವಿಲ್ಲ.

ಲೇಖಕ ಮಹಾಶಯರಲ್ಲಿ ವಿನಂತಿ

ಪರಮಪೂಜ್ಯ ಗುರುವರ್ಯರ ಆಶಯದಂತೆ ಅವರ ಆಶೀರ್ವಾದಗಳೊಡನೆ ಲೇಖಕ ಮಹಾಶಯರಿಗೆ ಈ ಮುಂದಿನ ವಿಷಯವನ್ನು ತಿಳಿಸುತ್ತಿದ್ದೇನೆ. ಜನಸಾಮಾನ್ಯರಿಗೆ ವೇದೋಪನಿಷತ್ತುಗಳಲ್ಲಿ ಪ್ರತಿಪಾದಿತ ಭಾರತೀಯ ಸಂಸ್ಕೃತಿಯನ್ನು ಪರಿಚಯ ಮಾಡಿಕೊಡುವ ನಮ್ಮ ಸ್ವಯಂಪ್ರಕಾಶ ಪತ್ರಿಕೆಗೆ, ನೀವು ಉತ್ತಮ ಲೇಖನಗಳನ್ನು ನೀಡಿ ಸಹಕರಿಸುತ್ತಾ ಬಂದಿದ್ದೀರಿ. ದಯವಿಟ್ಟು ಹಿಂದಿನಂತೆ ಪ್ರತಿ ತಿಂಗಳೂ ಲೇಖನಗಳನ್ನು ಕಳುಹಿಸುತ್ತ ಪೂಜ್ಯ ಗುರುವರ್ಯರ ಸದಾಶಯಕ್ಕೆ ನಿಮ್ಮ ಸಹಕಾರವನ್ನು ಸಲ್ಲಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಿಮಗೆ ಪರಿಚಿತರಾದ ಲೇಖಕರು, ನಮಗೆ ಲೇಖನ ಕಳುಹಿಸಲಿ. ಮಹಿಳೆಯರು, ಶಾಲಾ ವಿದ್ಯಾರ್ಥಿಗಳು ನಮ್ಮ ಪತ್ರಿಕೆಗೆ ಸೂಕ್ತವಾದ ಲೇಖನಗಳನ್ನು ಕಳುಹಿಸಿದರೆ ಸ್ಥಳಾವಕಾಶಕ್ಕನುಸಾರವಾಗಿ ಪ್ರಕಟಿಸುತ್ತೇವೆ.

ಶೀಘ್ರವಾಗಿ ಲೇಖನಗಳನ್ನು ಕಳುಹಿಸುವಿರೆಂದು ನಂಬಿ ಎಲ್ಲರಿಗೂ ಹಾರ್ದಿಕ ಅಭಿನಂದನೆ ಸಲ್ಲಿಸುತ್ತೇನೆ.

– ಸಂಪಾದಕ

Sri Vidyabharathi Book Centre, Sringeri

CC-0. In Public Domain. Digitized by eGangotri

ಸದ್ಗುರುವಾಣಿ

ನಿಮ್ಮ ಚಿಂತನೆಗಳ ಬಗ್ಗೆ ಜಾಗೃತರಾಗಿ

ನಮ್ಮ ಉಪನಿಷತ್ತುಗಳು ''ಪ್ರಜ್ಞಾನಂ ಬ್ರಹ್ಮ'' ಎಂದಿವೆ. ಅಂದರೆ ನಮ್ಮಲ್ಲಿರುವ ತಿಳಿದುಕೊಳ್ಳುವ ಶಕ್ತಿಯನ್ನೆ, ಒಳ ಅರಿವನ್ನೆ ಬ್ರಹ್ಮ ಎಂದು ಉಪನಿಷತ್ ತಿಳಿಸುತ್ತಿದೆ.

ಈ ಒಳ ಅರಿವನ್ನು ನಾವು ಅರಿತುಕೊಳ್ಳಬೇಕಾದರೆ ಜೀವನದಲ್ಲಿ ಪ್ರತಿಕ್ಷಣವು ನಾವು ಎಚ್ಚರದಿಂದಿರಬೇಕು.

ನಮ್ಮೆಲ್ಲರ ಜೀವನ ಬಹಳ ಅಮೂಲ್ಯವಾದದ್ದು, ಆದರೆ ಅಷ್ಟೇ ಅನಿತ್ಯ ಹಾಗೂ ಅಸ್ಥಿರವಾದದ್ದು, ಇಂತಹ ಅಮೂಲ್ಯವಾದ ಜೀವನವನ್ನು ನಾವು ಸಾರ್ಥಕ ಪಡಿಸಿಕೊಳ್ಳಬೇಕಾದರೆ ಜೀವನದಲ್ಲಿ ನಾವು ಸದಾ ಜಾಗೃತರಾಗಿರಬೇಕು.

ನಾವು ನಿತ್ಯ ಜೀವನದಲ್ಲಿ ಕೆಲವು ಕಾರ್ಯಗಳನ್ನು ಮಾಡುತ್ತಿರುವಾಗ ಸ್ವಲ್ಪ ಎಚ್ಚರ ತಪ್ಪಿದರೂ ಅದರಿಂದ ಅನಾಹುತವಾಗುತ್ತದೆ. ಇದು ನಮಗೆಲ್ಲರಿಗೂ ಅನುಭವಕ್ಕೆ ಬರುವ ವಿಚಾರ. ಉದಾಹರಣೆಗೆ ಕಡಿದಾದ ದಾರಿಯಲ್ಲಿ ನಡೆಯುತ್ತಿರುವಾಗ ಸ್ವಲ್ಪ ಹೆಜ್ಜೆ ತಪ್ಪಿದರೂ ಅದರಿಂದ ಅನಾಹುತವಾಗುವ ಸಂಭವವಿರುತ್ತದೆ. ಅಂದರೆ ನಾವು ಅನಾಹುತದಿಂದ ತಪ್ಪಿಸಿಕೊಳ್ಳಬೇಕಾದಲ್ಲಿ ಸದಾ ಎಚ್ಚರವಾಗಿರಬೇಕು. ಆದ್ದರಿಂದ ನಾವು ಕಾಯೇನ, ವಾಚಾ, ಮನಸಾ, ಕರ್ಮಗಳನ್ನು ಮಾಡುವಾಗ ಬಹಳ ಎಚ್ಚರದಿಂದಿರಬೇಕು.

ನಾವು ಮಾಡುವ ಎಲ್ಲಾ ಕಾರ್ಯಗಳಿಗೆ ಮೂಲ ನಿಯಂತ್ರಣವಿರುವುದು ನಮ್ಮ ಚಿಂತನೆಗಳಲ್ಲಿ, ನಮ್ಮ ಚಿಂತನೆಗಳಿಂದ ನಮ್ಮ ಜೀವನ ಉಜ್ಜೀವನವಾಗಬಹುದು

ಈ ಪುಟವನ್ನು ಪ್ರಾಯೋಜಿಸಿದವರು
Sri Vidyabharathi Book Centre, Shingeri
ಶ್ರೀಮತಿ ಮತ್ತು ಶ್ರೀ ಎಂ.ಆರ್. ಪ್ರಭಾಕರ್, ಬೆಂಗಳೂರು 560 055

CC-0. Jangamwadi Math Collection. Digitized by eGangotri

ಅಥವಾ ಅಧೋಗತಿಗೂ ಹೋಗಬಹುದು. ನಮ್ಮ ಚಿಂತನೆ ಸರಿಯಾದ ದಿಕ್ಕಿನಲ್ಲಿದ್ದರೆ ನಮ್ಮ ಜೀವನವೂ ಸುಗಮವಾಗಿರುತ್ತದೆ. ನಮ್ಮ ಚಿಂತನೆ ದಾರಿ ತಪ್ಪಿದರೆ ನಮ್ಮ ಬದುಕಿನ ಹಳಿಯು ತಪ್ಪಿ ಹೋಗುತ್ತದೆ. ಆದ್ದರಿಂದ ನಾವೆಲ್ಲರೂ ನಮ್ಮ ಚಿಂತನೆಗಳ ಬಗ್ಗೆ ಸದಾ ಜಾಗೃತರಾಗಿರಬೇಕು. ನಮ್ಮ ಚಿಂತನೆಗಳು ಸದಾ ಆತ್ಮೋನ್ನತಿಗೆ ಪೂರಕವಾಗಿರಬೇಕು, ನಮ್ಮ ಲೌಕಿಕ ಹಾಗೂ ಪಾರಮಾರ್ಥಿಕ ಜೀವನಕ್ಕೆ ಶ್ರೇಯಸ್ಸನ್ನು ತಂದುಕೊಡುವಂತಿರಬೇಕು. ನಮ್ಮಲ್ಲಿ ಅನೇಕರು ತಮ್ಮ ಲೌಕಿಕ ಜೀವನಕ್ಕಾಗಲಿ, ಆಧ್ಯಾತ್ಮಿಕ ಜೀವನಕ್ಕಾಗಲಿ ಉಪಯೋಗಕ್ಕೆ ಬಾರದಂತಹ, ಬದಲಾಗಿ ಇಹ-ಪರಗಳ ಜೀವನಕ್ಕೆ ಹಾನಿಯನ್ನುಂಟು ಮಾಡುವಂತಹ ಚಿಂತನೆಗಳಲ್ಲಿ ತೊಡಗಿರುತ್ತಾರೆ. ಇಂತಹ ವಿಷಯ ಚಿಂತನೆ ಮಾಡುವುದು ಸರ್ವಥಾ ತಪ್ಪು. ಇದು ತಮ್ಮ ಕಾಲ ಮೇಲೆ ತಾವೇ ಚಪ್ಪಡಿ ಎಳೆದುಕೊಂಡಂತೆ; ಇದನ್ನೆ ಗೀತೆಯಲ್ಲಿ ಭಗವಂತ ಆತ್ಮಹಾನಿ ಮಾಡಿಕೊಳ್ಳುವುದು ಎಂದು ಹೇಳಿದ್ದಾನೆ. ಈ ವಿಷಯ ಚಿಂತನೆಯ ಕುರಿತು ಆಚಾರ್ಯ ಶಂಕರರು

ಬಾಹ್ಯೇ ನಿರುದ್ಧೇ ಮನಸಃ ಪ್ರಸನ್ನತಾ ಮನಃ ಪ್ರಸಾದೇ ಪರಮಾತ್ಮದರ್ಶನಮ್ ।
ತಸ್ಮಿನ್ ಸುದೃಷ್ಟೇ ಭವಬಂಧನಾಶೋ ಬಹಿರ್ನಿರೋಧಃ ಪದವೀ ವಿಮುಕ್ತೇಃ ॥

ಎಂದಿದ್ದಾರೆ, ಅಂದರೆ ನಾವು ಅನಗತ್ಯವಾದ ವಿಷಯ ಚಿಂತನೆಗಳನ್ನು ಬಿಟ್ಟರೆ ಮಾತ್ರ ನಮ್ಮ ಮನಸ್ಸು (ಚಿತ್ತ) ಶುದ್ಧವಾಗುತ್ತದೆ. ಚಿತ್ತಶುದ್ಧಿಯಾದಲ್ಲಿ ಮಾತ್ರ ಭಗವಂತನ ಅನುಗ್ರಹ ಪ್ರಾಪ್ತವಾಗುತ್ತದೆ. ಭಗವಂತನ ಅನುಗ್ರಹ ಪ್ರಾಪ್ತವಾದಲ್ಲಿ ಮಾತ್ರ ಈ ಸಂಸಾರ ಬಂಧನವೆನ್ನುವುದು ನಾಶವಾಗುತ್ತದೆ. ಆದ್ದರಿಂದ ಶ್ರೇಯಸ್ಸನ್ನು ಬಯಸುವವರು ಅನಗತ್ಯವಾದ ವಿಷಯ ಚಿಂತನೆಯನ್ನು ಬಿಡಬೇಕು ಎನ್ನುವುದು ಆಚಾರ್ಯರ ಆದೇಶವಾಗಿರುತ್ತದೆ.

ಆದ್ದರಿಂದ ಎಲ್ಲರೂ ತಮ್ಮ ಪಾರಮಾರ್ಥಿಕ ಜೀವನದ ಶ್ರೇಯಸ್ಸಿಗೆ ಪೂರಕವಾಗಿರುವಂತೆ, ಲೌಕಿಕ ಜೀವನದಲ್ಲಿ ಸದಾ ಎಚ್ಚರದಿಂದಿದ್ದು ಸಚ್ಚಿಂತನೆಗಳನ್ನೇ ಮಾಡುತ್ತಾ, ಆ ಒಳ ಅರಿವನ್ನು ಅನುಭವದ ಮೂಲಕ ಅರಿತುಕೊಂಡು ಈ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕು.



Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಪಾದಕೀಯ



''ಗುರುಸೇವಾರತ್ನ'' ''ಸಂಸ್ಕೃತಶ್ರೀ''
ಹರಿಹರಪುರ ಬಿ.ಸುಬ್ರಹ್ಮಣ್ಯಂ

ರಾಷ್ಟ್ರಾದ್ಯಂತ ಭಕ್ತಿ ಆನಂದ, ಉತ್ಸಾಹಗಳನ್ನು ಪಸರಿಸುವ ಚೈತನ್ಯದಾಯಕ ಶರನ್ನವರಾತ್ರಿ, ದೇವಿ ಪೂಜೆ, ವಿಜಯದಶಮಿ, ದೀಪಾವಳಿ ಹಬ್ಬಗಳು ಈ ಜಯನಾಮ ಸಂವತ್ಸರದಲ್ಲಿ ಜಯಶಾಲಿಯಾಗಿ ಪೂರ್ಣಗೊಂಡು ಜನತೆಯಲ್ಲಿ ಹೊಸ ಚೈತನ್ಯವನ್ನು ಮೂಡಿಸುವಲ್ಲಿ ಯಶಸ್ವಿಯಾಗಿವೆ. ಈ ಜಯ ಸಂವತ್ಸರವು ಭಾರತದ ಪಾಲಿಗೆ ಹಲವು ಪ್ರಕಾರಗಳಿಂದ ನವ ನವೋತ್ಸಾಹವನ್ನುಂಟುಮಾಡಿದ ಹೊಸಯುಗದ ಪ್ರಾರಂಭವೆಂದೇ ಹೇಳಬಹುದು.

ರಾಜ ಮಹಾರಾಜರುಗಳ ವೈಭವದ ದಿನಗಳಲ್ಲಿ, ನವರಾತ್ರಿಯ ವಿಜಯದಶಮಿಯಂದು ರಾಜರು ಸೈನ್ಯದೊಂದಿಗೆ ಸೀಮೋಲ್ಲಂಘನ ಮಾಡಿ ಪರ ರಾಜ್ಯದ ಮೇಲೆ ವಿಜಯಯಾತ್ರೆ ಕೈಗೊಳ್ಳುತ್ತಿದ್ದರು. ಅದನ್ನು ನೆನಪಿಗೆ ತರುವ ಘಟನೆಯೊಂದು ಜಯ ಸಂವತ್ಸರದಲ್ಲಿ ಸಂಭವಿಸಿ ಭಾರತಕ್ಕೆ ಸುವರ್ಣಮಯ ಕೀರ್ತಿ ಶಿಖರವನ್ನು ತಂದುಕೊಟ್ಟಿತು. **ಪ್ರಧಾನಿ ನರೇಂದ್ರ ಮೋದಿಯವರು** ನವರಾತ್ರಿಯ ಹಿಂದಿನ ದಿನಗಳಲ್ಲಿಯೇ ಈ ವಿಜಯಯಾತ್ರೆಯನ್ನು ಪ್ರಾರಂಭಿಸಿ ರಾಷ್ಟ್ರದ ಸೀಮೋಲ್ಲಂಘನ ಮಾಡಿ ಚೀನಾ - ಜಪಾನ್‌ಗಳಿಗೆ ಭೇಟಿಕೊಟ್ಟು ತಮ್ಮ ಮಾತಿನ ಮೋಡಿಯಿಂದ ಆ ರಾಷ್ಟ್ರಗಳ ಜನ-ಮನವನ್ನು ಗೆದ್ದು ಸಮಾನತೆಯ ತತ್ತ್ವವನ್ನು ಬಿತ್ತುವುದರಲ್ಲಿ ಯಶಸ್ವಿಯಾದರು.

ನವರಾತ್ರಿಯ ಮುನ್ನಾ ದಿನವೇ ಜಗತ್ತಿನ ದೊಡ್ಡಣ್ಣನೆನಿಸಿರುವ ಅಮೆರಿಕಾ ರಾಷ್ಟ್ರಕ್ಕೆ ಭೇಟಿಯಿತ್ತು ಹೋದ ಕಡೆಗಳಲ್ಲೆಲ್ಲಾ ಸಮಾನತೆಯ ಭಾವವನ್ನು ಮೂಡಿಸಿ ಇನ್ನು ಮುಂದೆ ಜಗತ್ತಿನ ಹಿತ ಸಾಧನೆಗಾಗಿ ಜೊತೆಜೊತೆಯಾಗಿ ಹೆಜ್ಜೆ ಹಾಕುವ ಒಪ್ಪಂದವನ್ನು ಕುದುರಿಸಿದರು. ವಿಜಯ ದಶಮಿಯ ಹೊತ್ತಿಗೆ ಅವರ ಈ ಚೈತ್ರ ಯಾತ್ರೆಯು ಮುಗಿಯುವ ಮೂಲಕ ಆ ದಿನವನ್ನು ಸಾರ್ಥಕಪಡಿಸಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಚೈತ್ರಯಾತ್ರೆ ಯುದ್ಧ, ರಕ್ತಪಾತಗಳಿಂದ ಇನ್ನೊಂದು ರಾಷ್ಟ್ರವನ್ನು ಸೋಲಿಸಿ ವಶಪಡಿಸಿಕೊಳ್ಳುವುದಲ್ಲ. ಬದಲಾಗಿ ಪರರಾಷ್ಟ್ರದೊಡನೆ ಸ್ನೇಹಭಾವ ಬೆಳಸಿ ಅಲ್ಲಿಯ ಜನರ ಹೃದಯವನ್ನು ಗೆದ್ದು ಸಮಾನತೆ, ಐಕ್ಯತೆ ಸಾಧಿಸುವುದು. **'ಕೃಣ್ವಂತೋ ವಿಶ್ವಮಾರ್ಯಂ ....।** ಎಂಬ ವೇದೋಕ್ತಿಯಂತೆ ಇಡೀ ಜಗತ್ತನ್ನೇ ಕೇಂದ್ರವಾಗಿಸಿಕೊಂಡು ಜಗತ್ತೆಲ್ಲಾ ಒಂದೇ ಎಂಬ ಐಕ್ಯತೆಯ ಸಾಧನೆ ಇದೀಗ ಮೋದಿಯವರಿಂದ ಕಾರ್ಯರೂಪಕ್ಕೆ ಬರುತ್ತಿರುವುದು ಒಂದು ಒಳ್ಳೆಯ ಲಕ್ಷಣ.

ವಿಶ್ವವಂದ್ಯ ಆಚಾರ್ಯ ಶಂಕರ ಭಗವತ್ಪಾದರು ವೇದೋಪನಿಷತ್ತುಗಳ ಅಂತರ್ಗತವಾದ ವಿಶ್ವಮಾನವತೆಯನ್ನು ಅದ್ವೈತ ತತ್ತ್ವದ ಮೂಲಕ ಸಮಾನತೆಯ ಸಂದೇಶವನ್ನು ಜಗತ್ತಿಗೆ ನೀಡಿ ವಿಶ್ವವಿಖ್ಯಾತರಾದವರು. ಸ್ವಾಮಿ ವಿವೇಕಾನಂದರು ಈ ಸಂದೇಶವನ್ನು ಪಾಶ್ಚಾತ್ಯ ಜಗತ್ತಿನಲ್ಲಿ ವ್ಯಾಪಕವಾಗಿ ಬಿತ್ತರಿಸಿದರು. ಭಗವಾನ್ ಬುದ್ಧ, ಬಸವಣ್ಣ, ಕಳೆದ ಶತಮಾನದಲ್ಲಿ ಮಹಾತ್ಮ ಗಾಂಧಿ... ಇವರೆಲ್ಲರೂ ಸರ್ವ ಸಮಾನತೆಯ ಹರಿಕಾರರೇ.

ಈ ಸಲ ರಾಜ್ಯೋತ್ಸವಕ್ಕೆ ಮೊದಲು ಮೈಸೂರು ದಸರಾ ವಿಜಯದಶಮಿಯ ಉತ್ಸವದ ಸಮಾರಂಭದಲ್ಲಿ **ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು** ಹೇಳಿದ **''ಎಲರನ್ನೂ ಒಳಗೊಂಡ ಸಮಾಜವನ್ನು ಕಟ್ಟೋಣ''** ಎಂಬುದು ಈ ರಾಜ್ಯೋತ್ಸವ ಸಂದರ್ಭದ ಪ್ರತಿಜ್ಞಾ ವಾಕ್ಯವಾಗಬೇಕು. ದೀನರು, ದುರ್ಬಲರು ಮುಂತಾದ ದಲಿತ ವರ್ಗದವರೂ ಸೇರಿದ ಸರ್ವ ಸಮಾನತೆಯ ಸಮಾಜ ನಿರ್ಮಾಣದ ಕನಸನ್ನು ಕರ್ನಾಟಕದಲ್ಲಿ ನನಸು ಮಾಡುವ ಸಾಮರ್ಥ್ಯ ಸಿದ್ದರಾಮಯ್ಯನವರಿಗೆ ಇದೆ. ಅವರು ಅಧಿಕಾರಕ್ಕೆ ಬಂದಾಗಿನಿಂದ ಅದನ್ನು ಕಾರ್ಯರೂಪಕ್ಕೆ ತರುವಲ್ಲಿಕೆಲಸ ಮಾಡುತ್ತಲೂ ಇದ್ದಾರೆ. ಈ ಕಾರ್ಯದಲ್ಲಿಎಲ್ಲರೂ ಅವರಿಗೆ ಪ್ರಾಮಾಣಿಕವಾಗಿ ಬೆಂಬಲ ನೀಡುವುದು ಅತ್ಯಗತ್ಯ.

ಸಿದ್ದರಾಮಯ್ಯನವರು ಹೇಳಿರುವ ಮಾತುಗಳೂ ಸಹ ವೇದೋಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವಂಥವೇ ಆಗಿದೆ. ಉದಾಹರಣೆಗೆ ತೈತ್ತೀರಿಯೋಪನಿಷತ್ತಿನ ಪ್ರಾರಂಭದ ಮಂತ್ರವೇ **''ಸಹನಾವವತು .....''** ನಾವೆಲ್ಲರೂ ಸೇರಿ ಜ್ಞಾನ ಸಂಪಾದಿಸೋಣ ಎಂದೇ ಕರೆ ಕೊಡುತ್ತದೆ.

ಧರ್ಮ ಸಮ್ಮತವಾದ, ಸಾಮಾಜಿಕ ಹಿತಕಾರಿಯಾದ ಕೆಲಸದಲ್ಲಿ ಈ ಪ್ರಜಾಪ್ರಭುತ್ವದಲ್ಲಿ ಯಾವುದೇ ಪಕ್ಷದ ಮುಖಂಡರೇ ಆಗಲಿ ತೊಡಗಿಕೊಂಡಲ್ಲಿ ಅದನ್ನು ಪ್ರೋತ್ಸಾಹಿಸಬೇಕಾದ್ದು ನಮ್ಮ ಧರ್ಮ. ಈ ಕಾರ್ಯದಲ್ಲಿಸಿದ್ದರಾಮಯ್ಯನವರು ಯಶಸ್ವಿಯಾಗಲೆಂದು ಹಾರೈಸೋಣ.

ಈ ಸಂದರ್ಭದಲ್ಲಿ ಮುಖ್ಯವಾಗಿ ಎಲ್ಲರೂ ಗಮನಿಸಬೇಕಾದ ಮುಖ್ಯ ವಿಷಯವೆಂದರೆ ಸಾಮಾಜಿಕ ಅಭಿವೃದ್ಧಿಯಲ್ಲಿಮೂಲಧಾತುವಾದ ಶಿಕ್ಷಣ ವ್ಯವಸ್ಥೆ ಬ್ರಿಟಿಷ್ ಪೂರ್ವ ಭಾರತದಲ್ಲಿ ಹೇಗಿದ್ದಿತು? ಎಂಬುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ಪ್ರಚಲಿತವಿರುವಂತೆ ಅಥವಾ ಒಂದು ವರ್ಗದವರು ಮೇಲಿಂದ ಮೇಲೆ ಪ್ರಚಾರ ಮಾಡುತ್ತಿರುವಂತೆ ವಿದ್ಯೆ ಎಂಬುದು ಮುಂದುವರಿದವರ ಏಕಸ್ವಾಮ್ಯತೆಗೆ ಒಳಪಟ್ಟಿತ್ತು. ವಿಪ್ರವರ್ಗದವರು, ಕೆಳ ಜಾತಿಯವರು ವಿದ್ಯೆ ಕಲಿಯದಂತೆ ನಿರ್ಬಂಧಿಸಿದ್ದರು, ಅದರಿಂದಾಗಿ ಅವರೆಲ್ಲ ವಿದ್ಯಾ ವಿಹೀನರಾಗಿ ತೀರಾ ಹಿಂದುಳಿದುದು ರಾಷ್ಟ್ರದ ಪ್ರಗತಿಗೆ ಮಾರಕವಾಯಿತು... ಎಂಬಿತ್ಯಾದಿ ಉಗ್ರಟೀಕೆಗಳ ಪೊಳ್ಳುತನವನ್ನು ಬಯಲು ಮಾಡುವ ಸಮರ್ಥ ಆಧಾರವೇ **''ಬ್ರಿಟಿಷ್ ಪೂರ್ವ ಭಾರತದಲ್ಲಿ ಶಿಕ್ಷಣ ವ್ಯವಸ್ಥೆ''** ಎಂಬ ಸರ್ವೇಕ್ಷಣಾ ವರದಿ. ಈ ಸರ್ವೇಕ್ಷಣವನ್ನು ಮಾಡಿಸಿದವರು **ರಾಷ್ಟ್ರಪಿತ ಮಹಾತ್ಮ ಗಾಂಧೀಜಿ**ಯವರು. ಇದು ನಡೆದದ್ದು ಕಳೆದ ಶತಮಾನದ ಪೂರ್ವಾರ್ಧದಲ್ಲಿ. ಮೂರು ಶತಮಾನಕ್ಕೂ ಹಿಂದೆ ಭಾರತದಲ್ಲಿ ವೇದ - ಧರ್ಮಶಾಸ್ತ್ರಗಳನ್ನು ಬಿಟ್ಟು ಮುಖ್ಯವಾದ ಇತರ ಎಲ್ಲ ವಿಭಾಗಗಳಲ್ಲಿ ನಿಮ್ನ ವರ್ಗದವರೂ ಸೇರಿ ಶೂದ್ರವರ್ಗದ ವಿದ್ಯಾರ್ಥಿಗಳು, ಅಧ್ಯಾಪಕರ ಸಂಖ್ಯೆಯೇ ಅಧಿಕವಾಗಿತ್ತೆಂಬುದನ್ನು ಈ ಸರ್ವೇಕ್ಷಣದ ವರದಿ ಸ್ಪಷ್ಟಗೊಳಿಸುತ್ತದೆ. ಈ ಮಹತ್ವದ ಲೇಖನವನ್ನು **'ಸ್ವಯಂಪ್ರಕಾಶ'**ದಲ್ಲಿ ಪ್ರಕಟಿಸಲಾಗುತ್ತಿದೆ. ಓದುಗರು ಈ ಲೇಖನವನ್ನು ಪೂರ್ತಿಯಾಗಿ ಓದಿದಾಗ ಆಶ್ಚರ್ಯ ಪಡುವಂತಹ ಮಹತ್ವದ ಸಂಗತಿಗಳು ಅರಿವಾಗುತ್ತವೆ. ಅಲ್ಲದೆ ವಿದ್ಯಾಕ್ಷೇತ್ರದಲ್ಲಿ ಈ ಎಲ್ಲ ಹಗರಣಗಳಿಗೆ ಕಾರಣರಾದವರು ಬ್ರಿಟಿಷ್ ಆಳರಸರೇ ಹೊರತು ಉಚ್ಚ ವರ್ಗದವರಲ್ಲ ಎನ್ನುವುದನ್ನು ಈ ವರದಿ ಸ್ಪಷ್ಟವಾಗಿ ಸಾಬೀತು ಪಡಿಸುತ್ತದೆ. ಅಷ್ಟೇ ಅಲ್ಲ ಈಗ ವಿದ್ಯೆಯಲ್ಲಿ ಹಿಂದುಳಿದಿರುವವರಿಗೆ ತಮ್ಮ ಕುಲದವರು ಬ್ರಿಟಿಷ್ ಪೂರ್ವದಲ್ಲಿ ವಿದ್ಯಾವಂತರಾಗಿದ್ದರೆಂಬ ಸತ್ಯವನ್ನು ಮನಗಾಣಿಸಿದಾಗ ಅವರಲ್ಲಿ ಕಲಿಕೆಯ ಬಗ್ಗೆ ಹೊಸ ಹುರುಪು, ಶ್ರದ್ಧೆಗಳು ಹುಟ್ಟಲು ಕಾರಣವಾಗುತ್ತವೆ.

ಹಿಂದೆ ಸ್ಮೃತಿಗಳು ಶೂದ್ರರು ಮತ್ತು ಕೆಳಜಾತಿಯವರಿಗೆ ವಿದ್ಯೆಯನ್ನು ನಿಷೇಧಿಸಿದ್ದುದು ಆಯಾ ಕಾಲದಲ್ಲಿ ಪ್ರಚಲಿತವಿದ್ದ ಪರಿಸ್ಥಿತಿಗನುಗುಣವಾಗಿದ್ದಿತೇ ಹೊರತು ಅದು ಸಾರ್ವಕಾಲಿಕವೇನಲ್ಲ ಮತ್ತು ಸ್ಮೃತಿಗಳ ಆ ನಿಷೇಧಗಳಿಗೆ ಅಗತ್ಯವಾದ ವೇದಗಳ ಆಧಾರವೂ ಇಲ್ಲ ಎಂಬುದನ್ನು ಉಪನಿಷದ್ವಾಕ್ಯ ಮತ್ತು 1200 ವರ್ಷಗಳ ಹಿಂದೆಯೇ ಆಚಾರ್ಯ ಶಂಕರರು ಹೇಳಿರುವ **''ಸರ್ವೇಷಾಂ ಅಧಿಕಾರೋಸ್ತಿ ವಿದ್ಯಾಯಾಂ''** ಎಂಬ ಭಾಷ್ಯ ಪಂಕ್ತಿಯಿಂದಲೂ ತಿಳಿಯಬಹುದು.

ಸ್ವಾತಂತ್ರ್ಯ ಬಂದ ಮೇಲೆ ಜಾತಿ ವಿನಾಶದ ಕೂಗು ಒಂದು ಫ್ಯಾಷನ್ ಆಗಿ ಹೋಗಿದೆ. ಕಾರ್ಯತಃ ಅದನ್ನು ಸಾಧಿಸುವ ಯಾವ ಸಣ್ಣ ಪ್ರಯತ್ನವೂ ನಡೆದಿಲ್ಲ. ಬದಲಾಗಿ ಶಿಕ್ಷಣ, ಉದ್ಯೋಗ, ಚುನಾವಣೆ ಹೀಗೆ ಎಲ್ಲ ರಂಗಗಳಲ್ಲಿಯೂ ಜಾತಿ ಮೀಸಲಾತಿಯನ್ನು ಕಾನೂನು ಮೂಲಕವೇ ಸ್ಥಿರಗೊಳಿಸಲಾಗುತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಾತಿ ಎಂಬುದು ಎಂದಿಗಾದರೂ ವಿನಾಶವಾಗುತ್ತದೋ, ಇಲ್ಲವೋ, ಹೇಗಾದರಿರಲಿ, ಆದರೆ ನೀತಿ ಮಾತ್ರ ಸರ್ವತ್ರ ನೆಲೆಯಾಗಿರಲಿ. ನೀತಿ ಎಂದರೆ ಎಲ್ಲರೂ ಪರಸ್ಪರ ಸಹೋದರ ಭಾವದಿಂದ ನಡೆದುಕೊಳ್ಳುವುದು. ತ್ರೇತಾಯುಗದದಲ್ಲಿ ಶ್ರೀರಾಮಚಂದ್ರನು ವಾನರರನ್ನು, ಜಂಬೂಕರನ್ನು ಮಾನವ ಜನಾಂಗದೊಡನೆ ಸಮಾನ ಸ್ಥಿತಿಗೆ ತಂದು ಸರ್ವ ಸಮಾನತೆಯ ಮೇಲ್ಪಂಕ್ತಿ ಹಾಕಿಕೊಟ್ಟ. ದ್ವಾಪರ ಯುಗದ ಭಗವಾನ್ ಶ್ರೀಕೃಷ್ಣನು ಗೊಲ್ಲರು, ಗೋವಳರು ಮುಂತಾದ ಕೆಳವರ್ಗದವರನ್ನು ಮೇಲಕ್ಕೆ ತಂದು ಸಮಾನತೆಯ ಸಮಾಜವನ್ನು ರೂಪಿಸಿದ. ಕಲಿಯುಗದಲ್ಲಿ ಭಗವಾನ್ ಬುದ್ಧನೂ ಅದೇ ಕೆಲಸ ಮಾಡಿದ.

ಆದ್ದರಿಂದ ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎಲ್ಲರಿಂದ ಕೂಡಿದ ಸಮಾಜವನ್ನು ಕಟ್ಟುವ ಸಂಕಲ್ಪ ಮಾಡಿರುವುದು ಎಲ್ಲ ರೀತಿಯಿಂದಲೂ ಉತ್ತಮ ಕಾರ್ಯವಾಗಿದೆ. ಈ 60ನೇ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಇದೊಂದು ಸಂಕಲ್ಪವಾಕ್ಯವಾಗಿ ಸಾಧನೆಯ ಮಾರ್ಗದಲ್ಲಿ ಸಾಗಲೆಂದು ಆಶಿಸೋಣ.

॥ ಸರ್ವತ್ರ ಸುಖೀ ಭವತು ಲೋಕಃ ॥

ಶ್ರೀಮಠದ ಪಂಚಾಂಗ

ಶ್ರೀ ಜಯ ಸಂವತ್ಸರ ಮಾರ್ಗಶಿರ - ಪುಷ್ಯಮಾಸ - ಡಿಸೆಂಬರ್ 2014

ಮಾರ್ಗಶಿರ ಮಾಸ

02-12-2014	ಮಂಗಳವಾರ	ಏಕಾದಶೀ, ಗೀತಾ ಜಯಂತಿ
04-12-2014	ಗುರುವಾರ	ಪ್ರದೋಷ
05-12-2014	ಶುಕ್ರವಾರ	ಶ್ರೀ ದತ್ತಾತ್ರೇಯ ಜಯಂತಿ, ಚತುರ್ದಶೀ, ಶ್ರೀಮಠದ ಶ್ರೀಲಕ್ಷ್ಮೀನೃಸಿಂಹ ಸ್ವಾಮಿಗೆ ವಿಶೇಷ ಪೂಜೆ, ಶ್ರೀಲಕ್ಷ್ಮೀನರಸಿಂಹ ಹೋಮ
09-12-2014	ಮಂಗಳವಾರ	ಸಂಕಷ್ಟಹರ ಚತುರ್ಥೀ, ಶ್ರೀಮಠದ ಶ್ರೀ ಕ್ಷಿಪ್ರವರದ ಗಣಪತಿ ಸನ್ನಿಧಿಯಲ್ಲಿ ಸಂಕಷ್ಟಹರ ಗಣಪತಿ ವ್ರತ.
18-12-2014	ಗುರುವಾರ	ಏಕಾದಶೀ
19-12-2014	ಶುಕ್ರವಾರ	ಪ್ರದೋಷ
22-12-2014	ಸೋಮವಾರ	ಎಳ್ಳಮವಾಸ್ಯೆ

CC-O. Mumukshu Bhawan Varanasi Collection.

CC-0. In Public Domain. Digitized by eGangotri

ಸುದ್ದಿ ಸಮಾಚಾರಗಳು

ಶ್ರೀ ಆದಿ ಶಂಕರಾಚಾರ್ಯ ಲಕ್ಷ್ಮೀನೃಸಿಂಹ ಪೀಠಮ್
ಶ್ರೀ ಮಠ, ಹರಿಹರಪುರ

ಎಲ್ಲರಿಗೂ ನಮಸ್ಕಾರಗಳು,

ನವರಾತ್ರಿಯ ಮಹೋತ್ಸವ ಮತ್ತು ದೀಪಾವಳಿ ಹಬ್ಬದ ನಂತರ ಶ್ರೀ ಶ್ರೀಗಳು ತಮ್ಮ ಧರ್ಮಯಾತ್ರೆಯನ್ನು ಪ್ರಾರಂಭಿಸಿ ನವೆಂಬರ್ ತಿಂಗಳಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ಬೆಂಗಳೂರು, ಕರ್ನೂಲು, ವಿಜಯವಾಡ ಮತ್ತು ವಿಶಾಖಪಟ್ಟಣ ನಗರಗಳನ್ನು ಸಂದರ್ಶಿಸಿ ಶಿಬಿರ ಕಾರ್ಯಗಳನ್ನು ಪೂರ್ಣಗೊಳಿಸಿದರು. ಈಗ ಡಿಸೆಂಬರ್ 2ರಂದು ಹರಿಹರಪುರಕ್ಕೆ ಮರಳಿ ಬರಲಿದ್ದಾರೆ. ಪುನಃ ಡಿಸೆಂಬರ್ 15ಕ್ಕೆ ಧರ್ಮಯಾತ್ರೆಯನ್ನು ಮುಂದುವರೆಸುತ್ತಾ, ಮೈಸೂರು, ಕೋಯಮತ್ತೂರು, ಈರೋಡ್ ಶಿಬಿರಗಳಲ್ಲಿ ಭಾಗವಹಿಸಿ, ಡಿಸೆಂಬರ್ 27ಕ್ಕೆ ಚೆನ್ನೈನ ಅಂಬತ್ತೂರ್‌ಗೆ ಬರಲಿದ್ದಾರೆ. ಹೊಸವರುಷದ ಆಚರಣೆಯನ್ನು ಚೆನ್ನೈನಲ್ಲಿ ನೆರವೇರಿಸುವ ಪರಂಪರೆಯನ್ನು ಮುಂದುವರೆಸಲು ಶ್ರೀ ಶ್ರೀಗಳು ಈ ವರ್ಷವೂ ಸಹ ಜನವರಿ ಮೊದಲನೆಯ ವಾರದಲ್ಲಿ ಅಡ್ಯಾರ್ ಅನಂತ ಪದ್ಮನಾಭಸ್ವಾಮಿ ಆಲಯದಲ್ಲಿದ್ದು, ತದನಂತರ ಹರಿಹರಪುರಕ್ಕೆ ಮರಳಿ ಬರುವ ಕಾರ್ಯಕ್ರಮವಿದೆ.

ದೇವಾಲಯದ ಪುನರ್ನಿರ್ಮಾಣ ಕಾರ್ಯವು ಪ್ರಗತಿಯಲ್ಲಿ ಸಾಗುತ್ತಿದೆ. ಶ್ರೀ ಶ್ರೀಗಳ ನಿರ್ದೇಶನದಂತೆ ಅತಿಷ್ಠಾನಗಳ ಪುನರ್ನಿರ್ಮಾಣದ ಕೆಲಸವೂ ಆಗುತ್ತಿದೆ. ಸ್ವಯಂಪ್ರಕಾಶ ವೇದ ವಿಜ್ಞಾನ ಪೀಠವು ತನ್ನ ಪಾಠ್ಯಕ್ರಮದ ಜೊತೆ ಮೆಲ್ಲಮೆಲ್ಲಗೆ ಲಯವನ್ನು ಕಂಡುಕೊಳ್ಳುತ್ತಿದೆ. ಮುಂಬರುವ ಹೊಸ ವರ್ಷದ ಸಂಚಿಕೆಯಲ್ಲಿ **'ವೇದಪಾಠಶಾಲೆಯಲ್ಲಿ ಒಂದು ದಿನ'**ದ ಕಾರ್ಯಕ್ರಮವನ್ನು ಕುರಿತು ವಿವರವಾದ ವರದಿಯನ್ನು ಚಿತ್ರಗಳ ಸಹಿತ ಪ್ರಕಟಿಸಲಿದ್ದೇವೆ.

ಶ್ರೀ ಶ್ರೀಗಳ ಆಶೀರ್ವಾದಗಳೊಂದಿಗೆ

ಪಿ. ಎನ್. ವಿಶ್ವನಾಥನ್
ಆಡಳಿತಾಧಿಕಾರಿ, ಶ್ರೀಮಠ, ಹರಿಹರಪುರ

Sri Vidyabharathi Book Centre, Sringeri

CC-0. In Public Domain. Digitized by eGangotri



ಶ್ರೀ ರಮಣ ಮಹರ್ಷಿ

ಪ್ರಶ್ನೋತ್ತರ ಮಾಲಿಕೆ –೬೨

(ಮುಂದುವರೆದುದು)

ಗ್ರಂಥ ಕೃಪೆ: ಶ್ರೀ ರಮಣಾಶ್ರಮ, ತಿರುವಣ್ಣಾಮಲೈ

ಶಿಷ್ಯ: ನಾನು ಆಗ ಇದ್ದೆ, ಈಗ ಇದ್ದೇನೆ, ನಿದ್ರೆಯಲ್ಲಿ ಇದ್ದವರಾರು ನನಗೆ ತಿಳಿಯದು.

ಮಹರ್ಷಿ: ಅದು ಹಾಗೆಯೇ ಸರಿ. ಎಚ್ಚೆತ್ತ ನಂತರ ಮನುಷ್ಯನು ಗಾಢ ನಿದ್ರೆಯಲ್ಲಿ ತನಗೆ ಏನೂ ತಿಳಿಯುತ್ತಿರಲಿಲ್ಲ ಎನ್ನುತ್ತಾನೆ. ಈಗ ಜಗತ್ತಿನ ವಸ್ತುಗಳನ್ನು ನೋಡುತ್ತಾನೆ. ತಾನು ಅಲ್ಲಿರುವುದನ್ನು ತಿಳಿಯುತ್ತಾನೆ. ಆದರೆ ನಿದ್ರೆಯಲ್ಲಿ ವಸ್ತು ವಿಷಯಗಳಿರಲಿಲ್ಲ – ನೋಡುತ್ತಿರುವವನೂ ಇರಲಿಲ್ಲ. ಈಗ ಮಾತನಾಡುತ್ತಿರುವವನೇ ನಿದ್ರೆಯಲ್ಲೂ ಇದ್ದವನು. ಈ ಎರಡು ಅವಸ್ಥೆಗಳಿಗಿರುವ ವ್ಯತ್ಯಾಸವೇನು? ವಸ್ತು ವಿಷಯಗಳು, ಇಂದ್ರಿಯ ವ್ಯಾಪಾರಗಳು ಈಗ ಇವೆ, ನಿದ್ರೆಯಲ್ಲಿ ಇವು ಇರಲಿಲ್ಲ. ಈ ನಡುವೆ ಅಹಂ ಎಂಬ ಹೊಸದೊಂದು ಹುಟ್ಟಿಕೊಂಡು ಇಂದ್ರಿಯಗಳ ಮೂಲಕ ವಸ್ತುಗಳನ್ನು ನೋಡುತ್ತಿದೆ. ದೇಹದೊಡನೆ ತನ್ನನ್ನು ಬಂಧಿಸಿಕೊಂಡು – ಅಹಂ ಎನ್ನುವುದೇ ಆತ್ಮ ಎನ್ನುತ್ತಿದೆ. ಸತ್ಯ ಸಂಗತಿಯೆಂದರೆ ಗಾಢ ನಿದ್ರೆಯಲ್ಲಿ ಅಸ್ತಿತ್ವದಲ್ಲಿದ್ದ ಆತ್ಮವೇ ಈಗಲೂ ಇರುವುದು. ಆತ್ಮವು ಅವಿಕಾರಿ. ನಡುವೆ ಬಂದುದು ಅಹಂ ಮಾತ್ರ. ಮೇಲೆ ಏಳುವುದು, ಮುಳುಗುವುದು ಈ ಅಹಂ. ಬದಲಾವಣೆ ಹೊಂದದೆ ಶಾಶ್ವತವಾಗಿರುವುದೇ ಆತ್ಮವಸ್ತು.

ಶ್ರೀ ಪ್ರಕಾಶರಾವ್: ಮಾಯೆಯ ಮೂಲ ಕಾರಣ ಯಾವುದು?

ಮಹರ್ಷಿ: ಮಾಯೆ ಎಂದರೇನು?

ಶಿಷ್ಯ: ಮಾಯೆ ಎಂದರೆ ತಪ್ಪು ತಿಳಿವಳಿಕೆ – ಭ್ರಮೆ.

ಮಹರ್ಷಿ: ಭ್ರಮೆ ಯಾರಿಗೆ? ಭ್ರಮಿತನಾಗುವ ವ್ಯಕ್ತಿಯೊಬ್ಬನಿರಬೇಕಲ್ಲ. ಭ್ರಮೆ ಎಂದರೆ ಅಜ್ಞಾನ. ಅಜ್ಞಾನದಿಂದ ಆವೃತ್ತವಾದ ಆತ್ಮವು ವಸ್ತುಗಳನ್ನು ಕಲ್ಪಿಸಿ ನೋಡುತ್ತದೆ. ವಸ್ತು ವಿಷಯಗಳೇ ಇಲ್ಲದ ಮೇಲೆ ಮಾಯೆ ಇರುವುದು ಹೇಗೆ ಸಾಧ್ಯ? ಮಾಯೆ ಎಂದರೆ **ಯಾ ಮಾ** – ಯಾವುದು ಇಲ್ಲವೋ ಅದು. ಯಾವುದು ನಿಜವಾಗಿ ಇದೆಯೋ ಅದು ಆತ್ಮ. ನಾನು ವಸ್ತುಗಳನ್ನು ನೋಡುತ್ತೇನೆ ಎಂದು ನೀವು

Sri Vidyabharathi Book Centre, Sringeri

CC-0. In Public Domain. Digitized by eGangotri

ಹೇಳಿದರೆ ಅಥವಾ ಸತ್ಯ ವಸ್ತುವನ್ನು ನಾನು ನೋಡುತ್ತಿಲ್ಲ ಎಂದರೆ, ಎರಡು ಆತ್ಮಗಳಿದ್ದಂತೆ ಆಯಿತು. ನೋಡುವವನು ನೋಡುವ 'ವಸ್ತುಗಳು'. ತನ್ನಲ್ಲಿ ಎರಡು ಆತ್ಮಗಳಿವೆ ಎಂದು ಯಾರೂ ಒಪ್ಪುವುದಿಲ್ಲ. ಎಚ್ಚೆತ್ತ ಮನುಷ್ಯನು, ಗಾಢ ನಿದ್ರೆ ಮಾಡಿದವನು ನಾನೇ ಆದರೆ ನನಗೆ ಅದರ ಅರಿವಿರಲಿಲ್ಲ ಎನ್ನುತ್ತಾನೆ. ನಿದ್ರಿಸುತ್ತಿದ್ದವನು ಬೇರೆ ಎಂದು ಅವನು ಹೇಳುವುದಿಲ್ಲ, ಇರುವುದು ಒಂದೇ ಆತ್ಮ ಅದು ಯಾವಾಗಲೂ ಎಚ್ಚೆತ್ತಿದೆ, ಅದು ಅವಿಕಾರಿ, ಆತ್ಮವಲ್ಲದೆ ಬೇರೆ ಏನು ಇಲ್ಲ.

ಶಿಷ್ಯ: ಸೂಕ್ಷ್ಮ ಶರೀರ ಎಂದರೇನು?

ಮಹರ್ಷಿ: ಸ್ವಪ್ನದಲ್ಲಿ ಒಂದು ದೇಹ ನಿಮಗಿತ್ತಲ್ಲವೆ? ಹಾಸಿಗೆಯಲ್ಲಿ ಮಲಗಿದ್ದ ದೇಹಕ್ಕಿಂತ ಅದು ಬೇರೆಯಲ್ಲವೆ?

ಶಿಷ್ಯ: ಮರಣದ ನಂತರ ನಲವತ್ತು ವರುಷ ಈ ಸೂಕ್ಷ್ಮ ದೇಹ ಇರುತ್ತದೆ ಎನ್ನುತ್ತಾರೆ.

ಮಹರ್ಷಿ: ಪ್ರಕೃತ ಶರೀರದಲ್ಲಿ, ಸ್ವಪ್ನದಲ್ಲಿನ ದೇಹ ಸೂಕ್ಷ್ಮವಾದುದು ಎನ್ನುವಿರಿ. ನಿದ್ರೆಯಲ್ಲಿದ್ದಾಗ ಹಾಗೆ ಹೇಳುವಿರಾ? ಈಗ ಸೂಕ್ಷ್ಮವೆನಿಸುವುದು ಆಗ ನಿಜವೆಂದೇ ಎನಿಸುತ್ತದೆ. ಆಗಿನ ದೃಷ್ಟಿಯಲ್ಲಿ ಈ ದೇಹವೇ ಸೂಕ್ಷ್ಮ ಶರೀರ. ಒಂದು ಸೂಕ್ಷ್ಮ ಶರೀರಕ್ಕೂ ಮತ್ತೊಂದಕ್ಕೂ ವ್ಯತ್ಯಾಸವೇನು? ಯಾವ ವ್ಯತ್ಯಾಸವೂ ಇಲ್ಲ.

ಮಿ. ಪಾಲ್ ಬ್ರಂಟನ್: ಸತ್ಯದಲ್ಲಿ ತರತಮಗಳಿವೆ.

ಮಹರ್ಷಿ: ಸ್ವಪ್ನ ದೇಹವು ಅಸತ್ಯ ಎಂದು ಈಗ ಹೇಳುವುದು, ಈ ದೇಹ ಮಿಥ್ಯೆ ಎಂದು ಸ್ವಪ್ನದಲ್ಲಿ ಹೇಳುವುದು ಎರಡೂ ಒಂದೇ. ಅದರಲ್ಲಿ ತರತಮವಿಲ್ಲ. ಯಾವಾಗಲೂ ಇರುವುದು ಆತ್ಮವೊಂದೇ.

ಮುಂದುವರೆಯುವುದು...

ಆಡಿಯೋ, ವೀಡಿಯೋ ಸಿಡಿ/ ಡಿವಿಡಿಗಳು

1. ಹರಿಹರಪುರ - ಒಂದು ಪವಿತ್ರ ಕ್ಷೇತ್ರ (ಶ್ರೀಮಠದ ಬಗ್ಗೆ ಇಂಗ್ಲೀಷ್‌ನಲ್ಲಿ ಸಾಕ್ಷ್ಯಚಿತ್ರ)
2. ಶಿವಾನಂದ ಲಹರಿ
3. ನಾದ ನಮನ
4. ಶಂಕರ ಸ್ತೋತ್ರಮಾಲಾ
5. ಜಯ ಜಯ ಲಕ್ಷ್ಮೀನರಸಿಂಹ

ಪ್ರತಿ ಸಿಡಿಯ ಬೆಲೆ ರೂ. 50/-

ಸದಸ್ಯತ್ವದ ಮೊಬಲಗನ್ನು ''ಸ್ವಯಂಪ್ರಕಾಶ ಪಬ್ಲಿಕೇಷನ್ಸ್ ಟ್ರಸ್ಟ್'' ಹೆಸರಿಗೆ ಬೆಂಗಳೂರಿನಲ್ಲಿ ಪಾವತಿ ಆಗುವಂತೆ ಚೆಕ್/ಡ್ರಾಫ್ಟ್ ಮೂಲಕ ''ಸ್ವಯಂಪ್ರಕಾಶ ಪಬ್ಲಿಕೇಷನ್ಸ್ ಟ್ರಸ್ಟ್'' ''ಭಕ್ತಿಮಂದಿರಂ'', 1370/ಎಂ, ನೆಹರೂ ರಸ್ತೆ, 4ನೇ ಅಡ್ಡರಸ್ತೆ, 4ನೇ 'ಎ' ಮುಖ್ಯ ರಸ್ತೆ, ಗಿರಿನಗರ, ಬೆಂಗಳೂರು 560 085

Sri Vidyabharathi Book Centre, Sringeri

CC-0. Mumukshu Bhawan Varanasi Collection. Digitized by eGangotri

ಸುಭಾಷಿತಗಳು

– ಶ್ರೀ ಎಂ.ಆರ್. ಪ್ರಭಾಕರ ಶಾಸ್ತ್ರಿ, ಬೆಂಗಳೂರು

ಶ್ಲೋಕ 3

ವಿದ್ಯಾ ದದಾತಿ ವಿನಯಮ್ ।
ವಿನಯಾತಿ ಯಾತಿ ಪಾತ್ರತಾಮ್ ।
ಪಾತ್ರತ್ವಾತ್ ಧನಮಾಪ್ನೋತಿ ।
ಧನಾತ್ ಧರ್ಮಮ್ ತತಃ ಸುಖಮ್ ।।

ಅರ್ಥ : ವಿದ್ಯೆಯು ವಿನಯವನ್ನು ಕೊಡುತ್ತದೆ. ವಿದ್ಯೆಯಿಂದ ವಿನಯವಂತನಾದವನಿಗೆ ಪಾತ್ರತೆಯನ್ನು ನೀಡುತ್ತದೆ. ಪಾತ್ರತೆಯು ಧನವನ್ನು ತಂದುಕೊಡುತ್ತದೆ. ಈ ರೀತಿ ಧರ್ಮದಿಂದ ಗಳಿಸಿದ ಧನವನ್ನು ಸತ್ಕಾರ್ಯಗಳಿಗೆ ವಿನಿಯೋಗಿಸಿದಾಗ ಸುಖ, ಶಾಂತಿ ತಾನಾಗೇ ಬರುತ್ತದೆ. ಹೆಚ್ಚು ವಿದ್ಯೆ ಕಲಿತಂತೆಲ್ಲಾ ವಿನಯವೂ ಹೆಚ್ಚಾಗುತ್ತಾ ಹೋಗಬೇಕು. ವಿದ್ಯೆಯ ಜೊತೆ ವಿನಯವೂ ಕೂಡಿಕೊಂಡರೆ ಜನ ಈ ವ್ಯಕ್ತಿಯ ಗುಣ ಮತ್ತು ತಿಳುವಳಿಕೆಗೆ ತಲೆದೂಗುತ್ತಾರೆ ಮತ್ತು ಹೆಚ್ಚು ಜನ ಬರಲಾರಂಭಿಸುತ್ತಾರೆ. ಜನಗಳ ಪ್ರೀತಿ, ಗೌರವಗಳಿಗೆ ಬೆಲೆಕೊಟ್ಟು ಸೇವಾ ಮನೋಭಾವವನ್ನು ತೋರಿದರೆ, ಹಣ ತಾನೇ ತಾನಾಗಿ ಇವನ ಬಳಿ ಸೇರುತ್ತದೆ. ಅಹಂಕಾರ ವನ್ನು ಬೆಳೆಸಿಕೊಂಡರೆ ಕಲಿತ ವಿದ್ಯೆಗೆ ಬೆಲೆ ಇಲ್ಲದಂತಾಗುತ್ತದೆ. ಹಣ ಸಂಪಾದನೆಯೊಂದೇ ಗುರಿಯಾಗಬಾರದು. ಅಹಂಕಾರ ಮತ್ತು ಧನದಾಹ ಎರಡೂ ಸೇರಿದರೆ ಇವನ ಬಳಿ ಯಾರೂ ಸುಳಿಯಲಾರರು. ಚೆನ್ನಾಗಿ ಕಲಿತ ವೈದ್ಯ ದೀನ, ದಲಿತ, ಅಶಕ್ತರ ಸೇವೆ ಮಾಡಿದರೆ ನೊಂದು, ಬೆಂದ ಬಡವರು ಹೃದಯತುಂಬಿ ಮಾಡುವ ಆಶೀರ್ವಾದಕ್ಕೆ ಮತ್ತು ಅಲ್ಪವಾದರೂ ನ್ಯಾಯಮಾರ್ಗದಲ್ಲಿ ನೀಡುವ ಹಣಕ್ಕೆ ಪಾತ್ರನಾಗುತ್ತಾನೆ. ಕಲಿತ ವಿದ್ಯೆ, ಅಗತ್ಯವಿದ್ದವರಿಗೆ ನೆರವಾಗುವಂತಿರಬೇಕು. ಇಂತಹ ಸುಂದರ ಬದುಕನ್ನು ನೀಡಿರುವ ಪರಮಾತ್ಮನಿಗೆ ನಾವು ಸಲ್ಲಿಸುವ ಕೃತಜ್ಞತೆ ಎಂದರೆ ಪರೋಪಕಾರ (ಪರೋಪಕಾರಾರ್ಥಂ ಇದಂ ಶರೀರಂ) ಮತ್ತು ನಮ್ಮ ಹೆತ್ತ ತಾಯಿ ತಂದೆಯವರಿಗೆ ಸಲ್ಲಿಸುವ ಪ್ರೀತಿಯ ಋಣ. ಅಂತೆಯೇ ಒಂದು ಕಲೆಯನ್ನೂ ಸಹ ಅಶಕ್ತರಿಗೆ, ಆಸಕ್ತರಿಗೆ ಧಾರೆ ಎರೆದರೆ ಆ ಕಲೆ ನಮ್ಮಲ್ಲಿ ವೃದ್ಧಿ ಆಗುತ್ತದೆಯೇ ಹೊರತು ನಶಿಸುವುದಿಲ್ಲ. ಈ ರೀತಿಯ ಸೇವೆಯಿಂದ ಧರ್ಮಮಾರ್ಗದಲ್ಲಿ ನಡೆದಂತಾಗುತ್ತದೆ. ಅಲ್ಲದೆ ಮನಸ್ಸಿಗೆ, ಹೃದಯಕ್ಕೆ ನೆಮ್ಮದಿ, ಆನಂದ ತರುತ್ತದೆ.

Sri Vidyabharati Book Centre, Sringeri

CC-0. In Public Domain. Digitized by eGangotri

ಧರ್ಮನಿರಪೇಕ್ಷ ರಾಷ್ಟ್ರದಲ್ಲಿ ಅರ್ಥಕಾಮಗಳ ವಿಕಟಾಟ್ಟಹಾಸ!?

– ಡಾ|| ಎಂ.ಎಲ್.ನರಸಿಂಹಮೂರ್ತಿ, ಮಿಗನಕಲ್ಲು (ತಿರುಪತಿ)

''**ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ**'' ಎಂದೂ ''**ಧರ್ಮಸಾರಮಿದಂ ಜಗತ್**'' ಎಂದು ಸಂಸ್ಕೃತ ವಾಙ್ಮಯದಲ್ಲಿ ಜಗತ್ತಿಗೆ ಧರ್ಮವೇ ಮೂಲವೆಂದೂ, ಆಧಾರವೆಂದೂ ವಿವರಿಸಲಾಗಿದೆ. ಧರ್ಮವೆಂದರೆ ಯಜ್ಞಯಾಗಾದ್ಯನುಷ್ಠಾನಗಳು ಮಾತ್ರವಲ್ಲ. ಅವು ಧರ್ಮದ ಒಂದು ಅಂಗ. ಧರ್ಮವೆಂದರೆ ಯಾವ ವ್ಯವಸ್ಥೆಯಿಂದ ಜಗತ್ತು ಧರಿಸಲ್ಪಡುತ್ತದೆಯೋ ಅದು ಧರ್ಮ. **ಧಾರಣಾತ್ ಧರ್ಮ.** ಕೃಷಿಕನಿಗೆ ಕೃಷಿಯೇ ಧರ್ಮ, ಅಧ್ಯಾಪಕರಿಗೆ ಅಧ್ಯಾಪನವೇ ಧರ್ಮ, ರಕ್ಷಕ ಭಟನಿಗೆ ರಕ್ಷಣಾಕಾರ್ಯವೇ ಧರ್ಮ, ರಾಜನಿಗೆ ಅಥವಾ ಮಂತ್ರಿಗಳಿಗೆ ಪ್ರಜೆಗಳ ಪಾಲನೆಯೇ ಧರ್ಮ. ಹೀಗೆ ಎಲ್ಲರೂ ಅವರವರ ಕರ್ತವ್ಯ ಪಾಲನೆಯನ್ನು ಮಾಡುವುದೇ ಧರ್ಮ. ಇಂತಹ ಧರ್ಮಾಚರಣೆಯನ್ನು ಪ್ರತಿಯೊಬ್ಬನೂ ಮಾಡಲೇಬೇಕು. ಅದಕ್ಕೆ ಚ್ಯುತಿ ಬಂದರೆ ವ್ಯವಸ್ಥೆಯಲ್ಲಿ ಲೋಪವಾಗಿ ಅವ್ಯವಸ್ಥೆಯಾಗುತ್ತದೆ. ನಮ್ಮಲ್ಲಿ 'ಸೆಕ್ಯುಲರ್ ಸ್ಟೇಟ್' ಅನ್ನುವುದಕ್ಕೆ ಜಾತ್ಯಾತೀತ ರಾಷ್ಟ್ರ, ಧರ್ಮನಿರಪೇಕ್ಷ ರಾಷ್ಟ್ರ ಇತ್ಯಾದಿಯಾಗಿ ವಿಕೃತಗೊಳಿಸಿದ ವಿವರಣೆಯನ್ನು ನೀಡಿ ತಮ್ಮ ಮೂಗಿನ ನೇರಕ್ಕೆ ಮಾತನಾಡುವ ತಥಾಕಥಿತ ಬುದ್ಧಿಜೀವಿಗಳನ್ನು, ವಿತಂಡ ರಾಜಕಾರಣಿಗಳನ್ನೂ ಕಾಣುತ್ತೇವೆ. ಇಂತಹವರ ವಿತಂಡವಾದದಿಂದ ಸಮಾಜದ ಸ್ವಾಸ್ಥ್ಯ ಕೆಡುತ್ತಿದೆ. ಧರ್ಮನಿರಪೇಕ್ಷ ಸಿದ್ಧಾಂತದ ಆಧಾರದ ಮೇಲೆ ಇಂದು ನಮ್ಮ ಭಾರತೀಯತೆಯ ಮೇಲೆ ಅವ್ಯಾಹತವಾದ ಅತ್ಯಾಚಾರ ನಡೆಯುತ್ತಿದೆ. ನಮ್ಮ ಭಾರತೀಯತೆಯು ಆಧ್ಯಾತ್ಮಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಹಿಂದಿನಿಂದ ಬಹಳ ಔನ್ನತ್ಯವನ್ನು ಕಾಪಾಡಿಕೊಂಡು ಬಂದಿದೆ. ಅದರಿಂದೇನಾಗಿದೆ? ಒಂದು ವಿಹಂಗಮ ನೋಟ ಹರಿಸಿದರೆ ಅಯ್ಯೋ ಎನಿಸುತ್ತದೆ. ಏಕೆ ಹೀಗಾಯಿತು? ಏನಾಗಿದೆ ಭಾರತಕ್ಕೆ? ಏನಾಗಿದೆ ಭಾರತೀಯ ಮನಸ್ಸುಗಳಿಗೆ? ನಾವು ಜಾತ್ಯಾತೀತರಾಗಬೇಡವೇ? ನಮ್ಮನ್ನು ನಾವು ತಿಳಿದುಕೊಳ್ಳಬೇಡವೇ? ನಮ್ಮನ್ನು ನಾವು ತಿದ್ದಿಕೊಳ್ಳಬೇಡವೇ? ಈ ಧರ್ಮನಿರಪೇಕ್ಷತೆ ಎಂಬುದೇ ಒಂದು ಭ್ರಾಂತಕಲ್ಪನೆ. ಧರ್ಮದ ಅಪೇಕ್ಷೆ ಇರಬಾರದೆನ್ನುವ ಕಲ್ಪನೆಯೇ ಸರಿ ಇಲ್ಲ. ನಿಜವಾಗಿ ಯಾವುದೇ ಒಂದು ಧರ್ಮದ ಬಗ್ಗೆ ಪಕ್ಷಪಾತವಿಲ್ಲದೆ ಎಲ್ಲಾ ಧರ್ಮಗಳನ್ನೂ ಸಮಾನವಾಗಿ ಆಳುವವನು ಕಾಣಬೇಕೆನ್ನುವುದು ನಿಜವಾದ ಆಶಯ. ಆದರೆ ಇಂದಿನ ರಾಜಕಾರಣಿಗಳು ಎಲ್ಲವನ್ನು ಕುಲುಷಿತಗೊಳಿಸುತ್ತಿದ್ದಾರೆ, ತಮ್ಮ ಸ್ವಾರ್ಥ ರಾಜಕೀಯಕ್ಕಾಗಿ. ಇಂದು ಎಲ್ಲ ಮನಸ್ಸುಗಳಲ್ಲಿ ಬೆಳೆಯುತ್ತಿರುವುದು ಎರಡೇ ಅಂಶ. ಅರ್ಥ ಮತ್ತು ಕಾಮ. ಅಂದರೆ ಶತಾಯ ಗತಾಯ, ಹೇಗಾದರೂ ಮಾಡಿ, ಮಾರ್ಗ ಯಾವುದಾದರೂ ಸರಿ ಹೆಚ್ಚು ದುಡ್ಡು ಸಂಪಾದನೆ ಮಾಡುವುದು, ನಂತರ ಇಷ್ಟ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದಂತೆ ಭೋಗವನ್ನು ಅನುಭವಿಸುವುದು. ಆದರೆ ದುಡ್ಡಿನಿಂದ ಸುಖವುಂಟೇ? ಹಾಗಿದ್ದರೆ ಶ್ರೀಮಂತರೆಲ್ಲ ಸುಖಿಗಳಾಗಬೇಕಿತ್ತು. ಬಡವರೆಲ್ಲ ದುಃಖಿಗಳಾಗಬೇಕಿತ್ತು. ಆದರೆ ಹಾಗಿಲ್ಲ. ಶ್ರೀಮಂತರಲ್ಲೂ ದುಃಖಿಗಳಿದ್ದಾರೆ, ಬಡವರಲ್ಲೂ ಸುಖಿಗಳಿದ್ದಾರೆ. ದುಃಖ ಸುಖಿಗಳು ಮನಸ್ಸಿಗೆ ಸಂಬಂಧಿಸಿದವು. ದುಡ್ಡಿನಿಂದ ಸುಖವೂ ಸಿಗಬಹುದು, ದುಃಖವೂ ಉಂಟಾಗಬಹುದು. ಅನ್ಯಾಯ ಮಾರ್ಗದಲ್ಲಿ ಸಂಪಾದಿಸಿದ ಹಣದಿಂದ ಯಾರು ಸುಖ ಪಡುತ್ತಾರೆ, ಅಂತಹವರಿಗೆ ನಿರಂತರವಾಗಿ ಮನಸ್ಸಿನಲ್ಲಿ ಒಂದು ರೀತಿಯ ಅಳುಕು, ಭಯ ಇದ್ದೇ ಇರುತ್ತದೆ. ಈಗ ಸ್ವಿಸ್ ಬ್ಯಾಂಕಿನಲ್ಲಿ ಕಪ್ಪು ಹಣ ಇಟ್ಟ ಕಾಳಧನಿಕರಿಗೆ ಅಳುಕು ಶುರುವಾಗಿಲ್ಲವೇ ಹಾಗೆ.

ಇಂದು ಎಲ್ಲೆಲ್ಲೂ ದುಡ್ಡು ಸಂಪಾದನೆಯ ತವಕ ಕಾಣುತ್ತಿದ್ದೇವೆ. ಆದರೆ ಆ ಸಂಪಾದನೆ ನ್ಯಾಯ ಮಾರ್ಗದಲ್ಲಿರಬೇಕಲ್ಲವೇ? ಧರ್ಮದ ತಳಹದಿಯ ಮೇಲೆ ಇರಬೇಕಲ್ಲವೇ? ರಾಜ್ಯಭಾರವು ಧರ್ಮದ ತಳಹದಿಯ ಮೇಲಿರಬೇಕಲ್ಲವೇ? ರಾಜ್ಯವಾಳುವವರಲ್ಲಿ ಯಾವ ರೀತಿ ಧಾರ್ಮಿಕತೆ ಮತ್ತು ನ್ಯಾಯವಿರಬೇಕೆನ್ನುವುದನ್ನು ರಾಮಾಯಣದ ಕಚ್ಚಿತ್ ಸರ್ಗದಲ್ಲಿ ಕಾಣಬಹುದು. ಆದರೆ ಸೌಭಾಗ್ಯ, ಇಂದು ಶಾಲಾ ಕಾಲೇಜುಗಳಲ್ಲಿ ಅಂತಹ ಧರ್ಮಧಾರಿತ, ನೈತಿಕ ತಳಹದಿಯ, ಸಾಂಸ್ಕೃತಿಕ ವೈಭವದ ಶಿಕ್ಷಣ ಎಲ್ಲಿದೆ? ಅದಿಲ್ಲದೆ ಯಾವುದು ಧರ್ಮ, ಯಾವುದು ಅಧರ್ಮ, ಯಾವುದು ನೀತಿ, ಯಾವುದು ಅನೀತಿ ಎಂಬ ತಿಳುವಳಿಕೆ ಬರುವುದಾದರೂ ಹೇಗೆ? ಸ್ವಾತಂತ್ರ್ಯ ಬಂದ ಆರು ದಶಕಗಳೇ ಕಳೆದರೂ ನಮಗೆ ಉತ್ತಮ ಶಿಕ್ಷಣ ನೀಡುವಲ್ಲಿ ಸತ್ತ್ವಜೆಗಳನ್ನು ತಯಾರು ಮಾಡುವಲ್ಲಿ ಸರಕಾರಗಳು ವಿಫಲವಾಗಿವೆ. ಇನ್ನು ಇಂತಹ ವಿಚಾರವನ್ನು ಹೇಳುವವರಿಗೆ ಕೋಮುವಾದದ ಹಣೆ ಪಟ್ಟಿ ಬೇರೆ. ನಮ್ಮ ಭಾರತೀಯ ಸಂಸ್ಕೃತಿ ಎಂದರೆ ಒಳ್ಳೆಯದು ಎಲ್ಲಿದ್ದರೂ ಅದು ನಮಗೆ ಬರಲಿ **''ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ''** ಎಂದು. ಇವತ್ತು ಒಳ್ಳೆಯದು ಬರುತ್ತಿಲ್ಲ, ಜೊತೆಗೆ ಜಾಹಿರಾತು, ಸಿನಿಮಾ, ಟಿ.ವಿ. ಧಾರಾವಾಹಿಗಳು, ಮುದ್ರಣ ಮಾಧ್ಯಮ ಮೊದಲಾದ ಕಡೆಗಳಲ್ಲೆಲ್ಲಾ ಕಾಮ ಪ್ರಚೋದಕ ದೃಶ್ಯ, ಸಾಹಿತ್ಯ ಹಾಗೂ ಕಾರ್ಯಕ್ರಮಗಳೇ ಇದ್ದಲ್ಲಿ ಸಮಾಜದ ಅದರಲ್ಲೂ ಎಳೆ ಮನಸ್ಸುಗಳ ಮತ್ತು ಯುವಕ ಯುವತಿಯರ ಮನಸ್ಸು ಕೆಡದೇ ಇನ್ನೇನಾಗುತ್ತೆ? ಜೊತೆಗೆ ದಂಡದ ಭಯವೂ ಇಲ್ಲದಂತಾದರೇ ಅರಾಜಕತೆ ಉಂಟಾಗದೆ ಮತ್ತಿನ್ನೇನಾಗುತ್ತೆ? ಇದರ ಫಲವಾಗಿಯೇ ನೋಡಿ ಇಂದು ಹಸುಳೆಗಳನ್ನೂ ಬಿಡದೆ ಎಲ್ಲೆಂದರಲ್ಲಿ ಅಸಹ್ಯವಾದ ಕಾಮುಕರ ಅಟ್ಟಹಾಸ. ಆಳುವವರಿಗೆ ನಾಚಿಕೆ ಯಾಗಬೇಕು. ಇಂತಹ ನಪುಂಸಕ ಆಡಳಿತ ನೀಡುವವರು ರಾಜಕೀಯ ಬಿಟ್ಟು ಪ್ರಾಂಜಲ ಮನಸ್ಸಿನಿಂದ ಆತ್ಮಾವಲೋಕನ ಮಾಡಿಕೊಳ್ಳಬೇಕು. ಇವುಗಳಿಗೆಲ್ಲಾ ಕಡಿವಾಣ ಹಾಕಲು ಸಾಧ್ಯವಿಲ್ಲವೇ? ಇನ್ನು ಹೆಣ್ಣು ಮಕ್ಕಳ ಉಡುಗೆ – ತೊಡುಗೆ ವಿಚಾರದಲ್ಲಿ ಮಾತನಾಡಿದರೆ

35ನೇ ಪುಟಕ್ಕೆ ▶▶

CC-0. In Public Domain. Digitized by eGangotri

ಕಗ್ಗದ ಬೆಳಕಿನಲ್ಲಿ

ಒಂಟಿತನ ಸುಖವೇ?

- ಶ್ರೀ ಜಿ.ಎಸ್. ನಟೇಶ್, ಎಂ.ಎ., ಬಿ.ಇಡಿ, ಉಪನ್ಯಾಸಕರು, ಶಿವಮೊಗ್ಗ

ಒಬ್ಬನುಣುವೂಟದಲಿ ಸವಿಯಿಲ್ಲ ಸೊಗವಿಲ್ಲ
ಇಬ್ಬರಾಗುವೆನೆಂದನಂತೆ ಪರಬೊಮ್ಮಂ?
ಹೆಬ್ಬದುಕಿನೊಂಟಿತನದೊಳದೇನು ಬದುಕುವೆಯೊ?
ತಬ್ಬಿಕೊಳೊ ವಿಶ್ವವನು - ಮಂಕುತಿಮ್ಮ ॥

ಒಬ್ಬನೇ ಮನೆಯಲ್ಲಿ ಊಟ ಮಾಡುತ್ತಿದ್ದರೆ ಅದರಲ್ಲಿ ರುಚಿಯೂ ಇಲ್ಲ. ಸುಖವೂ ಇಲ್ಲ. ಭಗವಂತನೂ ಇಬ್ಬರಾಗುವುದನ್ನು ಬಯಸಿದನಂತೆ. ಶ್ರೀಮಂತ ಬದುಕಿನ ಒಂಟಿತನದಲ್ಲಿ ಅದೇನು ಬದುಕುವಿ? ವಿಶ್ವವನ್ನು ತಬ್ಬಿಕೊ.

''ಉದಾರಚರಿತಾನಾಂ ತು ವಸುಧೈವ ಕುಟುಂಬಕಂ'' ನಮ್ಮ ಪುರಾತನ ಋಷಿಗಳ ಉದ್ಗಾರವಿದು. ಹೃದಯವನ್ನು ವಿಶ್ವದೆದುರು ತೆರೆದಿಟ್ಟಾಗ ಸಮಗ್ರ ಪ್ರಪಂಚವೇ ಕುಟುಂಬದಂತಾಗುತ್ತದೆ. ಇವನಾರವ? ಇವನಾರವ? ಎನ್ನದೆ ಇವ ನಮ್ಮವ, ಇವ ನಮ್ಮವ ಎಂದು ಎಲ್ಲರನ್ನೂ ಸೇರಿಸಿಕೊಳ್ಳುತ್ತಾ ಹೋದರೆ ನಾವು ವಿಶ್ವಕುಟುಂಬಿಗಳಾಗಿಬಿಡುತ್ತೇವೆ. ಇದನ್ನೇ ಗುಂಡಪ್ಪನವರು ಒಂದು ಸುಂದರ ನಿದರ್ಶನದೊಂದಿಗೆ ವಿವೇಚಿಸಿದ್ದಾರೆ. ಮನೆಯಲ್ಲಿ ಒಬ್ಬನೇ ಇದ್ದು ಊಟ ಮಾಡುತ್ತಿದ್ದರೆ ಈ ಊಟದಲ್ಲಿ ರುಚಿಯೂ ಸಿಗದು. ಸುಖದ ಅನುಭವವೂ ಆಗದು. ಇದು ಎಲ್ಲರ ಅನುಭವಕ್ಕೆ ಬಂದಿರುತ್ತದೆ. ಸೃಷ್ಟಿಕರ್ತ ತಾನು ಒಬ್ಬನೇ ಇದ್ದರೆ ಸುಖದ ಅನುಭವವಾಗದೆಂದು ತಿಳಿದು ಸೃಷ್ಟಿಕಾರ್ಯವನ್ನು ಮಾಡಲು ಶುರುಮಾಡಿದನಂತೆ. ಒಂಟಿತನದಲ್ಲಿ ಅದೆಷ್ಟೇ ಶ್ರೀಮಂತ ಬದುಕು ನಿನ್ನದಾದರೂ ಅದು ಬದುಕೇ ಅಲ್ಲ. ಆದ್ದರಿಂದ ವಿಶ್ವವನ್ನು ಹೋಗಿ ತಬ್ಬಿಕೋ, ಆಗಲೇ ನಿನ್ನ ಬದುಕಿಗೆ ಒಂದು ಅರ್ಥ ಬರುತ್ತದೆ.

ನಮ್ಮ ಬೆಂಗಳೂರು ಶಾಖೆಯ ವಿಳಾಸ:
ಶ್ರೀಮಠ, ಹರಿಹರಪುರ, ಭಕ್ತಿಮಂದಿರಮ್,
ನಂ. 1370/ಎಂ, 4ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ , ನೆಹರು ರಸ್ತೆ,
ಗಿರಿನಗರ, ಬೆಂಗಳೂರು-85. ದೂ: 080 26426116
ಸಮಯ : ಬೆಳಿಗ್ಗೆ 10 ಘಂಟೆಯಿಂದ ಸಂಜೆ 6 ಘಂಟೆಯವರೆಗೆ

Sri Vidyabharathi Book Centre, Sringeri

CC-0. In Public Domain. Digitized by eGangotri

ಶ್ರೀಮದ್ಭಗವದ್ಗೀತಾ ಪ್ರಶ್ನೋತ್ತರ ಸ್ಪರ್ಧೆ

– ಪ್ರೊ. ಕೆ. ಕೇಶವಮೂರ್ತಿ, ವಿಶ್ರಾಂತ ಪ್ರಾಚಾರ್ಯರು, ಮೈಸೂರು

ಪ್ರಿಯ ವಾಚಕ ಬಂಧುಗಳೇ,

ಅನೇಕ ಶಾಸ್ತ್ರಂ ಬಹುವೇದಿತವ್ಯಂ ಸ್ವಲ್ಪಶ್ಚಕಾಲಃ ಬಹವಶ್ಚ ವಿಘ್ನಾಃ ।
ಯತ್ಸಾರಭೂತಂ ತದದೇಕ್ಷಿತವ್ಯಂ ಹಂಸೋಯಥ ಕ್ಷೀರಮಿವಾಂಬು ಮಧ್ಯಾತ್ ॥

ಎಂಬುದೊಂದು ಆರ್ಯೋಕ್ತಿ. ಇದರ ತಾತ್ಪರ್ಯವೇನೆಂದರೆ, ಶಾಸ್ತ್ರಗಳು ಅನೇಕ. ನಮ್ಮ ಆಧ್ಯಾತ್ಮಿಕ ವಾಙ್ಮಯವಂತೂ ಬಲು ದೊಡ್ಡದು. ಚತುರ್ವೇದಗಳು, ಅಷ್ಟೋತ್ತರ ಶತೋಪನಿಷತ್ತುಗಳು, ಅಷ್ಟಾದಶ ಪುರಾಣೋಪ ಪುರಾಣಗಳು, ಷಡಂಗಗಳು, ಆಗಮತ್ರಯಗಳು, ಷಡ್ದರ್ಶನಗಳು, ವಿಕವಿಂಶತಿ ಸ್ಮೃತಿಗಳು, ಪ್ರಸ್ಥಾನತ್ರಯಗಳು, ಚತುಃಷಷ್ಟಿ ತಂತ್ರಗ್ರಂಥಗಳು, ಇತಿಹಾಸ ಕಾವ್ಯದ್ವಯಗಳು, ಒಂದೇ ಎರಡೇ! ಈ ಪಟ್ಟಿ ಮುಂದುವರಿಯುತ್ತಲೇ ಇರುತ್ತದೆ. ಹೀಗಾಗಿ ನಾವು ತಿಳಿದುಕೊಳ್ಳಬೇಕಾಗಿರುವ ವಿಷಯಗಳು ಸಾಕಷ್ಟಿವೆ. ಆದರೆ ಅಷ್ಟೊಂದು ಕಾಲ ನಮಗಿಲ್ಲ. **'ಶ್ರೇಯಾಂಸಿ ಬಹು ವಿಘ್ನಾನಿ'** ಎಂಬಂತೆ ಶ್ರೇಯಸ್ಕರವಾದ ಕಾರ್ಯಕ್ಕೆ ವಿಘ್ನಪರಂಪರೆಗಳು ಬಂದೊದಗುತ್ತವೆ. ಹಾಗಾದರೆ ಇದಕ್ಕೆ ಪರಿಹಾರವೇನು? ಸಾರವತ್ತಾದ್ದನ್ನು ಅಧ್ಯಯನ ಮಾಡಿ ಎಂದರು. ಹಾಗಾದರೆ ಇದುವರೆವಿಗೆ ಹೇಳಿದ ನಮ್ಮ ಭಾರತೀಯ ಆಧ್ಯಾತ್ಮಿಕ ವಾಙ್ಮಯದಲ್ಲಿ ಸಾರವತ್ತಾಗಿರುವುದು ಅದು **'ಭಗವದ್ಗೀತೆ'** ಯೊಂದೇ. ಇದಕ್ಕೆ ಒಂದಲ್ಲ ಹಲವು ಹತ್ತು ಕಾರಣಗಳಿವೆ.

ಮೊದಲನೆಯದಾಗಿ ಗೀತೆ ವಿಶ್ವಮಾನ್ಯವಾದ ಗ್ರಂಥ. ಪ್ರಪಂಚದ ಎಲ್ಲ ಭಾಷೆಗಳಿಗೂ ಬಾಷಾಂತರವಾಗಿರುವ ಶ್ರೇಷ್ಠ ಗ್ರಂಥ. ಎರಡನೆಯದಾಗಿ ವಿಶ್ವ ಗ್ರಂಥಗಳ ರಾಶಿಯಲ್ಲಿ ಜಯಂತಿಯನ್ನು ಆಚರಿಸಿಕೊಳ್ಳುತ್ತಿರುವ ಏಕೈಕ ಪೂಜ್ಯ ಗ್ರಂಥ. ಮೂರನೆಯದಾಗಿ ಇದು ಭಗವಂತನೇ ಸಾಕ್ಷಾತ್ತಾಗಿ ಮಾಡಿರುವ ಉಪದೇಶ. ನಾಲ್ಕನೆಯದಾಗಿ ಯಾವ ಒಂದು ಧರ್ಮಕ್ಕೂ ಸೇರದ ಕೇವಲ ಮಾನವಧರ್ಮವೊಂದನ್ನೇ ಗುರಿಯಾಗಿಟ್ಟುಕೊಂಡು ಹೇಳಿರುವ ಗ್ರಂಥ. ಐದನೆಯದಾಗಿ ಇದನ್ನು ಬರೆದವರು ಸಾಧಾರಣ ಕವಿಗಳಲ್ಲ. ವಿಷ್ಣು ಸ್ವರೂಪರಾದ ವೇದವ್ಯಾಸ ಮಹರ್ಷಿಗಳು. ಹೀಗೆಯೇ ಕಾರಣಗಳು ಮುಂದುವರಿಯುತ್ತದೆ, ಇರಲಿ.

ಈಗ ಪ್ರಕೃತ ವಿಷಯಕ್ಕೆ ಬರೋಣ. ಇಷ್ಟೆಲ್ಲಾ ಹೇಳುತ್ತಿರುವ ಉದ್ದೇಶವೇನೆಂದರೆ ನೀವೂ ಈ ಗ್ರಂಥವನ್ನು ಓದುವುದರ ಮೂಲಕ ಜನ್ಮಸಾರ್ಥಕ್ಯ ಮಾಡಿಕೊಳ್ಳಬೇಕೆಂಬುದೇ ಆಗಿದೆ. ನಿಮ್ಮನ್ನು ಈ ಮಹದ್ಗ್ರಂಥದ ಅಧ್ಯಯನದಲ್ಲಿ ತೊಡಗಿಸಿ, ನೀವು ಸ್ಥಿತಪ್ರಜ್ಞರೂ, ಶ್ರದ್ಧಾವಂತರೂ, ಜ್ಞಾನವಂತರೂ, ಬುದ್ಧಿವಂತರೂ, ತೇಜೋವಂತರೂ, ಯಶೋವಂತರೂ, ಭಗವದ್ಭಕ್ತರೂ ಆಗ

Sri Vidyabharathi Book Centre, Sringeri

CC-0. In Public Domain. Digitized by eGangotri

ಬೇಕೆಂಬುದೇ ನಮ್ಮ ಆಶಯ. ನಿಮ್ಮ ದೈನಂದಿನ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಾ ನೀವು ಇಲ್ಲಿಯೂ ಸಂದು ಅಲ್ಲಿಗೂ ಸಲ್ಲಬೇಕೆಂಬುದೇ ನಮ್ಮ ಬಯಕೆ.

ಈ ಬಯಕೆಯನ್ನು ಈಡೇರಿಸುವ ಸಲುವಾಗಿ ನಿಮ್ಮನ್ನು ಗೀತಾಧ್ಯಯನಶೀಲರನ್ನಾಗಿ ಮಾಡಬೇಕಾಗಿದೆ. ಅದಕ್ಕಾಗಿಯೇ ಈ **''ಗೀತಾ ಪ್ರಶ್ನೋತ್ತರ ಸ್ಪರ್ಧೆ''**. ನೀವು ಎಷ್ಟರ ಮಟ್ಟಿಗೆ ಗೀತೆಯನ್ನು ಅರ್ಥಮಾಡಿಕೊಂಡಿದ್ದೀರಿ ಎಂಬುದನ್ನು ಮೌಲ್ಯಮಾಪನ ಮಾಡುತ್ತದೆ ಈ ಸ್ಪರ್ಧೆ. ನಿಮಗೆ ಗೊತ್ತಿಲ್ಲದ ವಿಷಯವನ್ನು ತಿಳಿಸಲೂ ನೆರವಾಗುತ್ತದೆ. ನಿಮಗೆ ಕೀರ್ತಿ ಹಾಗು ಬಹುಮಾನವನ್ನು ತಂದುಕೊಡುತ್ತದೆ.

ಪ್ರತಿ ಮಾಹೆ ಈ ನಿಯತ ಅಂಕಣದಲ್ಲಿ ಗೀತೆಯ ಒಂದೊಂದು ಅಧ್ಯಾಯದ ಬಗ್ಗೆ 25 ಪ್ರಶ್ನೆಗಳಿರುತ್ತದೆ. ಒಂದು ಪ್ರಶ್ನೆಗೆ ಒಂದು ಅಂಕ. ಒಂದೊಂದು ಪದಗಳಲ್ಲಿ ಉತ್ತರ. ಅವುಗಳಿಗೆ ಸಮರ್ಪಕವಾದ ಉತ್ತರಗಳನ್ನು ಬರೆದು ನಮಗೆ ಕಳುಹಿಸಿ. ನಾವು ಅದನ್ನು ಮೌಲ್ಯಮಾಪನ ಮಾಡಿ ಉತ್ತೀರ್ಣರಾದವರೆಲ್ಲರ ಹೆಸರುಗಳನ್ನು ಪ್ರಕಟಿಸುತ್ತೇವೆ.

25 ಅಂಕ ಗಳಿಸಿದವರು	**ಪೂರ್ಣಪ್ರಜ್ಞರು**	**ಶೇ. 100**
23 ಅಂಕ ಗಳಿಸಿದವರು	**ಪ್ರಾಜ್ಞರು**	**ಶೇ. 90**
20 ಅಂಕ ಗಳಿಸಿದವರು	**ಮೇಧಾವಿಗಳು**	**ಶೇ. 80**
18 ಅಂಕ ಗಳಿಸಿದವರು	**ಕೋವಿದರು**	**ಶೇ. 70**
15 ಅಂಕ ಗಳಿಸಿದವರು	**ಪ್ರಥಮ ದರ್ಜೆ**	**ಶೇ. 60**
13 ಅಂಕ ಗಳಿಸಿದವರು	**ದ್ವಿತೀಯ ದರ್ಜೆ**	**ಶೇ. 50**
10 ಅಂಕ ಗಳಿಸಿದವರು	**ಉತ್ತೀರ್ಣರು**	**ಶೇ. 40**
10ಕ್ಕಿಂತ ಕಡಿಮೆ ಅಂಕ ಗಳಿಸಿದವರು	**ಅನುತ್ತೀರ್ಣರು**	

ಈ ಪತ್ರಿಕೆಯಲ್ಲಿ ನಿಮ್ಮ ಹೆಸರು ಪ್ರಕಟವಾಗುವುದೇ ಒಂದು ಸುಯೋಗ. ಅಷ್ಟೇ ಅಲ್ಲದೆ ಪರಮಪೂಜ್ಯ ಶ್ರೀ ಶ್ರೀ ಮಹಾಸ್ವಾಮೀಜಿಯವರು ನಿಮ್ಮನ್ನು ಹರಸುತ್ತಾರೆ. ಅದಕ್ಕಿಂತಲೂ ಇನ್ನು ಹೆಚ್ಚಿನದೇನಿದೆ? ಆದಾಗ್ಯೂ ಪೂರ್ಣಪ್ರಜ್ಞರಿಗೆ ಒಂದು ವರ್ಷದ 'ಸ್ವಯಂಪ್ರಕಾಶ'ವನ್ನು ಬಹುಮಾನವಾಗಿ ಪ್ರತಿ ತಿಂಗಳೂ ಕಳುಹಿಸಿಕೊಡಲಾಗುತ್ತದೆ. ಇದರ ಜವಾಬ್ದಾರಿಯನ್ನು ಲೇಖಕನಾದ ನಾನೇ ಗೀತಾಸೇವಕನಾಗಿ ವಹಿಸಿಕೊಂಡಿರುತ್ತೇನೆ.

ಈ ಪ್ರಶ್ನೋತ್ತರ ಮಾಲಿಕೆಯನ್ನು ಪ್ರಕಟಿಸುತ್ತಿರುವ ಈ ಪತ್ರಿಕೆಯ ಸಂಸ್ಥಾಪಕರಿಗೂ, ಸಂಪಾದಕರಿಗೂ, ಪ್ರಕಾಶಕರಿಗೂ, ಸಂಚಾಲಕರಿಗೂ, ಮುದ್ರಕರಿಗೂ, ಪತ್ರಿಕಾ ಬಳಗದವರಿಗೂ ನನ್ನ ಅನಂತಾನಂತ ನಮನಗಳು.

– ಲೇಖಕ

Sri Vidyabharathi Book Centre, Sringeri

CC-0. In Public Domain. Digitized by eGangotri

ಗೀತಾ ಪ್ರಶ್ನೋತ್ತರ ಸ್ಪರ್ಧೆ - 1

– ಪ್ರೊ. ಕೆ. ಕೇಶವಮೂರ್ತಿ, ವಿಶ್ರಾಂತ ಪ್ರಾಚಾರ್ಯರು, ಮೈಸೂರು

ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.

1. ಭಗವದ್ಗೀತೆ ಯಾವ ಕಾವ್ಯದ ಯಾವ ಭಾಗದಲ್ಲಿ ಅಡಕವಾಗಿದೆ?
2. ಇದನ್ನು ಮೊಟ್ಟಮೊದಲು ಯಾರು ಯಾವ ಭಾಷೆಯಲ್ಲಿ ಬರೆದಿದ್ದಾರೆ?
3. ಭಗವದ್ಗೀತೆಗೆ ಮೊಟ್ಟಮೊದಲು ಭಾಷ್ಯವನ್ನು ರಚಿಸಿದವರು ಯಾರು?
4. ಇದನ್ನು 'ಭಗವದ್ಗೀತೆ' ಎಂದು ಕರೆಯಲು ಕಾರಣವೇನು?
5. ನಮ್ಮ ಸಾರಸ್ವತ ವಾಙ್ಮಯದಲ್ಲಿರುವ ಇತರ ಯಾವುದಾದರೂ ಪಂಚ ಗೀತೆಗಳನ್ನು ಹೆಸರಿಸಿ.
6. ಭಗವದ್ಗೀತೆಯನ್ನು ಯಾರು ಯಾರಿಗೆ ಹೇಳಿದರು?
7. ಗೀತೆಯಲ್ಲಿ ಯಾರ ಯಾರ ಉವಾಚಗಳು ಎಷ್ಟೆಷ್ಟು?
8. ಗೀತೆಗೆ ಡಿ.ವಿ.ಜಿ.ಯವರು ಬರೆದಿರುವ ತಾತ್ಪರ್ಯಗ್ರಂಥದ ಹೆಸರೇನು?
9. ಗೀತೆಗೆ ಮಹಾತ್ಮಾಗಾಂಧೀಜಿಯವರು ಬರೆದಿರುವ ತಾತ್ಪರ್ಯ ಗ್ರಂಥದ ಹೆಸರೇನು?
10. ಗೀತೆಗೆ ಬಾಲಗಂಗಾಧರ ತಿಲಕರು ಬರೆದಿರುವ ತಾತ್ಪರ್ಯ ಗ್ರಂಥದ ಹೆಸರೇನು?
11. ಗೀತೆಯ ಬಗ್ಗೆ 'ಭಗವದ್ಗೀತಾ ಯಥಾರೂಪ' ಎಂಬ ತಾತ್ಪರ್ಯಗ್ರಂಥವನ್ನು ರಚಿಸಿರುವವರು ಯಾರು?
12. ಅಜ್ಜಂಪುರದ ಶ್ರೀ ಶಂಕರಾನಂದ ಸ್ವಾಮಿಗಳ ಗೀತೋಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿರುವ ಸಂಸ್ಥೆ ಯಾವುದು? ಆ ಗ್ರಂಥದ ಹೆಸರೇನು?
13. ಭಗವದ್ಗೀತೆಗೆ 'ಗೀತಾಭಾವಧಾರೆ' ಎಂಬ ತಾತ್ಪರ್ಯಗ್ರಂಥವನ್ನು ಯಾರು ರಚಿಸಿದ್ದಾರೆ?
14. 'ಭಗವದ್ಗೀತಾ ಉಪನ್ಯಾಸಗಳು' ಎಂಬ ಗ್ರಂಥವನ್ನು ಯಾರು ತಾವೇ ಉಪನ್ಯಾಸ ಮಾಡಿ ತಾವೇ ರಚಿಸಿದ್ದಾರೆ?
15. ಗೀತೆಯ ಬಗ್ಗೆ ಶ್ರೀ ಅರವಿಂದರು ರಚಿಸಿರುವ ತಾತ್ಪರ್ಯಗ್ರಂಥದ ಹೆಸರೇನು?
16. ಗೀತೆಗೆ ಭಾಷ್ಯವನ್ನು ರಚಿಸಿರುವ ಆಚಾರ್ಯದ್ವಯರು ಯಾರು?
17. ಚಿಕ್ಕಮಗಳೂರಿನ ಶ್ರೀ ಕೆ.ಪಿ. ರತ್ನಾಕರ ಭಟ್ಟರು ಗೀತೆಯ ಬಗ್ಗೆ ಬರೆದಿರುವ ಬೃಹದ್ಗ್ರಂಥದ ಹೆಸರೇನು?
18. 1951ರಲ್ಲಿ ಭಗವದ್ಗೀತೆಯನ್ನು ಕನ್ನಡ ಗದ್ಯಾನುವಾದ ಮಾಡಿರುವ ಕನ್ನಡದ ಶ್ರೇಷ್ಠ ಕವಿವರ್ಯರಾರು?

Sri Vidyabharathi Book Centre, Sringeri

CC-0. In Public Domain. Digitized by eGangotri

19. ಮರಾಠಿ ಭಾಷೆಯಲ್ಲಿ ಪ್ರಸಿದ್ಧವಾಗಿರುವ ಗೀತೆಯ ಹೆಸರೇನು? ಅದನ್ನು ಬರೆದವರು ಯಾರು?
20. ಗೀತೆಯ ಪ್ರಚಾರಕ್ಕೆಂದೇ ಉತ್ತರ ಭಾರತದಲ್ಲಿರುವ ಊರು ಯಾವುದು? ಆ ಸಂಸ್ಥೆಯ ಹೆಸರೇನು?
21. 'ಗೀತಾ ಮಹಾತ್ಮೆ' ಯಾವ ಪುರಾಣದಲ್ಲಿದೆ?
22. ಗೀತಾ ಪುಸ್ತಕ ಮತ್ತು ಗೀತಾ ಪಾರಾಯಣ ಎಲ್ಲಿ ನಡೆಯುತ್ತದೋ ಅಲ್ಲಿ ಏನಿರುತ್ತದೆಂದು ಈ ಪುರಾಣ ತಿಳಿಸುತ್ತದೆ?
23. 'ಗೀತಾ ಮಹಾತ್ಮ' ಯಾರಿಬ್ಬರ ಸಂವಾದ ರೂಪದಲ್ಲಿದೆ?
24. ವಿಶ್ವದ ಎಲ್ಲ ಭಾಷೆಗಳಿಗೂ ಭಾಷಾಂತರವಾಗಿರುವ ಗ್ರಂಥಗಳೆಷ್ಟು ಮತ್ತು ಯಾವುವು?
25. ಗೀತಾ ಜಯಂತಿಯು ಚಾಂದ್ರಮಾನದ ಯಾವ ತಿಂಗಳು ಯಾವ ಪಕ್ಷದ ಯಾವ ತಿಥಿಯಂದು ಬರುತ್ತದೆ. ಅದು ಈ ವರ್ಷ ಯಾವ ದಿನಾಂಕದಂದು ಜರುಗಿತು?

ಉತ್ತರ ಮತ್ತು ಫಲಿತಾಂಶ ಮುಂದಿನ ಸಂಚಿಕೆಯಲ್ಲಿ

ನಿಮ್ಮ ಉತ್ತರಗಳನ್ನು ''ಸ್ವಯಂಪ್ರಕಾಶ ಪಬ್ಲಿಕೇಷನ್ಸ್ ಟ್ರಸ್ಟ್, ''ಭಕ್ತಿಮಂದಿರಂ'' 1370/ಎಂ, ನೆಹರೂ ರಸ್ತೆ, ಗಿರಿನಗರ, ಬೆಂಗಳೂರು - 560 085. ಈ ವಿಳಾಸಕ್ಕೆ 10ನೇ ತಾರೀಖಿನೊಳಗಾಗಿ ತಲುಪುವಂತೆ ಕಳುಹಿಸಿ. ಅಥವಾ quizhhp@gmail.comಗೆ ಇಮೇಲ್ ಮಾಡಬಹುದು.

ಪ್ರಕಟಣೆ

ಪರಮಪೂಜ್ಯ ಶ್ರೀಮದ್ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರು ಸಂರಕ್ಷಕರಾಗಿರುವ, ಅವರ ಆಶೀರ್ವಾದ ದೊಂದಿಗೆ ನಿರ್ವಹಿಸಲ್ಪಡುತ್ತಿರುವ ವಿಶ್ವ ಗಾಯತ್ರೀ ಉಪಾಸಕ್ ಪರಿಷತ್ ವತಿಯಿಂದ ನಡೆಸುತ್ತಿರುವ ಪುರಾಣೋಕ್ತ ಶ್ರೀ ಲಲಿತೋಪಾಸನೆ ಹಾಗೂ ಶ್ರೀ ದೇವೀ ಗಾಯತ್ರೀ ಉಪಾಸನೆ, ಈ ಕಾರ್ಯಕ್ರಮಕ್ಕೆ ಸ್ವ ಇಚ್ಛೆಯಿಂದ ಕಲಿಸುವ ಇಚ್ಛೆಯುಳ್ಳ ಉಪಾಧ್ಯಾಯರು ಹಾಗೂ ಕಲಿಕಾ ಉಪಾಸಕಿಯರು ಕೆಳಕಂಡವರನ್ನು ಸಂಪರ್ಕಿಸಬೇಕಾಗಿ **ವಿಶ್ವ ಗಾಯತ್ರೀ ಉಪಾಸಕ್ ಪರಿಷತ್‌ನ ಪ್ರಕಟಣೆ ತಿಳಿಸಿದೆ.**

ಆಸಕ್ತರು ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:

ಶ್ರೀ ಸಚ್ಚಿದಾನಂದ ಎಂ.ವಿ., ಬೆಂಗಳೂರು, ನಿರ್ದೇಶಕರು, ದೂರವಾಣಿ : 94496 47030
ಶ್ರೀಮತಿ ಜಲಜ ರಂಗನಾಥ್, ಬೆಂಗಳೂರು, ನಿರ್ದೇಶಕರು, ದೂರವಾಣಿ : 99002 49836
ಶ್ರೀ ಮಂಜುನಾಥ ಬಿ.ಎ., ಬೆಂಗಳೂರು, ನಿರ್ದೇಶಕರು, ದೂರವಾಣಿ : 90080 65565

Sri Vidyabharathi Book Centre, Sringeri

CC-0. Mumukshu Bhawan Varanasi Collection. Digitized by eGangotri

ಸಂಸ್ಕೃತ ನಮಗೆಷ್ಟು ಅನಿವಾರ್ಯ?

– ಡಾ|| ಎಚ್.ವಿ. ನರಸಿಂಹಮೂರ್ತಿ, ಸಂಸ್ಕೃತ ಪ್ರಾಧ್ಯಾಪಕರು, ಕುಂದಾಪುರ

ಲೆಕ್ಕಕ್ಕೆ ಸಿಗದಷ್ಟು ಪ್ರಾಚೀನ ಕಾಲದಿಂದ ಭಾರತದಲ್ಲಿ ಅಸ್ತಿತ್ವದಲ್ಲಿದ್ದು, ಈ ದೇಶದ ಸಾಹಿತ್ಯಕ, ಸಾಂಸ್ಕೃತಿಕ, ಧಾರ್ಮಿಕ, ಆಧ್ಯಾತ್ಮಿಕ, ಬೌದ್ಧಿಕ, ಮಾನಸಿಕ, ಸಾಮಾಜಿಕ, ರಾಜಕೀಯ, ವೈಜ್ಞಾನಿಕ ಅಸ್ತಿತ್ವವನ್ನು ತನ್ನ ಒಡಲೊಳಗೆ ಹಿಡಿದಿಟ್ಟುಕೊಂಡ ಭಾಷೆ, ಸಂಸ್ಕೃತ. ತನ್ನ ಗತಿ ಚಕ್ರ ಸ್ತಬ್ಧವಾಗುವ ಸಾಧ್ಯತೆಯ ಸೂಚನೆ ಸಿಕ್ಕಾಗ, ಈ ನೆಲದ ಉಪಭಾಷೆಗಳಿಗೆ ತನ್ನ ಜೀವಸತ್ತ್ವವನ್ನು ದಾನ ಮಾಡಿ, ತನ್ನೊಡಲ ರಕ್ತವನ್ನು ಹಂಚಿಪೋಷಿಸಿದ ಭಾಷೆ, ಸಂಸ್ಕೃತ. ಈ ಅರ್ಥದಲ್ಲಿ ಸಂಸ್ಕೃತ ಭಾರತದ ಆತ್ಮ, ಪ್ರಾಣಶಕ್ತಿ.

ಸಮೃದ್ಧ ಆಡುಭಾಷೆಗಳ ಈ ನಾಡಿನಲ್ಲಿ ವೈಜ್ಞಾನಿಕ ವರ್ತಮಾನದಲ್ಲಿ, ಇಂದಿನ ಆಧುನಿಕ ಕಾಲಘಟ್ಟದಲ್ಲಿ ಸಂಸ್ಕೃತದ ಅನಿವಾರ್ಯತೆ ಏನು, ಎಷ್ಟು ಎಂದು ಕೇಳುವವರಿದ್ದಾರೆ, ನಿಜ. ಆದರೆ ಪೂರ್ವಪರಂಪರೆಯ ಸ್ಮೃತಿ ಇಲ್ಲದ ನಾಡು ಸಾಂಸ್ಕೃತಿಕವಾಗಿ ಬರಡಾಗಿ, ಬೆಂಗಾಡಾಗ ತೊಡಗುತ್ತದೆ ಎಂಬುದರ ಅರಿವಿಲ್ಲದವರು ಆಡುವ ಮಾತು ಇದು. ವಸಾಹತುಶಾಹಿ ನಾಗರಿಕತೆ ಮತ್ತು ಪಶ್ಚಿಮದ ಸಂಸ್ಕೃತಿಯ ಭಾರೀ ಧಾಳಿಯಿಂದ ಭಾರತ ತೀವ್ರ ಅಸ್ವಾಸ್ಥ್ಯಕ್ಕೆ ಒಳಗಾಗಿದೆ ಎಂಬುದು ಸತ್ಯಸ್ಯ ಸತ್ಯ. ಇದನ್ನು ಮನಗಂಡು ವರ್ತಮಾನಕ್ಕೆ ವಿವೇಕದ ಸಮತೋಲನದ ಸುವರ್ಣ ಸ್ಪರ್ಶ ನೀಡಬೇಕಾದರೆ ಯಾವುದೇ ಜನಾಂಗಕ್ಕಾಗಲಿ, ನಾಡಿಗಾಗಲಿ, ವ್ಯಕ್ತಿಗಾಗಲಿ ಪೂರ್ವ ಸ್ಮೃತಿ ಬೇಕು. 'ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ, ನಿಂದ ಹೆಜ್ಜೆಯನರಿಯ ಲಾಗದು' ಎಂಬ ಅಲ್ಲಮನ ಈ ಮಾತು ವರ್ತಮಾನದ ಅರಿವಿಗೆ ಪೂರ್ವಸ್ಮೃತಿಯ ಅವಶ್ಯಕತೆ ಎಷ್ಟೆಂಬುದನ್ನು ಮಾರ್ಮಿಕವಾಗಿ ತಿಳಿಸುತ್ತದೆ. ಯಾವುದೇ ನಾಡಿನ ವರ್ತಮಾನದ ನೆಲೆಗಟ್ಟಿ ಯಾಗಬೇಕಾದರೆ, ಅದು ನಮ್ಮ ಕೈಗೆಟುಕಬೇಕಾದರೆ ಪೂರ್ವಸ್ಮೃತಿ ಬೇಕೇ ಬೇಕು.

ನಮ್ಮ ನೆಲದ ಅಸಾಧಾರಣ ಕಾವ್ಯಗಳಾದ ರಾಮಾಯಣ – ಮಹಾಭಾರತಗಳು ಇಂದು ನಮಗೆ ಬೇಡ – ಎಂದು ನಿರಾಕರಿಸಲು ಸಾಧ್ಯವೆ? ರಾಮಾಯಣ – ಮಹಾಭಾರತಗಳು ಬೇಕು ಎಂದಾದರೆ ಅವು ಮೂಲ ಸ್ಥಿತಿಯಲ್ಲಿ ಮೈದಳೆದ ಭಾಷೆ ನಮಗೆ ಬೇಡವೆ? ಈ ದೇಶದ ಸಾಹಿತ್ಯ ಪರಂಪರೆ ಸಮೃದ್ಧವಾಗಿದ್ದು, ಶ್ರೀಮಂತವೆನಿಸಿದ್ದು ರಾಮಾಯಣ – ಮಹಾಭಾರತಗಳಿಂದ. ಅವೆರಡು ಮೊಗೆದಷ್ಟೂ ಬತ್ತದ ಜೀವನದಿಗಳು. ಸಂಸ್ಕೃತದಲ್ಲಿ ಮಾತ್ರವಲ್ಲ, ತುಳು – ಕನ್ನಡಗಳೂ ಸೇರಿದಂತೆ ಭಾರತದ ಎಲ್ಲ ಭಾಷೆಗಳಲ್ಲಿ ರಾಮಾಯಣ – ಮಹಾಭಾರತಗಳು ಇಡಿಯಾಗಿ, ಬಿಡಿಯಾಗಿ ಮತ್ತೆ – ಮತ್ತೆ ರಚಿತವಾದವು, ಆಗುತ್ತಲೇ ಇವೆ. ವಾಲ್ಮೀಕಿ ಮಹರ್ಷಿ ಗಳು ಭವಿಷ್ಯ ನುಡಿದಂತೆ ಸೂರ್ಯ – ಚಂದ್ರರು, ಮೇರು – ಹಿಮವಂತರು ಇರುವಲ್ಲಿಯವರೆಗೆ ಈ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಹಳೆ ಸೀಸೆಯಲ್ಲಿನ ಹೊಸ ಮದ್ಯದಂತೆ ಕತೆ ಅದೇ ಆದರೂ, ಕಾವ್ಯ ಬೇರೆ ಆಗಿ ಸಮಕಾಲಕ್ಕೆ ಸ್ಪಂದಿಸುತ್ತಲೇ ಸಾರ್ವಕಾಲಿಕವಾದ ಕಾವ್ಯಾನುಭವವನ್ನು ಕಟ್ಟಿಕೊಡುವಲ್ಲಿ ವಿಶೇಷ. ಹಾಗಾಗಿ ನಮಗೆ ಪಂಪ,

CC-0. Jayanta Bhattacharya Collection. Digitized by eGangotri

CC-0. In Public Domain. Digitized by eGangotri

ರನ್ನ, ನಾಗಚಂದ್ರ, ಕುಮಾರವ್ಯಾಸ, ಲಕ್ಷ್ಮೀಶ, ಕುವೆಂಪು, ಬೇಂದ್ರೆ, ಗೋಕಾಕ, ಅಡಿಗ, ಪುತಿನ – ಇವರೆಲ್ಲ ಅರ್ಥವಾಗಬೇಕಾದರೆ ಸಂಸ್ಕೃತದ ಅರಿವು, ಸಹಾಯ ಬೇಕೇ ಬೇಕು.

ಭಾಷಿಕ – ಸಾಹಿತ್ಯಕ ನೆಲೆಗಳು : ಸಂಸ್ಕೃತ ಭಾಷೆ ಭಾರತೀಯ ಭಾಷೆಗಳಿಗೆ ತನ್ನ ಶಬ್ದ ಭಂಡಾರ ತೆರೆದು ಧಾರಾಳವಾಗಿ ಶಬ್ದ ಸಂಪತ್ತನ್ನು ಒದಗಿಸಿದೆ. ದ್ರಾವಿಡ ಮೂಲದ ಭಾಷೆಗಳೂ ಸೇರಿದಂತೆ ಭಾರತದ ಎಲ್ಲ ಭಾಷೆಗಳೂ ಯಾವ ಮಡಿವಂತಿಕೆಯೂ ಇಲ್ಲದೆ, ಸಂಕೋಚವನ್ನು ಬದಿಗಿಟ್ಟು ಸಂಸ್ಕೃತ ಶಬ್ದ ಸಂಪತ್ತನ್ನು ಧಾರಾಳವಾಗಿ ಬಳಸಿಕೊಂಡಿವೆ. ಇಂದು ಕನ್ನಡದಲ್ಲಿ 'ಹೊತ್ತು' ಎನ್ನುವ ಶಬ್ದ 'ಸಮಯ' ಎನ್ನುವ ಅರ್ಥಕ್ಕೆ ಮಾತ್ರ ಸೀಮಿತವಾಗಿದೆ. ಆದರೆ ಮೂಲದಲ್ಲಿ ಅದಕ್ಕೆ 'ಸೂರ್ಯ' ಎಂಬ ಅರ್ಥ ಇತ್ತು. ಕನ್ನಡ ಭಾಷೆ ಸೂರ್ಯ, ಚಂದ್ರ, ನಕ್ಷತ್ರ, ಆತ್ಮ, ಅನ್ನ – ಇವನ್ನೆಲ್ಲ ಸಂಸ್ಕೃತದಿಂದ ತನ್ನದಾಗಿಸಿಕೊಂಡಿದೆ. ಕನ್ನಡದಲ್ಲಿ ಅವಕ್ಕೆ ತಲೆಕೆಡಿಸಿಕೊಂಡರೂ ಸರಿಯಾದ ಸಮಾನಾರ್ಥಕ ಶಬ್ದ ಇಲ್ಲ. ಸಂಸ್ಕೃತ ಹೀಗೆ ಆಪ್ತವಾಗಿ ಉಪಭಾಷೆಗಳೊಂದಿಗೆ ತನ್ನ ರಕ್ತವನ್ನು ಹಂಚಿಕೊಂಡಿದೆ. ಇದು ಸಂಸ್ಕೃತದ ಭಾಷಿಕ ನೆಲೆ.

ಸಾಹಿತ್ಯಕವಾಗಿ ವಾಲ್ಮೀಕಿ, ವ್ಯಾಸ, ಭಾಸ, ಕಾಳಿದಾಸ, ಭವಭೂತಿ, ಶೂದ್ರಕ, ಸೋಮದೇವ ರಂತಹ ಸಂಸ್ಕೃತ ಕವಿಗಳನ್ನು ಮರೆತು ಭಾರತೀಯ ಸಾಹಿತ್ಯವನ್ನು ಅರ್ಥೈಸಿಕೊಳ್ಳಲು ಸಾಧ್ಯವೆ? ಕನ್ನಡ ಸಾಹಿತ್ಯದ ಮೊದಲಿಗನಾದ ಪಂಪ ಸಂಸ್ಕೃತ ಸಾಹಿತ್ಯದ ದಟ್ಟವಾದ ಪ್ರೇರಣೆಯಿಂದಲೇ ತುಂಬ ಸಮರ್ಥವಾಗಿ ಕನ್ನಡ ಕಾವ್ಯಕ್ಕೆ ಅಸ್ತಿಭಾರವನ್ನು ಹಾಕಿಕೊಟ್ಟ. ಮುಂದೆ ಕನ್ನಡ ಸಾಹಿತ್ಯದಲ್ಲಿ ಅದೆಷ್ಟು ಸಂಪನ್ನ ಕವಿಗಳು ಬಂದರು! ಕನ್ನಡ ಸಾಹಿತ್ಯ ಎಷ್ಟೊಂದು ಶ್ರೀಮಂತವಾಗಿ ಬೆಳೆಯಿತು! ಸಂಸ್ಕೃತ ಸದ್ದಿಲ್ಲದೆ ತನ್ನ ಮಹತ್ವದ ಕಾವ್ಯ ಪರಿಕರಗಳನ್ನು, ಪೂರ್ವ ಸ್ಮೃತಿಯನ್ನು ಕನ್ನಡಕ್ಕೆ ಧಾರೆಯೆರೆದು ಕೊಟ್ಟಿತು. ಕನ್ನಡ ಸಾಹಿತ್ಯದ ಮಹತ್ವದ ಕವಿಗಳ, ಕೃತಿಗಳ ಸ್ವಾರಸ್ಯವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕಾದರೆ ಸಂಸ್ಕೃತ ಭಾಷೆ, ಸಾಹಿತ್ಯಗಳ ತಿಳಿವು ಬೇಕು. 'ಕುಮಾರವ್ಯಾಸ' ಪೂರ್ಣವಾಗಿ ಅರ್ಥವಾಗಬೇಕಾದರೆ ವ್ಯಾಸಭಾರತ ತಿಳಿದಿರಬೇಕು. 'ಶ್ರೀರಾಮಾಯಣ ದರ್ಶನಂ' ಅನುಭವದ ಆಳಕ್ಕೆ ಇಳಿಯಬೇಕಾದರೆ ವಾಲ್ಮೀಕಿ ಗೊತ್ತಿರಬೇಕು. ಜೈನ ಪರಂಪರೆಯ 'ರಾಮಚಂದ್ರಪುರಾಣ'ದ ವೈಶಿಷ್ಟ್ಯ – ಸೂಕ್ಷ್ಮಗಳು ಗೋಚರಿಸುವುದಕ್ಕೂ ವಾಲ್ಮೀಕಿ ಬೇಕು. ಬೇಂದ್ರೆಯವರ 'ಮೇಘದೂತ'ದ ಭಾವಗ್ರಹಣಕ್ಕೆ ಕಾಳಿದಾಸನ ಮೂಲ ಬೇಕು. ಗಲಗಲಿಯವರ ಗಂಗಾಲಹರಿಯ ರಸಾಸ್ವಾದಕ್ಕೆ ಜಗನ್ನಾಥ ಬೇಕು. ವೇದೋಪನಿಷತ್ತು ಗಳ, ಸಂಸ್ಕೃತ ಕಾವ್ಯ – ಪುರಾಣ – ಶಾಸ್ತ್ರ ಪ್ರಪಂಚದ ಅರಿವಿಲ್ಲದಿದ್ದರೆ ಅಡಿಗರು ಪೂರ್ಣವಾಗಿ ದಕ್ಕುವುದಿಲ್ಲ. ಅಡಿಗರಲ್ಲಿ ವೇದೋಪನಿಷತ್ತುಗಳ, ಶಾಸ್ತ್ರ ಪರಿಭಾಷೆಗಳ ಪ್ರಾಚೀನ ಕರ್ಮಕಾಂಡ ಗಳ ಸರಕುಗಳು ವರ್ತಮಾನದ ಅಗತ್ಯಕ್ಕೆ ದುಡಿಯುತ್ತವೆ. ಪ್ರಾಚೀನ ಕಾವ್ಯಗಳ ಸ್ಮೃತಿ ಅಡಿಗರ ಭಾರತೀಯ ಸಂವೇದನೆಯನ್ನು ಸಾಕಾರಗೊಳಿಸುತ್ತದೆ. ಸಂಸ್ಕೃತ ಲೌಕಿಕ ನ್ಯಾಯಗಳನ್ನು ಅವರು ಬಳಸಿಕೊಳ್ಳುವ ರೀತಿ ವಿಸ್ಮಯಕರವಾದುದು. ಸಂಸ್ಕೃತ ವಸ್ತು ಪ್ರಪಂಚ ಅಡಿಗರಲ್ಲಿ ರೂಪಕ ಗಳಾಗಿ, ಪ್ರತಿಮೆಗಳಾಗಿ ನವೋನವ ರೂಪ ತಳೆಯುತ್ತವೆ.

Sri Vidyabharathi Book Centre, Sringeri

ಪುರೋಹಿತ ಶಾಹಿಯ ಪ್ರತಿಗಾಮಿ ಭಾಷೆಯೆ? : 'ಸಂಸ್ಕೃತ ವೈದಿಕ ಭಾಷೆ, ವರ್ಗ – ವರ್ಣ ಗಳನ್ನು ಪೋಷಿಸಿದ ಪುರೋಹಿತಶಾಹಿಯ ಭಾಷೆ, ಜೀವ ವಿರೋಧಿ, ಪ್ರತಿಗಾಮಿ, ಪ್ರಗತಿ ವಿರೋಧಿ, ಉಪಸಂಸ್ಕೃತಿಗಳನ್ನು ದಮನ ಮಾಡುವ, ಯಜಮಾನ ಸಂಸ್ಕೃತಿಯ ಭಾಷೆ' – ಎನ್ನುವ ಅಪಸ್ವರ ಇಂದು ಕೆಲವು ಮೂಲೆಗಳಿಂದ ಸ್ವಲ್ಪ ಗಟ್ಟಿಯಾಗಿಯೇ ಕೇಳಿಸತೊಡಗಿದೆ. ಈ ಕುರಿತು ಧೀಮಂತರೆನಿಸಿಕೊಂಡವರು ಮುಕ್ತಮನಸ್ಸಿನ ವಿವೇಕದಿಂದ ಚಿಂತನೆ ನಡೆಸಬೇಕಾಗಿದೆ. ವೇದರಾಶಿ ಏಕಕಾಲಕ್ಕೆ, ಏಕವ್ಯಕ್ತಿಯಿಂದ ಅಥವಾ ಒಂದು ವಿಚಾರಧಾರೆಯ ಗುಂಪಿನವರಿಂದ ರಚಿತವಾದದ್ದಲ್ಲ. ವೇದವನ್ನು ಕುರಿತು, ಅದರಿಂದಾಗಿ ಸಂಸ್ಕೃತವನ್ನು ಕುರಿತು ಕೇಳಿ ಬರುವ ಈ ಮೇಲಿನ ಮಾತುಗಳು ವೇದವನ್ನು ತಲಸ್ಪರ್ಶಿಯಾಗಿ ಓದದೆ, ತಿಳಿಯದೆ ಆಡುವ ಮಾತುಗಳು. ಪುರೋಹಿತಶಾಹಿಗೂ, ಭಾಷೆ – ಸಾಹಿತ್ಯಗಳಿಗೂ ಅಂತರವಿದೆ. ಎಲ್ಲ ಜನಾಂಗದಲ್ಲೂ, ಎಲ್ಲ ಸಂಸ್ಕೃತಿಯಲ್ಲೂ ಪುರೋಹಿತಶಾಹಿಗಳು, ಪ್ರತಿಗಾಮಿಗಳು ಇದ್ದಾರೆ. ಅದು ಮನುಕುಲಕ್ಕೆ ಮೊದಲಿನಿಂದಲೂ ಅಂಟಿ ಬಂದ ಶಾಪ. ಸ್ವಾತಂತ್ರ್ಯ ಹೋರಾಟ ಕಾಲದ ಗಾಂಧಿ, ಅಂಬೇಡ್ಕರ್ ತತ್ತ್ವ ಸಿದ್ಧಾಂತಗಳು ಸ್ವಾತಂತ್ರ್ಯೋತ್ತರದ ಈ ಅರವತ್ತು ವರ್ಷಗಳಲ್ಲಿ ಏನಾಗಿದೆ ಎಂಬುದು ನಮಗೆಲ್ಲ ಗೊತ್ತು. ನಮ್ಮ ರಾಜಕಾರಣಿಗಳು, ಧಾರ್ಮಿಕ – ಸಾಮಾಜಿಕ ನೇತಾರರು, ಗಾಂಧಿ – ಅಂಬೇಡ್ಕರ್ ಜಪ ಮಾಡುತ್ತಲೇ ಅವರ ತತ್ತ್ವ – ಸಿದ್ಧಾಂತಗಳನ್ನು ಯಾವ ಮಟ್ಟಕ್ಕೆ ತಂದಿಳಿಸಿದ್ದಾರೆ ಎಂದು ವಿವರಿಸಬೇಕಾದ ಅಗತ್ಯವಿಲ್ಲ. ಹೀಗಿರುವಾಗ ಗಾಂಧಿ – ಅಂಬೇಡ್ಕರ್ ಸಿದ್ಧಾಂತಗಳನ್ನು, ಅವರು ಬಳಸಿದ ಭಾಷೆಯನ್ನು ಪುರೋಹಿತಶಾಹಿ, ಪ್ರತಿಗಾಮಿನಿ, ಭ್ರಷ್ಟ – ಎಂದೆಲ್ಲ ವಿವೇಕಿಯಾದವನು ಹೇಳಿಯಾನೆ? ಉಪನಿಷತ್ತು ವೇದವಾಙ್ಮಯದ ಒಂದು ಭಾಗ. ಪ್ರಖರ ವೈಚಾರಿಕತೆ, ಜಗತ್ತಿನ ಆಕಾರ – ಅಸ್ಮಿತೆಗಳ ಮೂಲಭೂತ ತಾತ್ತ್ವಿಕ ಜಿಜ್ಞಾಸೆ ಅವುಗಳ ವಸ್ತು, ವಿಷಯ. ಶುದ್ಧ ವೈಜ್ಞಾನಿಕ ಮನೋಧರ್ಮದ ಈ ಉಪನಿಷತ್ತುಗಳು ಬೇಡವೆನ್ನಲಾದೀತೆ? ಈ ಉಪನಿಷತ್ತುಗಳ ಅನುಭಾವದ ಅಭಿವ್ಯಕ್ತಿಯ ಬಸವಣ್ಣ, ಅಲ್ಲಮ ಮೊದಲಾದವರ ವಚನ ಸಾಹಿತ್ಯ ರುಗ್ಣಸಮಾಜಕ್ಕೆ ನೀಡಿದ ಕಾಯಚಿಕಿತ್ಸೆಯನ್ನು ಮರೆಯಲಾದೀತೆ?

ಸಂಸ್ಕೃತ ಎಂದು ಒಂದು ವರ್ಗದ ಅಥವಾ ಜಾತಿಯ ಭಾಷೆಯಾಗಿರಲಿಲ್ಲ. ಭಾರತದ ಎಲ್ಲ ಧೀಮಂತ ಮನಸ್ಸುಗಳ ಮನಸ್ಸುಗಳು ಪ್ರಕಟಗೊಂಡಿರುವುದು ಈ ಭಾಷೆಯ ಮಾಧ್ಯಮದಲ್ಲಿ. ಜೇಡರ ದಾಸಿಮಯ್ಯ ಹೇಳಿದಂತೆ, **ಸಾಂಖ್ಯ ಶ್ವಪಚ, ಅಗಸ್ತ್ಯ ಶಬ್ಬಲ । ದೂರ್ವಾಸ ಮಚ್ಚಿಗ, ದಧೀಚಿಕೀಲಿಗ । ಕಶ್ಯಪ ಕಮ್ಮಾರ, ರೋಮಜ ಕಂಚುಗಾರ । ಕೌಂಡಿನ್ಯ ನಾವಿದನೆಂಬುದ ಅರಿದ ಮತ್ತೆ । ಕುಲ ಉಂಟೆಂದು ಛಲಕ್ಕೆ ಹೋರಲೇಕೆ?**

ಇಷ್ಟೇ ಅಲ್ಲ, ವಾಲ್ಮೀಕಿ ಬೇಡ, ಕಾಳಿದಾಸ ಕುರುಬ, ವ್ಯಾಸನ ಜಾತಿ ಯಾವುದು? ತಂದೆಯದೋ, ತಾಯಿಯದೋ? ವ್ಯಾಸ ಹುಟ್ಟಿಸಿದ ಕುರು ರಾಜರದು ಯಾವ ಕುಲ? ಮಹಾಜ್ಞಾನಿ ಸತ್ಯಕಾಮ ಹುಟ್ಟಿದ್ದು ಯಾರಿಗೆ? ಇದನ್ನೆಲ್ಲ ಬಿಡಿಸಿ ಹೇಳಿದ್ದು ಸಂಸ್ಕೃತವೇ ಅಲ್ಲವೆ?

ಮುಂದುವರೆಯುವುದು...

CC-0. In Public Domain. Digitized by eGangotri

ಧಾರ್ಮಿಕ ಆಚರಣೆಗಳು ಅವೈಜ್ಞಾನಿಕವೇ?

- ಶ್ರೀ ಎಸ್.ವಿ ಅಡಿಗ, ನಿವೃತ್ತ ಪ್ರಾಂಶುಪಾಲರು, ಬೆಂಗಳೂರು

ಮುಂದುವರೆದುದು

''ನಿಮಗೇನಾದರೂ ಸಮಸ್ಯೆ ಇದ್ದರೆ ಅಥವಾ ಯಾವುದಾದರೊಂದು ನಿರ್ದಿಷ್ಟ ದೇವತೆಗೆ ಹರಕೆ ಸಲ್ಲಿಸುವುದಿದ್ದರೆ ನೀವು ಒಬ್ಬ ವೈದಿಕ ವಿದ್ವಾಂಸರನ್ನು ಸಂಪರ್ಕಿಸಿದರೆ ಅವರು ನಿಮಗಾಗಿ ಸಂಬಂಧಿಸಿದ ಮಂತ್ರಗಳನ್ನುಚ್ಚರಿಸಿ ಹೋಮ ಮಾಡುತ್ತಾರೆ''.

''ನಾನು ಸಾಂದರ್ಭಿಕವಾಗಿ ಅನೇಕ ವೈದಿಕ ಧರ್ಮಾಚರಣೆಗಳಲ್ಲಿ ಉಪಸ್ಥಿತಳಿದ್ದು ಅವುಗಳ ಪರಿಣಾಮಗಳನ್ನು ಸ್ವತಃ ನೋಡಿದ್ದೇನೆ. ಇಂತಹ ಒಂದು ಧರ್ಮಾಚರಣೆಯ ನಂತರ ಕಲ್ಪನಾತೀತವಾದ ಅಸಂಭವನೀಯ ಘಟನೆಗಳು ಸಂಭವಿಸುವುದು ಅಸಾಮಾನ್ಯವಾದುದಲ್ಲ. ಆರ್ಥಿಕ ಸಹಾಯವನ್ನು ಅಪೇಕ್ಷಿಸುವ ವ್ಯಕ್ತಿಗೆ ಶೀಘ್ರವೇ ಅತ್ಯಂತ ಲಾಭದಾಯಕವಾದ ಉದ್ಯೋಗ ದೊರೆತು ಆತನ ಖಿನ್ನತೆ ಪರಿಹಾರವಾಗುತ್ತದೆ. ಆರ್ಬುದದ ಗೆಡ್ಡೆಗಳಿಂದ ಮುಕ್ತನಾಗುತ್ತಾನೆ. ಅನೇಕ ವರ್ಷಗಳ ನಷ್ಟದ ನಂತರ ವ್ಯಾಪಾರ ಇದ್ದಕ್ಕಿದ್ದಂತೆ ವೃದ್ಧಿಯಾಗುತ್ತದೆ. ನಾವು ಪಾಶ್ಚಿಮಾತ್ಯರು ಇಂತಹ ಘಟನೆಗಳನ್ನು ಕಾಕತಾಳೀಯವೆಂದು ಹೇಳಲು ಪಳಗಿದ್ದೇವೆ. ಸಾಂಪ್ರದಾಯಿಕ ವೈದಿಕ ಯಜ್ಞ ಕ್ಕ ಮಾಡಿದ ಅತ್ಯಲ್ಪ ಕಾಲದಲ್ಲೇ ಜಗತ್ತಿನಲ್ಲಿ ಯೋಗಾಯೋಗದ ಘಟನೆಗಳು ಸಕಾಲದಲ್ಲಿ ಸಂಭವಿಸಿದುದನ್ನು ಕಣ್ಣಾರೆ ಕಂಡುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಿಂದೂ ಧಾರ್ಮಿಕ ಸಿದ್ಧಾಂತದಂತೆ ಬ್ರಾಹ್ಮಣರು 'ಕುಮಾರ ಶರ್ಮನಿಗೆ ಒಂದು ನೌಕರಿ ಬೇಕು' ಎಂದು ಪ್ರಾರ್ಥನೆ ಸಲ್ಲಿಸಿದ ಕೂಡಲೇ ಆಶ್ಚರ್ಯಕರ ರೀತಿಯಲ್ಲಿ ಆತನಿಗೆ ನೌಕರಿ ದೊರಕುತ್ತದೆ''.

(Linda Johnsonರ The complete idiot's guide to Hinduism ನ ಕನ್ನಡ ಅನುವಾದ)

ಈ ದಾಖಲೆಯನ್ನು ಸಾರಾಸಗಟಾಗಿ ಅಲ್ಲಗಳೆಯಲು ಸಾಧ್ಯವಿಲ್ಲ. ಯಾಕೆಂದರೆ ಈಕೆ ನಾಲ್ಕಾರು ವರ್ಷ ಭಾರತದಾದ್ಯಂತ ಅನೇಕ ಧಾರ್ಮಿಕ, ಸಾಂಸ್ಕೃತಿಕ ಕೇಂದ್ರಗಳನ್ನು ಸಂದರ್ಶಿಸಿ, ಅಭ್ಯಸಿಸಿ ಇದನ್ನು ದಾಖಲಿಸಿದ್ದಾಳೆ.

ಹಾಗಾದರೆ ಇತ್ತೀಚಿನ ದಿನಗಳಲ್ಲಿ ಶಾಂತಿ ಹೋಮಾದಿ ಅನುಷ್ಠಾನಕ್ಕೆ ನಿರೀಕ್ಷಿತ ಪೂರ್ವಾಫಲ ಲಭಿಸದೆ ಟೀಕೆಗೆ ಗುರಿಯಾಗುತ್ತಿರುವ ಕಾರಣಗಳೇನು? ಮೊದಲು ಪ್ರಸ್ತಾವಿಸಿದಂತೆ ಯಾವುದೇ ಫಸಲನ್ನು ಪಡೆಯಬೇಕಾದರೆ ಬೀಜಾರೋಪಣದಿಂದ ಫಲಬಿಟ್ಟು ಪಕ್ವವಾಗುವ ತನಕ ತೀವ್ರ ನಿಗಾವಹಿಸದಿದ್ದರೆ, ಫಲಿಸುವ ಕಾಲಕ್ಕಾಗಿ ಕಾಯುವ ತಾಳ್ಮೆಯಿಲ್ಲದಿದ್ದರೆ ನಿರೀಕ್ಷಿತ ಫಲ ಸಿಗುವುದಿಲ್ಲವಷ್ಟೆ! ಹಾಗೆಯೇ ನಿರ್ದಿಷ್ಟ ಪರಿಕರ, ಪರಿಶುದ್ಧ ಪರಿಸರಗಳ ಅಲಭ್ಯತೆ, ಉಕ್ತ

Sri Vidyabharathi Book Centre, Sirsi

CC-0. In Public Domain. Digitized by eGangotri

ಕಾಲದಲ್ಲಿ ಕ್ರಮಬದ್ಧವಾದ ಆಚರಣೆಗೆ ಅವಕಾಶವಿಲ್ಲದಿರುವಿಕೆ, ಅಪನಂಬಿಕೆ ಮೊದಲಾದ ಅನೇಕ ಕಾರಣಗಳಿಂದಾಗಿ ಜಪ ಹೋಮಾದಿ ಯಾವುದೇ ಅನುಷ್ಠಾನಗಳಿಂದ ಪೂರ್ಣ ಫಲ ಪಡೆಯಲಾಗುತ್ತಿಲ್ಲ.

ಗ್ರಹಶಾಂತಿ : ಸೂರ್ಯೋದಯವಾಗುತ್ತಿದ್ದಂತೆ ಜೀವ ಜಗತ್ತಿನಲ್ಲಿ ಉತ್ಸಾಹ, ಚಟುವಟಿಕೆ ಪ್ರಾರಂಭವಾಗುತ್ತದೆ, ಕತ್ತಲಾಗುತ್ತಿದ್ದಂತೆ ಆಲಸ್ಯ, ನಿದ್ರೆ, ತಾಟಸ್ಥ್ಯ ಆವರಿಸುತ್ತದೆ. ಚಂದ್ರೋದಯದೊಂದಿಗೆ ಸಮುದ್ರದ ನೀರು ಹತ್ತಾರು ಅಡಿಗಳಷ್ಟು ಎತ್ತರಕ್ಕೆ ಉಕ್ಕುತ್ತದೆ. ಅಸ್ತದೊಂದಿಗೆ ಯಥಾಸ್ಥಿತಿಯುಂಟಾಗುತ್ತದೆ. ಈ ಚಂದ್ರನ ಗತಿಗನುಗುಣವಾಗಿ ಸಸ್ಯಗಳಲ್ಲಿನ ಔಷಧೀಯ ಗುಣಗಳೂ, ಇತರೆ ಪೋಷಕ ರಸಗಳೂ ಏರುಪೇರಾಗುತ್ತವೆ. ಹಾಗೆಯೇ ಆಕಾಶದಲ್ಲಿ ವಿವಿಧ ವೇಗದಲ್ಲಿ ಚಲಿಸುವ ಇತರೆ ಗ್ರಹಗಳ ಚಲನೆಯಿಂದಾಗಿ ಆಯಾ ನಕ್ಷತ್ರಗಳಲ್ಲಿ ಜನಿಸಿದ ವ್ಯಕ್ತಿಯ ಮೇಲೆ ಪರಿಣಾಮ ಉಂಟಾಗುತ್ತದೆ. ಇದು ಗ್ರಹಗಳು ತಮ್ಮ ಚಲನೆಯ ಮೂಲಕ ಸೂಚಿಸುವ ಅವನ ಗ್ರಹಚಾರ. ಅಭಿವ್ಯಕ್ತಿ ಸಮರ್ಥನಾದ ಮನುಷ್ಯ ತನಗೆ ಸಂಭವಿಸಿದ ಆಧಿವ್ಯಾಧಿಯನ್ನು ವ್ಯಕ್ತಪಡಿಸುತ್ತಾನೆ ಮತ್ತು ತಕ್ಕ ಶಾಂತಿ ಕರ್ಮವನ್ನು ಆಚರಿಸುತ್ತಾನೆ. (ಮೂಕ ಪ್ರಾಣಿಗಳ ಮೇಲೆ ಆಗುವ ಗ್ರಹಚಾರದ ಪರಿಣಾಮವನ್ನು ವ್ಯಕ್ತಪಡಿಸಲು ಅವುಗಳು ಸಮರ್ಥವಾಗುವುದಿಲ್ಲ ಅಥವಾ ಪ್ರಾಣಿಗಳು ಮೂಕ ಭಾಷೆಯಿಂದ ಸೂಚಿಸಬಹುದಾದುದನ್ನು ನಮಗೆ ಅರ್ಥೈಸಿಕೊಳ್ಳಲಾಗುತ್ತಿಲ್ಲ. ಶಾಂತಿ ಕರ್ಮಗಳಿಗೆ ಅವಶ್ಯಕವಾದ ಸಮಿತ್ತು ಮತ್ತಿತರ ಪರಿಕರಗಳನ್ನು ನಿರ್ದಿಷ್ಟ ಕಾಲದಲ್ಲಿ, ನಿರ್ದಿಷ್ಟ ವಿಧಾನದಲ್ಲಿ ಸಂಗ್ರಹಿಸಿ ಹೋಮಿಸಬೇಕೆಂಬ ನಿಯಮವಿದೆ. ಅದನ್ನು ಪಾಲಿಸಲು ಸಾಧ್ಯವಾಗದಿದ್ದರೆ ಸ್ವಾಭಾವಿಕವಾಗಿ ನಮಗೆ ಪೂರ್ಣ ಫಲ ಲಭಿಸದೆ ಯಥೋಚಿತವಾದ ಫಲ ಮಾತ್ರವೇ ಸಿಕ್ಕೀತು. (ಸಮಿತ್ತು ಮೊದಲಾದ ಸಂಗ್ರಹವನ್ನು ನಿಷೇಧಿಸುವ ಕಾನೂನನ್ನು ಜಾರಿಗೆ ತರುವ ಗುಸುಗುಸು ಒಮ್ಮೆ ಹುಟ್ಟಿತ್ತು). ಪೂರ್ಣಪ್ರಮಾಣದ ಫಲಸನ್ನು ನಿರೀಕ್ಷಿಸುವ ರೈತ ಕಡಿಮೆ ಫಸಲು ಬರಬಹುದೆಂಬ ನಿರೀಕ್ಷೆಯಿದ್ದರೂ ಬೇಸಾಯವನ್ನು ನಿಲ್ಲಿಸುವುದಿಲ್ಲ. ಹಾಗೆಯೇ ಪೂರ್ಣಫಲ ಪ್ರಾಪ್ತಿಯ ನಿರೀಕ್ಷೆಯಲ್ಲಿದ್ದಾಗಲೂ ನಾವು ಶ್ರದ್ಧಾಭಕ್ತಿಯಿಂದ ಆಚರಿಸುವ ಧಾರ್ಮಿಕ ಅನುಷ್ಠಾನಕ್ಕೆ ಫಲಪ್ರಾಪ್ತಿ ಇದ್ದೇ ಇರುತ್ತದೆ.

ನಾಲ್ಕೇ ಬತ್ತದ ಕಾಳನ್ನು ಬಿತ್ತಿ ಒಂದು ಕ್ವಿಂಟಾಲ್ ಫಲವನ್ನು ನಿರೀಕ್ಷಿಸಲಾಗದು. 10 ಕೆ.ಜಿ. ಬಿತ್ತಿದರೂ ಒಂದೇ ಕೆ.ಜಿ.ಯಷ್ಟೇ ಫಸಲು ಸಿಗುವುದೂ ಉಂಟು. ಹಾಗೆಯೇ ಕರ್ಮ - ಅನುಷ್ಠಾನದ ಸ್ವರೂಪವನ್ನನುಸರಿಸಿ ಫಲ ಸಿದ್ಧಿಸುತ್ತದೆ. 'ದೇಶಕಾಲೌ ಸಂಕೀರ್ತ್ಯ' ಎಂದು ಅನುಷ್ಠಾನದ ಪ್ರಾರಂಭ. ನಮ್ಮ ಯಾವುದೇ ಅನುಷ್ಠಾನಕ್ಕೆ ಪ್ರದೇಶ ಮತ್ತು ಸಮಯಪ್ರಜ್ಞೆ ಅವಶ್ಯಕ. ಒಂದೇ ಮನೆಯಲ್ಲಿ ಬೇರೆ ಬೇರೆ ಕೊಠಡಿಗಳಲ್ಲಿ ಬೇರೆ ಬೇರೆ ಚಟುವಟಿಕೆ ನಡೆಸುತ್ತೇವೆ. ದೇವರ ಕೋಣೆಯಲ್ಲಿ ಅಡುಗೆ, ಅಡುಗೆ ಮನೆಯಲ್ಲಿ ಮಲ ವಿಸರ್ಜನೆ, ಸ್ನಾನದ ಮನೆಯಲ್ಲಿ ಕುಳಿತು ದೇವರ ಪೂಜೆ ಮಾಡುವುದಿಲ್ಲ. ಹಾಗೆಯೇ ಸತ್ಕರ್ಮಾನುಷ್ಠಾನಕ್ಕೆ

Sri Vidyabharathi Book Centre, Sringeri

CC-0. In Public Domain. Digitized by eGangotri

ಪ್ರಶಸ್ತವಾದ ಸ್ಥಳವನ್ನು ಆಯ್ಕೆ ಮಾಡಬೇಕು. ನಮ್ಮ ಅಂತರಂಗ ಬಹಿರಂಗ ಶುದ್ಧಿಯಿರಬೇಕು. 'ಶುಚಿತ್ವವೇ ದೇವರು' ಎಂಬ ಆಂಗ್ಲ ಗಾದೆಯೊಂದಿದೆ. ಅಂತಹ ಜಾಗದಲ್ಲಿ ಮಾತ್ರ ನಮ್ಮ ಮನಸ್ಸು, ಧ್ಯಾನ ಪೂಜಾದಿಗಳಿಗೆ ಪೂರ್ಣ ಸ್ಪಂದಿಸುತ್ತದೆ. ನಮ್ಮ ದೈನಂದಿನ ಚಟುವಟಿಕೆಗಳಿಗೆ ಆಯಾ ಕಾಲದಲ್ಲಿ ಮಾತ್ರ ಮನಸ್ಸು ಪ್ರವರ್ತಿಸುತ್ತದೆ. ಹಾಗೆಯೇ ಅನುಷ್ಠಾನವನ್ನು ವಿಹಿತ ಕಾಲದಲ್ಲೇ, ನಿರ್ದಿಷ್ಟ ಜಾಗದಲ್ಲೇ ನಿರ್ವಹಿಸಿದಲ್ಲಿ ಉತ್ತಮ ಫಲ ಲಭಿಸುತ್ತದೆ. ಆದರೆ ಬದುಕಿನ ಜಂಜಾಟದಲ್ಲಿ ಯಾವುದೇ ನಿಯಮವನ್ನು ಪಾಲಿಸಲು ಈಗಿನ ದೇಶ - ಕಾಲ ಅನುಕೂಲವಾಗಿರುವುದೆಂದು ನಿರೀಕ್ಷಿಸುವಂತಿಲ್ಲ.

ಮುಂದುವರೆಯುವುದು...

ಶತಚಂಡಿಕಾ ಮಹಾಯಾಗ ಆಹ್ವಾನ ಪತ್ರಿಕಾ

ಶ್ರೀ ಆದಿಶಂಕರಾಚಾರ್ಯ ಶಾರದಾಲಕ್ಷ್ಮೀನೃಸಿಂಹ ಪೀಠಾಧೀಶ್ವರರಾದ
ಪರಮಪೂಜ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳು
ಶ್ರೀಮಠ, ಹರಿಹರಪುರ, ಇವರ ಆದೇಶಾನುಸಾರ ಲೋಕಕಲ್ಯಾಣಾರ್ಥವಾಗಿ
ಬೆಂಗಳೂರಿನಲ್ಲಿ ನಡೆದ **'ಲಲಿತಾ ಕೋಟಿ ಕುಂಕುಮಾರ್ಚನೆ'**ಯ
ಸಾಂಗತಾ ಕಾರ್ಯಕ್ರಮದ ಅಂಗವಾಗಿ **''ಶತಚಂಡಿಕಾ ಮಹಾಯಾಗ''**ವನ್ನು
ಶ್ರೀಕ್ಷೇತ್ರ ಹರಿಹರಪುರದ ಶ್ರೀ ಸೋಮೇಶ್ವರ ಯಾಗಶಾಲೆಯಲ್ಲಿ
ಹಮ್ಮಿಕೊಳ್ಳಲಾಗಿದೆ. ಶ್ರೀ ಶ್ರೀ ಸದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ
ಸೃಷ್ಟಿ ಶ್ರೀ ಜಯನಾಮ ಸಂವತ್ಸರ **ಮಾರ್ಗಶಿರ ಬಹುಳ ಷಷ್ಠಿ, ಸಪ್ತಮಿ, ಅಷ್ಟಮಿ,**
ದಿನಾಂಕ 12-12-2014 ರಿಂದ 14-12-2014ರವರೆಗೆ ನಡೆಯಲಿರುವ
ಈ ಕಾರ್ಯಕ್ರಮಕ್ಕೆ ಆತ್ಮೀಯ ಭಕ್ತಾದಿಗಳೆಲ್ಲರೂ ತನು, ಮನ, ಧನ
ಸಹಕಾರದೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ,
ಶ್ರೀ ಶಾರದಾ ಲಕ್ಷ್ಮೀನೃಸಿಂಹ ಹಾಗೂ
ಸದ್ಗುರುಗಳ ಕೃಪಾಶೀರ್ವಾದಗಳಿಗೆ ಪಾತ್ರರಾಗಬೇಕಾಗಿ ವಿನಂತಿ.

ಕಾರ್ಯಕ್ರಮದ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ
ಸಚ್ಚಿದಾನಂದ : 9449647030, ರಾಮಕೃಷ್ಣ : 93423 18429

Sri Vidyabharathi Book Centre, Sringeri

ಅಭಿಜ್ಞಾನ ಶಾಂಕುತಳ ನಾಟಕದಲ್ಲಿ ಕಣ್ವ ಮಹರ್ಷಿಗಳು

– ಡಾ|| ಕೂಡಲಿ ಜಗನ್ನಾಥ ಶಾಸ್ತ್ರಿ, ನಿವೃತ್ತ ಪ್ರಾಚಾರ್ಯರು, ಶಿವಮೊಗ್ಗ

ಪ್ರಾಚೀನ ಋಷಿಪರಂಪರೆಯಲ್ಲಿ ಬ್ರಹ್ಮಚಾರಿಗಳು, ಊರ್ಧ್ವರೇತಸ್ಕರು ಎಂದು ಪ್ರಸಿದ್ಧರಾದವರಲ್ಲಿ ಮಹರ್ಷಿ ಕಣ್ವರೂ ಒಬ್ಬರು. ಇವರು ಕಶ್ಯಪ ಮಹರ್ಷಿಗಳ ವಂಶಸ್ಥರು. ಆದ್ದರಿಂದ ಇವರನ್ನು ಕಾಶ್ಯಪರು ಎಂದು ಕರೆಯುತ್ತಿದ್ದರು. ಇವರು ಮಾಲಿನಿ ನದಿಯ ತೀರದಲ್ಲಿ ಆಶ್ರಮವನ್ನು ಸ್ಥಾಪಿಸಿಕೊಂಡಿದ್ದರು. ಮಹರ್ಷಿ ಕಣ್ವರು ಸ್ವತಃ ತಪಸ್ವಿಗಳೂ ಆಗಿದ್ದರು. ಇವರೊಂದಿಗೆ ಆ ಆಶ್ರಮದಲ್ಲಿ ಅನೇಕ ಜನ ತಪಸ್ವಿಗಳೂ ತಪಸ್ವಿನಿಯರೂ ನೆಲೆಸಿದ್ದರು. ಅಧ್ಯಯನ ಮಾಡುವ ವಿದ್ಯಾರ್ಥಿಗಳೂ ಅಧ್ಯಾಪಕ ವೃಂದವೂ ಅಲ್ಲಿದ್ದಿತು. ಆ ಆಶ್ರಮವು ಸದಾಕಾಲವೂ ಫಲಗಳಿಂದ ತುಂಬಿದ ವೃಕ್ಷ ಸಂಪತ್ತಿನಿಂದ ಕೂಡಿತ್ತು. ಅಲ್ಲಿ ಚಿತ್ರ ವಿಚಿತ್ರವಾದ ಪುಷ್ಪಗಳಿಂದ ಕೂಡಿದ ಲತೆಗಳು ವೃಕ್ಷಗಳನ್ನಾಶ್ರಯಿಸಿ ಬೆಳೆದಿದ್ದವು. ಎಲ್ಲ ವೃಕ್ಷಗಳಲ್ಲಿಯೂ ಪಕ್ಷಿಗಳು ನೆಲೆಸಿ ಸದಾಕಾಲ ಕಲರವವನ್ನುಂಟು ಮಾಡುತ್ತಾ ಆಶ್ರಮವನ್ನು ಗಾನವನವನ್ನಾಗಿ ಮಾಡಿದ್ದವು. ಈ ಗಾನರವಕ್ಕೆ ರಾಗ ಪೋಷಣೆಯೋ ಎನ್ನುವಂತೆ ದುಂಬಿಗಳ ಝೇಂಕಾರವು ಮೇಳವಿಸಿತ್ತು. ಈ ಆಶ್ರಮದ ಮಧ್ಯದಲ್ಲಿ ಯಾಗಶಾಲೆಯಿತ್ತು. ಅದು ಸದಾಕಾಲ ಅಗ್ನಿಹೋತ್ರಗಳಿಂದ, ಯಾಜ್ಞಿಕರಿಂದ ತುಂಬಿರುತ್ತಿತ್ತು. ಆಶ್ರಮದ ಒಂದು ಕಡೆಯಿಂದ ಗಂಭೀರ ಸ್ವರದಲ್ಲಿ ವಟುಗಳು ಅಭ್ಯಾಸ ಮಾಡುತ್ತಿದ್ದ ವೇದ ಸೂಕ್ತಗಳು ಕೇಳಿಸುತ್ತಿದ್ದವು. ಮತ್ತೊಂದು ಕಡೆಯಿಂದ ಆಶ್ರಮದ ಯುವತಿಯರು ಹಾಡುತ್ತಿದ್ದ ಗೀತೆಗಳು ಕೇಳಿಸುತ್ತಿದ್ದವು. ಪುಷ್ಪವಾಟಿಕೆಗಳಲ್ಲಿ ನೀರೆರೆಯುತ್ತಿರುವ ಆಶ್ರಮದ ಕನ್ನಿಕೆಯರ ಕಿಲಕಿಲ ನಗುವಿನ ಧ್ವನಿ ಮನೋಹರವಾಗಿತ್ತು. ಲತಾಕುಂಜಗಳಲ್ಲಿ ಹೂ ಬಿಡಿಸುತ್ತಾ, ಆ ಹೂವುಗಳೊಂದಿಗೆ ಸರಸ ಸಲ್ಲಾಪ ನಡೆಸುತ್ತಿರುವ ಆಶ್ರಮದ ಬಾಲಕ ಬಾಲಕಿಯರ ಓಡಾಟವು ಮೋಹಕವಾಗಿತ್ತು. ಮತ್ತೊಂದೆಡೆ ವಿವಿಧ ವಯೋಮಾನದ ಜಿಂಕೆಯ ಮರಿಗಳು ಕುಣಿದಾಡುತ್ತಾ, ನೆಗೆದಾಡುತ್ತಾ ಆಶ್ರಮ ಪ್ರದೇಶದಲ್ಲೆಲ್ಲಾ ಸ್ವೇಚ್ಛೆಯಾಗಿ ತಿರುಗಾಡುತ್ತಿದ್ದವು. ಆಶ್ರಮದ ವಿಶಾಲವಾದ ವೃಕ್ಷಗಳ ತಂಪಾದ ನೆರಳಿನಲ್ಲಿ ಹಸುಗಳು ಮಲಗಿ ವಿಶ್ರಮಿಸಿಕೊಳ್ಳುತ್ತಿದ್ದಾಗ ಕರುಗಳು ಅಲ್ಲಲ್ಲಿ ಕುಣಿದಾಡುತ್ತಾ ಕಾಡಿನ ಅಂಚಿನವರೆಗೆ ಹೋದರೂ ಹುಲಿ ಮುಂತಾದ ಕ್ರೂರಮೃಗಗಳು ಅವುಗಳನ್ನು ಹಿಂಸಿಸದೆ ತಮ್ಮ ಪಾಡಿಗೆ ತಾವು ಓಡಾಡುತ್ತಿದ್ದವು. ಹೀಗೆ ಮಹರ್ಷಿ ಕಣ್ವರ ಆಶ್ರಮವು ಶಾಂತಿಯ ನೆಲೆಯಾಗಿ ನೆಮ್ಮದಿಯ ಸೆಲೆಬೀಡಾಗಿ ಕಂಗೊಳಿಸುತ್ತಿತ್ತು.

ಮಹರ್ಷಿ ಕಣ್ವರು ಅವಿವಾಹಿತರು. ಅರಣ್ಯದಲ್ಲಿ ಆಶ್ರಮವನ್ನು ಸ್ಥಾಪಿಸಿಕೊಂಡು ಋಷಿ ಜೀವನವನ್ನು ನಡೆಸುತ್ತಿದ್ದರು. ಅವರು ಅತ್ಯಂತ ಕರುಣಾಮಯಿಗಳು. ಅವರ ಅಂತಃಕರಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾನವೀಯತೆಯ ಮಡಿಲು. ಒಂದು ದಿನ ಅವರು ಸ್ನಾನಾಹ್ನಿಕಾದಿಗಳಿಗಾಗಿ ಮಾಲತಿ ನದಿಗೆ ಹೋಗುತ್ತಿದ್ದರು, ಮಾರ್ಗಮಧ್ಯದಲ್ಲಿ ಒಂದು ಅನಾಥ ಹೆಣ್ಣು ಶಿಶುವನ್ನು ಕಂಡರು. ಆಗ ಅವರ ಹೃದಯ ಕನಿಕರದಿಂದ ಕರಗಿತು. ಅವರು ಆ ಶಿಶುವನ್ನು ಆಶ್ರಮಕ್ಕೆ ತಂದು, ಆಶ್ರಮದಲ್ಲಿದ್ದ ತಪಸ್ವಿನಿಯರ ಕೈಯಲ್ಲಿ ಕೊಟ್ಟು ರಕ್ಷಿಸಿದರು. ಆದರೆ ಅವರು ಆ ಶಿಶುವನ್ನು ದೂರ ಮಾಡಲಿಲ್ಲ. ಆ ಮಗುವಿಗೆ ಶಕುಂತಳೆ ಎಂದು ಹೆಸರಿಟ್ಟು, ಮುದ್ದು ಮಾಡಿ ಬೆಳೆಸಿದರು. ಅವಳು ಬೆಳೆದು ದೊಡ್ಡವಳಾಗುತ್ತಿದ್ದಂತೆ ಅವಳನ್ನು ಆತ್ಮೀಯತೆಯಿಂದ ಆಶ್ರಮದ ಮತ್ತು ಕುಟೀರದ ಕಾರ್ಯಕ್ರಮಗಳಲ್ಲಿ ತೊಡಗುವಂತೆ ಮಾಡಿದರು. ಶಕುಂತಳೆಗೂ ಸಹ ಅವರು ಆತ್ಮೀಯರೇ ಆದರು. ಅವರನ್ನು ಅವಳು ತಂದೆ ಮತ್ತು ತಾಯಿ ಈ ಎರಡೂ ರೂಪದಲ್ಲಿಯೂ ಕಾಣುತ್ತಿದ್ದಳು. ಕಣ್ವರು ಸಮಿತ್ತುಗಳನ್ನು ಆಯ್ದು ತಂದಾಗ, ಹೂವುಗಳನ್ನು ಬಿಡಿಸಿಕೊಂಡು ಬಂದಾಗ, ಕುಟೀರದ ಒಳಗಿನಿಂದ ಓಡಿ ಬಂದು, ಅವುಗಳನ್ನು ಕಣ್ವರ ಕೈಯಿಂದ ತೆಗೆದುಕೊಂಡು ಕುಟೀರ ದೊಳಕ್ಕೆ ತೆಗೆದುಕೊಂಡು ಹೋಗಿ, ಒಪ್ಪವಾಗಿ ಜೋಡಿಸಿ ಇಡುತ್ತಿದ್ದಳು. ಇವಳು ಅವರನ್ನು 'ಅಪ್ಪ' ಎಂದೇ ಕರೆಯುತ್ತಿದ್ದಳು. ಅವಳು ಹಾಗೆ ಕರೆದಾಗ ತನ್ನ ಸ್ವಂತ ಮಗಳೇ ಹಾಗೆ ಕರೆಯುತ್ತಿದ್ದಾಳೆ ಎನ್ನಿಸಿ ಅವರು ಸಂತೋಷಪಡುತ್ತಿದ್ದರು. ಅವಳು ಯೌವನಾವಸ್ಥೆಗೆ ಬಂದಾಗ ಅವಳಲ್ಲಿದ್ದ ಬದ್ಧತೆಯನ್ನು, ಔಚಿತ್ಯ ಪ್ರಜ್ಞೆಯನ್ನು, ಸೌಜನ್ಯ ಪ್ರವೃತ್ತಿಯನ್ನೂ ಕಂಡು ತಾನಿಲ್ಲದಾಗ ಆಶ್ರಮಕ್ಕೆ ಬರುವ ಅತಿಥಿಗಳನ್ನು ಸ್ವಾಗತಿಸುವ, ಅವರನ್ನು ಸತ್ಕರಿಸುವ ಹೊಣೆಗಾರಿಕೆಯನ್ನು ಅವಳಿಗೆ ವಹಿಸಿದ್ದರು.

ಕಾಳಿದಾಸ ಸಂಸ್ಕೃತ ಭಾಷೆಯ ಒಬ್ಬ ಮಹಾಕವಿ. ವನ ''ಅಭಿಜ್ಞಾನ ಶಾಕುಂತಲಮ್'' ಎಂಬುದು ವಿಶ್ವಪ್ರಸಿದ್ಧವಾದ ನಾಟಕ. ಅದರಲ್ಲಿ ಏಳು ಅಂಕಗಳಿವೆ. ನಾಲ್ಕನೆಯ ಅಂಕವು ಅತ್ಯಂತ ಪ್ರಸಿದ್ಧವಾದದ್ದು. ಈ ಅಂಕದಲ್ಲಿ ವರ್ಣಿತವಾಗಿರುವ ಮಹರ್ಷಿ ಕಣ್ವರ ಅಂತಃಕರಣ ಪ್ರವೃತ್ತಿ ಮತ್ತು ಲೋಕ ಜ್ಞಾನಗಳು ಲೋಕೋತ್ತರ ಪ್ರಸಿದ್ಧಿಯನ್ನು ಪಡೆದಿವೆ.

ಮಹಾಭಾರತದಲ್ಲಿ ನಿರೂಪಿತವಾಗಿರುವ ಶಕುಂತಳೆಯ ನಾಟಕದಲ್ಲಿ ವರ್ಣಿತವಾಗಿರುವ ಕಥೆಗೂ ಅಭಿಜ್ಞಾನ ಶಾಕುಂತಳಮ್ ನಾಟಕದಲ್ಲಿ ವರ್ಣಿತವಾಗಿರುವ ಕಥೆಯ ಬೆಳವಣಿಗೆಗೂ ಬಹಳ ವ್ಯತ್ಯಾಸವಿದೆ. ಆದ್ದರಿಂದ ಇಲ್ಲಿ ನಾಟಕದ ಕಥೆಯನ್ನು ಪ್ರಾರಂಭದಿಂದ ಸಂಕ್ಷಿಪ್ತವಾಗಿ ತಿಳಿಸಿ, ನಾಲ್ಕನೆಯ ಅಂಕದ ಕಥೆಯನ್ನು ವಿಸ್ತಾರವಾಗಿ ಹೇಳಿ, ಪುನಃ ಉಳಿದ ಕಥಾಭಾಗವನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ. ಇದರಿಂದ ಮಹರ್ಷಿ ಕಣ್ವರ ಪ್ರತ್ಯಕ್ಷ ಮತ್ತು ಪರೋಕ್ಷ ವ್ಯಕ್ತಿತ್ವ ಮತ್ತು ಮಹತ್ತುಗಳು ಪರಿಚಿತವಾಗುತ್ತವೆ ಎಂದು ಭಾವಿಸಲಾಗಿದೆ.

ಮುಂದುವರೆಯುವುದು...

Sri Vidyabharathi Book Centre, Sringeri

CC-0. In Public Domain. Digitized by eGangotri

ಸಂಸ್ಕೃತ ಶ್ಲೋಕಾರ್ಥ ವೈಭವ – 5

''ಗುರುಸೇವಾರತ್ನ'' ''ಸಂಸ್ಕೃತಶ್ರೀ'' ಹರಿಹರಪುರ ಬಿ.ಸುಬ್ರಹ್ಮಣ್ಯಂ

ಬೌದ್ಧ ಭಿಕ್ಷುವೊಬ್ಬ ಆ ಊರಿನ ಹೊರವಲಯದಲ್ಲಿದ್ದ ಮಾಂಸಾಹಾರಿ ಹೋಟೆಲ್‌ನಲ್ಲಿ ಕುಳಿತು ಮಾಂಸದೂಟ ಸವಿಯುತ್ತಿದ್ದಾನೆ. ಅದೇ ಮಾರ್ಗದಲ್ಲಿ ಬಂದ ಈ ಭಿಕ್ಷುವಿನ ಬಾಲ್ಯ ಸ್ನೇಹಿತನೊಬ್ಬ ಇದನ್ನು ನೋಡಿ ಚಕಿತನಾಗಿ ಗೆಳೆಯನ ಬಳಿ ಬಂದು ನಿಂತಾಗ ಅವರ ನಡುವೆ ನಡೆದ ಸಂಭಾಷಣೆಯನ್ನು ಸ್ವಾರಸ್ಯಕರವಾಗಿ ಚಿತ್ರಿಸುವ ಶ್ಲೋಕ ಹೀಗಿದೆ:–

ಭಿಕ್ಷೋ ! ಮಾಂಸ ನಿಷೇವಣಂ ಪ್ರಕುರುಷೇ ಕಿಂ ತೇನ ಮದ್ಯಂ ವಿನಾ
ಮದ್ಯಂ ಚಾಪಿ ತವ ಪ್ರಿಯಂ ಪ್ರಿಯ ಮಹೋ ವಾರಾಂಗನಾ ಭಿ ಸಹ
ವಾರಾಸ್ತ್ರೀ ಗಮನಾಯ... ದ್ಯೂತೇನ ಚೌರ್ಯೇಣ ವಾ... ಭ್ರಷ್ಟಸ್ಯ ಕಾವಾಗತಿಃ ॥

ಸಾಧು – ಸಂತರು, ಬೌದ್ಧ ಭಿಕ್ಷುಗಳು, ಸಂನ್ಯಾಸಿಗಳು ಮಾಂಸಾಹಾರ ಸೇವಿಸುವುದು ನಿಷಿದ್ಧ. ಆದರೆ ಇಲ್ಲಿ ಮಾಂಸವನ್ನು ಅತ್ಯಂತ ಉತ್ಸಾಹದಿಂದ ಉಣ್ಣುತ್ತ ಕುಳಿತ ಭಿಕ್ಷು ಮತ್ತು ಅಲ್ಲಿಗೆ ಬಂದ ಅವನ ಗೆಳೆಯ 2ನೇ ಭಿಕ್ಷು ಇವರ ನಡುವಿನ ಸಂಭಾಷಣೆ:–

2ನೇ ಭಿಕ್ಷು : ಏನಿದು? ಭಿಕ್ಷುವಾಗಿ ನೀನು ಮಾಂಸದೂಟ ಮಾಡುತ್ತಿರುವಿಯಲ್ಲ ?

1ನೇ ಭಿಕ್ಷು : ಅಯ್ಯೋ ಬಿಡು, ಮದ್ಯಪಾನವಿಲ್ಲದೆ ಮಾಂಸದೂಟವೆಲ್ಲಿ ಬಂತು?

2ನೇ ಭಿಕ್ಷು : ಹಾಗಾದರೆ ನೀನು ಮದ್ಯಪಾನ ಬೇರೆ ಮಾಡುತ್ತೀಯಾ?

1ನೇ ಭಿಕ್ಷು : ವೇಶ್ಯಾಸ್ತ್ರೀಯರೊಂದಿಗೆ ಚಕ್ಕಂದವಾಡುವಾಗ ಮದ್ಯಪಾನ ಮಾಡದೆ ಇರುವುದಾದರೂ ಹೇಗೆ?

2ನೇ ಭಿಕ್ಷು : ಅಲ್ಲಯ್ಯ... ಈ ಎಲ್ಲ ದುರಭ್ಯಾಸಗಳಿಗೆ ಬೇಕಾಗುವ ಹಣವನ್ನು ಎಲ್ಲಿಂದ ತರುತ್ತೀಯಾ?

1ನೇ ಭಿಕ್ಷು : ಎಲ್ಲಿಂದ ತರಲಿ? ಜೂಜಾಡಿಯೋ ಕಳ್ಳತನದಿಂದಲೋ ಸಂಪಾದಿಸಬೇಕು ಅಷ್ಟೇ.

2ನೇ ಭಿಕ್ಷು : ಒಬ್ಬ ಬೌದ್ಧ ಭಿಕ್ಷುವಾಗಿ ಇದೆಂತಹ ಗತಿಯಯ್ಯಾ ನಿನ್ನದು.

1ನೇ ಭಿಕ್ಷು : ಗೆಳೆಯಾ, ಸಂಪೂರ್ಣ ಭ್ರಷ್ಟನಾಗಿ ಹೋಗಿರುವವನಿಗೆ ಇನ್ಯಾವ ಗತಿ ಇದೆ ಹೇಳು.

ಈ ಸ್ವಾರಸ್ಯಕರವಾದ ಶ್ಲೋಕದ ಮೂಲಕ ಕವಿಯು ಒಂದು ನೈತಿಕ ಸತ್ಯವನ್ನು ತಿಳಿಸಿ ಹೇಳಿದ್ದಾನೆ. ಯಾರೇ ಆಗಲಿ ಒಂದು ಕೆಟ್ಟ ಚಟಕ್ಕೆ ಬಲಿಯಾದರೆ ಅದಕ್ಕೆ ಪೂರಕವಾದ ಕೆಟ್ಟ ಚಟಗಳ ಸರಮಾಲೆಯೇ ಅವನನ್ನು ಸುತ್ತಿಕೊಂಡು ಭ್ರಷ್ಟನನ್ನಾಗಿ ಮಾಡಿ ಬಿಡುತ್ತದೆ.

Sri Vidyabharathi Book Centre, Sringeri

ಇವತ್ತು ಎಲ್ಲೆಡೆ ಹೆಚ್ಚುತ್ತಿರುವ ಅಪರಾಧ ಪ್ರಕರಣಗಳು ಬಯಲಾದಾಗ ಅಪರಾಧಿಗಳೇ ಸ್ವತಃ ತಾವು ವಿಲಾಸೀ ಜೀವನದ ಸಲುವಾಗಿ ಇಂಥದ್ದೆಲ್ಲ ಮಾಡತೊಡಗಿದೆವು ಎಂಬ ಸತ್ಯವನ್ನು ಬಾಯಿ ಬಿಡುತ್ತಿದ್ದಾರೆ.

ಆದ್ದರಿಂದ ಧೂಮಪಾನ, ಮದ್ಯಪಾನ, ಜೂಜು ಇತ್ಯಾದಿ ದುಶ್ಚಟಗಳಿಂದ ಎಂದಿಗೂ ದೂರವಿರುವುದೊಂದೇ ನೆಮ್ಮದಿಯ ಬದುಕಿಗೆ ದಾರಿ.

20ನೇ ಪುಟದಿಂದ

ಮಹಿಳಾ ಸಂಘಗಳಾದಿಯಾಗಿ ಎಲ್ಲರೂ ಹರಿಹಾಯುವವರೇ. ಯೇಸುದಾಸರಂತಹ ಸಭ್ಯ ವ್ಯಕ್ತಿಯನ್ನೂ ಈ ವಿಚಾರದಲ್ಲಿ ನಿಂದಿಸಿದ್ದಾಯಿತು. ಇಂತಹುದಕ್ಕೆ ಪ್ರಚಾರ ಕೊಡುವ ಮಾಧ್ಯಮಗಳು ಬೇರೆ? ಸ್ವಾತಂತ್ರ್ಯವೆಂಬುದು ಇಂದು ಸ್ವೇಚ್ಛಾಚಾರವಾಗುತ್ತಿದೆ. ಯಾವುದೇ ಸ್ವಾತಂತ್ರ್ಯವು ಸಂಪೂರ್ಣ ಸ್ವಾತಂತ್ರ್ಯವಲ್ಲ. ಅದೂ ಕೂಡಾ ಕೆಲವು ಮಿತಿಗೊಳಪಟ್ಟಿದ್ದರೇನೆಯೇ ಸ್ವಾತಂತ್ರ್ಯವಾಗುತ್ತದೆ. ಇಲ್ಲದಿದ್ದರೆ ಅದು ಸ್ವೇಚ್ಛಾಚಾರವಾಗುತ್ತದೆ. ಸ್ವೇಚ್ಛೆಯಿಂದ ವರ್ತಿಸುವುದಾದರೆ ನಮಗೆ ಪ್ರಶಾಸನ, ನ್ಯಾಯ ವ್ಯವಸ್ಥೆ, ಪೋಲಿಸ್ ವ್ಯವಸ್ಥೆ ಏಕೆ ಬೇಕು? ಎಲ್ಲವೂ ಮುಕ್ತವಾಗಲಿ, ಆಗ ಪಶುಗಳಿಗೂ, ಮನುಷ್ಯರಿಗೂ ಏನು ವ್ಯತ್ಯಾಸ? ಆಕೃತಿಯಲ್ಲಿ ಮಾತ್ರ ವ್ಯತ್ಯಾಸ, **ಪಶುಗಳ ಸಮೂಹಕ್ಕೆ 'ಸಮಜ' ಎಂದು ಹೆಸರು. ಮನುಷ್ಯರ ಸಮೂಹಕ್ಕೆ 'ಸಮಾಜ'ವೆಂದು ಹೆಸರು. ಈಗೀಗ ನಮ್ಮ ಸಮಾಜವು ಸಮಜವಾಗುತ್ತಿದೆಯೇನೋ ಅನಿಸುತ್ತಿದೆ.**

ಧಾರ್ಮಿಕ ಪ್ರಜ್ಞೆ, ಒಳ್ಳೆಯದು ಕೆಟ್ಟದರ ವಿವೇಕ, ಸ್ವಾತಂತ್ರ್ಯ, ಸ್ವೇಚ್ಛಾಚಾರಗಳ ಭೇದ ಮೊದಲಾದುವನ್ನು ತಿಳಿದು ನಡೆದರೆ ನಮ್ಮದು ಸಮಾಜವಾಗಿ ಉಳಿಯುತ್ತದೆ. ಇಲ್ಲವಾದಲ್ಲಿ ಅಧೋಗತಿ ಕಟ್ಟಿಟ್ಟ ಬುತ್ತಿ, ಧರ್ಮಾಧಾರಿತವಾದ ಸಂಪಾದನೆ, ಧರ್ಮಾಧಾರಿತವಾದ ಕಾಮ ಇವುಗಳನ್ನು ಪ್ರತಿಯೊಬ್ಬರೂ ತಿಳಿದುಕೊಂಡು ಅದರಂತೆ ನಡೆದುಕೊಂಡರೆ ಈ ಸಮಾಜ ಇಷ್ಟು ಹಾಳಾಗುತ್ತಿರಲಿಲ್ಲ. ಇದಕ್ಕೆಲ್ಲ ಸ್ವನಿಯಂತ್ರಣ (Self restraint) ಮುಖ್ಯ. ತಂದೆ ತಾಯಂದಿರು ತಮ್ಮ ಮಕ್ಕಳಿಗೆ ಸ್ವಾತಂತ್ರ್ಯ ನೀಡಿ, ಸ್ವೇಚ್ಛಾಚಾರಕ್ಕೆ ಕಡಿವಾಣ ಹಾಕಿದರೆ ಸಮಾಜವು ನಿಯಂತ್ರಣದಲ್ಲಿರಲು ಸಾಧ್ಯ. ಇಲ್ಲವಾದರೆ ಮುಂದಿನ ದಿನಗಳನ್ನು ಊಹಿಸಿಕೊಳ್ಳುವುದೂ ಕಷ್ಟ. ಎಲ್ಲಿಯವರೆಗೆಂದರೆ ಇನ್ನು ಹೀಗೇ ಮುಂದುವರಿದಲ್ಲಿ ಮುಕ್ತಲೈಂಗಿಕತೆಯೂ ಸಮಾಜದಲ್ಲಿ ಉಂಟಾಗಬಹುದು. ಆಗ ಪಶುಗಳಿಗೂ ಮನುಷ್ಯನಿಗೂ ಏನೂ ವ್ಯತ್ಯಾಸವಿಲ್ಲವೆಂದಾಗುತ್ತದೆ. ಹಾಗಾಗದಿರಲೆಂದು ಆಶಿಸೋಣ.

Sri Vidyabharathi Book Centre, Sringeri

In Public Domain. Digitized by eGangotri

ಶ್ರೀಕೋಳಿವಾಡ ರತ್ನಾಕರ ಭಟ್ಟ ವಿರಚಿತ
''ಶ್ರೀ ಶಂಕರಾಯಣ'' ಕಾವ್ಯ
ಸರ್ಗ–6, ಶಂಕರರ ಬಾಲ್ಯ

ಸರ್ಗಸಾರ ನಿರೂಪಣೆ : ಶ್ರೀಮತಿ ವಿಜಯಾ ಹೆಗ್ಡೆ, ಗೋವಾ

ಮುಂದುವರೆದುದು

ಶಂಕರರ ಬಾಲ್ಯ (ಶಂಕರ – ಶಿವಗುರು ಸಂವಾದ)

ಬಾಲಕ ಶಂಕರರು ಜಿಜ್ಞಾಸೆಯ ಮುಂದಿನ ಹಂತದಲ್ಲಿ ಪಿತನನ್ನು ಪ್ರಶ್ನಿಸುತ್ತಾರೆ. 'ಜಗತ್ತು ಯಾರಿಂದ ಸೃಷ್ಟಿಯಾಯಿತು? ಸೂರ್ಯ – ಚಂದ್ರ ಭೂಮಿಯ ಚಲನೆಯೆಂತು? ಜಗತ್ತಿನ ಜೀವರ ಸೃಷ್ಟಿ-ಲಯದ ಬಗೆಗೆ ತಿಳಿಸಿರಿ' ಎನ್ನುತ್ತಾರೆ. ಈ ಪ್ರಶ್ನೆಗೆ ಶಿವಗುರು ಕೊಟ್ಟ ಉತ್ತರವನ್ನೇ ಡಿವಿಜಿಯವರು ತಮ್ಮ ಕಗ್ಗವೊಂದರಲ್ಲಿ ವ್ಯಾಖ್ಯಾನಿಸುತ್ತಾರೆ. ''**ಮೇಲೆ ಕೆಳಗೊಳಗೆ ಬಳಿ ಸುತ್ತಲೆತ್ತತ್ತಲೊಂ ಮೂಲೆಮೂಲೆಯಲಿ ವಿದ್ಯುಲ್ಲಹರಿಯೊಂದು । ಧೂಳಿಕಣ ಭೂಗೋಲ ರವಿಚಂದ್ರ ತಾರೆಗಳು ಚಾಲಿಪುದು ಬೀಳ್ಗೊಡದೆ ಮಂಕುತಿಮ್ಮ**''.

'**ಜ್ವಾಲಮಾಲ ಕುಲಂಭಾತಿ ವಿಶ್ವಸ್ಯಾಯತನಂ ಮಹತ್**' ಎಂಬ **ನಾರಾಯಣೋಪನಿಷತ್**ನ ಮಂತ್ರದಂತೆ 'ಮೇಲೆ ಕೆಳಗೆ ಒಳಗೆ ಹೊರಗೆ ಸರ್ವತ್ರ ವ್ಯಾಪಿಸಿದ ವಾಙ್ಮನೋತೀತವಾದ ವಿದ್ಯುನ್ಮಾಲೆಯೊಂದು ಸೂರ್ಯ ಚಂದ್ರ ಭೂಮಿಯನ್ನು ಚಲಿಸುತ್ತ ಜಗವನ್ನು ಸೃಷ್ಟಿಸಿ ಲಯಿಸುತ್ತದೆ. ಅದುವೇ ಪರಮಾತ್ಮ, ಪರಮ ಅದ್ವೈತ. ಆ ಸರ್ವವ್ಯಾಪಕ ತತ್ತ್ವದ ಅಭಿವ್ಯಕ್ತಿಯೇ ಈ ಜಗತ್ತು' ಎಂದು ತಂದೆ ಮಗನಿಗೆ ಬೋಧಿಸುತ್ತಾರೆ.

ತತ್‌ಕ್ಷಣ ಮುಂದಿನ ಪ್ರಶ್ನೆ ಎದುರಾಯಿತು ತಂದೆಗೆ. ಮರಣವನ್ನು ಗೆಲ್ಲುವುದು ಹೇಗೆ? ವಿಶ್ವವನ್ನು ಗೆಲ್ಲುವುದು ಹೇಗೆ? ಮನಸ್ಸನ್ನು ಗೆಲ್ಲುವುದು ಹೇಗೆ? ಎಂದು.

ಶಿವಗುರು ಉತ್ತರಿಸುತ್ತಾರೆ. ಮೃತ್ಯುವನ್ನು ಗೆಲ್ಲಲು ಸಾಧ್ಯವಿಲ್ಲ. ಯಾಕೆಂದರೆ ಪರಮಾತ್ಮನೇ ಕಾಲರೂಪಿ ಯಮ. ಆದರೆ ಮೃತ್ಯುಂಜಯನಾಗುವುದು ಸಾಧ್ಯವಿದೆ. ಅದೇ ಅವನಾಗಿ ಬಿಡುವುದು, ಪೂರ್ಣನಾಗುವುದು. '**ಜ್ಞಾನೀಯ್ತ್ಮೈವ ಮೇ ಮತಮ್**' ಎಂಬ ಗೀತಾವಾಣಿಯಂತೆ ಅದ್ವೈತವಾಗಿ ಬಿಡುವುದು. ಇದೇ ವಿಷಯವನ್ನೇ **ಶ್ರೀ ಶ್ರೀಧರ ಸ್ವಾಮಿಗಳು** ತಮ್ಮ '**ವಿಶ್ವಧರ್ಮಾಭ್ಯುದಯಮ್**'ನಲ್ಲಿ ಈ ರೀತಿ ಹೇಳುತ್ತಾರೆ. '**ವರಕಣಾ ಪ್ರರಬ್ರಹ್ಮ ನೀನೇ, ಕರಚರಣದಿಂ ರಹಿತನಾಗಿಹೆ, ಮರಣ ಭಯ ನಿನಗಿಲ್ಲವೆನ್ನುತ ಸಾರುವುದು ಸತತ**' ಎಂದು ಸನಾತನ ವೈದಿಕ ಧರ್ಮದ ಮಹತ್ವವನ್ನು ತಿಳಿಸುತ್ತಾರೆ.

ಮೃತ್ಯುಂಜಯನ ಅಂಶವಾದ ಶಂಕರರಿಗೆ ತಂದೆಯು ಜನನ – ಮುಪ್ಪು – ಮರಣದ ಅರ್ಥವನ್ನು ಸ್ವತಃ ಮನಸಿನಲ್ಲಿ ತಪಿಸಿ ಜ್ಞಾನಗೋಚರ ಮಾಡಿಕೊಳ್ಳೆಂದು ಹೇಳುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಅಜ್ಞಾನವೇ ಮರಣ, ಪ್ರಜ್ಞಾನವೇ ಜನ್ಮ - ಜೀವನ'ವೆಂಬ ಸಂಗತಿಯನ್ನು ತಿಳಿಸುತ್ತಾ ತನ್ನ ಮನಸ್ಸನ್ನು ತಾನು ಗೆದ್ದವನು ಇಡೀ ವಿಶ್ವವನ್ನೇ ಜಯಿಸಬಲ್ಲವನೆಂಬ ಸತ್ಯವನ್ನು ತಿಳಿಸುತ್ತಾರೆ. ಹಾಗೆಯೇ 'ವಿಶ್ವದ ಪ್ರಕೃತಿ ಸಂಪತ್ತೆಲ್ಲವನ್ನೂ ವಿಕೃತಿಗೊಳಿಸದೇ, ದುರಾಸೆಗಳಿಲ್ಲದೇ ಸಮತ್ವದ ಮನೋಭಾವನೆಯಲ್ಲಿ ಸುಕೃತಿಗೆ ಬಳಸಿಕೊಂಡರೆ ಅದೇ ಮನಸ್ಸನ್ನು ಗೆಲ್ಲುವಿಕೆ' ಎಂದ ಸಂದೇಶವನ್ನು ತಂದೆ ತಿಳಿಯ ಹೇಳುತ್ತಾರೆ. **ಇದೇ ಈಶಾವಾಸ್ಯೋಪನಿಷತ್‌ನ ಮಂತ್ರದ ಸಂದೇಶ. ''ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ । ತೇನ ತ್ಯಕ್ತೇನ ಭುಂಜೀಥಾ ಮಾಗೃಧ ಕಸ್ಯಸ್ವಿದ್ಧನಮ್''**. ಇದೇ ಮನಸ್ಸನ್ನು ಹಾಗೂ ಜಗತ್ತನ್ನು ಮತ್ತು ಮೃತ್ಯುವನ್ನು ಗೆಲ್ಲುವ ಉಪಾಯವೆಂದು ಬ್ರಹ್ಮಜ್ಞಾನಿ ಪಿತನು ಬ್ರಹ್ಮಜ್ಞಾನಿ ಸುತನಿಗೆ ವಿವರಿಸುತ್ತಾರೆ.

ಶಿವಗುರುವು ಇಳೀ ವಯಸ್ಸಿನಲ್ಲೂ ಪುಟ್ಟ ಮಗನ ವೇದಾಂತ ಕೌತುಕದ ಪ್ರಶ್ನೆಗಳಿಗೆ ಅತ್ಯುತ್ಸಾಹದಿಂದ ಉತ್ತರಿಸುತ್ತಾರೆ. ಅವರಿಗೆ ಯಮ ಧರ್ಮ - ನಚಿಕೇತರ ಸಂಭಾಷಣೆಯನ್ನು ಇದು ನೆನಪಿಗೆ ತರುತ್ತದೆ.

ಕಠೋಪನಿಷತ್ತಿನ ಈ ವಿಷಯವನ್ನು ಶಂಕರರಿಗೆ ತಿಳಿಸುತ್ತ **''ಈ ಅಧ್ಯಾತ್ಮ ವಿದ್ಯೆಯನ್ನು (ಆತ್ಮವಿದ್ಯೆ) ಹೃದಯದಲ್ಲಿ ನೆಲೆಗೊಳಿಸಿ ಅದರಂಬ ಬಾಳುವವನ ಜೀವನ ಸಾರ್ಥಕ''**ವೆಂದು ಗುರುರೂಪಿ ತಂದೆ ಮಗನ ಮೂಲಕ ಲೋಕದ ಜನರಿಗೆಲ್ಲ ತಿಳಿಸುತ್ತಾರೆ. ಮುಂದುವರೆಸುತ್ತ ಶಿವಭಕ್ತ - ಜ್ಞಾನಿ ಪಿತ, ಶಿವರೂಪಿ ಮಗನಿಗೆ ಅರುಹುವ ವಿಚಾರವೆಂದರೆ ಗೀತೆಯಲ್ಲಿ (8ನೇ ಅಧ್ಯಾಯ 24, 25, 26) ಪರಮಾತ್ಮ ಲೋಕಕ್ಕೆ ನೀಡಿದ ಬೆಳಕಿನ ಹಾಗೂ ಕತ್ತಲೆಯ ಮಾರ್ಗ (ಶುಕ್ಲ, ಕೃಷ್ಣ ಗತಿಃ)ಗಳನ್ನು ತಿಳಿಸಿ ಇದನ್ನು ಸರಿಯಾಗಿ ತಿಳಿದು ನಡೆಯಲು ಅದೇ ಬ್ರಹ್ಮಮಾರ್ಗವೆಂದೂ ಇದರಿಂದ ಜನ್ಮ - ಮರಣವನ್ನು ದಾಟಿ ಜೀವನ್ಮುಕ್ತಿಯನ್ನು ಪಡೆಯಬಹುದೆಂದು ತಿಳಿಸುತ್ತಾರೆ.

ಇಷ್ಟೆಲ್ಲ ಮಹತ್ವದ ಸಂಗತಿಗಳನ್ನು ತನ್ನಿಂದ ಕೇಳಿ ತಿಳಿದ ಮಗನ ಏಕಸಂಧಿಗ್ರಾಹಿತ್ವವನ್ನೂ, ಮೇಧಾಶಕ್ತಿಯನ್ನೂ ಕಂಡು ತಂದೆ ತನ್ನ ಮಗ ಜಗದಗಲದಲ್ಲಿ ವಿಖ್ಯಾತನಾಗುವ ಬ್ರಹ್ಮಜ್ಞಾನಿ - ಜಗದ್ಗುರುವಾಗುವನೆಂದು ಅರಿತು ತನಗೆ ದೊರೆತ ಶಿವನ ವರ ಸಫಲವಾಯಿತೆಂದು ಹರ್ಷದಿಂದ ತನ್ನ ಆರಾಧ್ಯದೈವನ್ನು ಮನಸಾ ನಮಿಸುತ್ತಾರೆ.

ಚಂದಾದಾರರ ಗಮನಕ್ಕೆ

ಈ ಪತ್ರಿಕೆಯನ್ನು ಪ್ರತೀ ತಿಂಗಳು 26ನೇ ತಾರೀಖಿನಂದು ಬೆಂಗಳೂರಿನ ಜಿಪಿಓ ಅಂಚೆ ಕಛೇರಿಯಿಂದ ಕಳುಹಿಸಲಾಗುತ್ತದೆ. ಈ ಪತ್ರಿಕೆ ತಲುಪದೇ ಇದ್ದ ಪಕ್ಷದಲ್ಲಿ ಅಂತಹ ಚಂದಾದಾರರು ಅವರವರಿಗೆ ಸಂಬಂಧಿಸಿದ ಅಂಚೆಕಛೇರಿಗಳಿಗೆ ಒಂದು ಲಿಖಿತ ಅರ್ಜಿಯನ್ನುಸಲ್ಲಿಸಿ ಅದರ ಪ್ರತಿಯನ್ನು ಬೆಂಗಳೂರು ಶ್ರೀಮಠಕ್ಕೆ ಕಳುಹಿಸಿದಲ್ಲಿ ಈ ತೊಂದರೆ ನಿವಾರಣೆಗೆ ಸೂಕ್ತಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆ.

CC-0. In Public Domain. Digitized by eGangotri

ಬ್ರಿಟಿಷ್ ಪೂರ್ವ ಭಾರತದಲ್ಲಿ ಶಿಕ್ಷಣ ವ್ಯವಸ್ಥೆ

ಹಿಂದಿ ಮೂಲ : ರಾಮಸ್ವರೂಪ್ ಕನ್ನಡಕ್ಕೆ : ಕೇಶವ ಭಟ್

ಕೃಪೆ : ಉತ್ಥಾನ ಮಾಸಪತ್ರಿಕೆ (ಡಿಸೆಂಬರ್ 1985)

ಮುಂದುವರೆದುದು

ಬ್ರಿಟಿಷ್ ಸರ್ವೇಕ್ಷಣ ಕಾಲದಲ್ಲಿ ಭಾರತೀಯ ಶಿಕ್ಷಣ ವ್ಯವಸ್ಥೆ ಜರ್ಝರಿತವಾಗಿದ್ದರೂ ಕೂಡ ಆ ದಿನಗಳ ಅಳಿದುಳಿದ ವ್ಯವಸ್ಥೆಯನ್ನು ನೋಡಿಯೇ ಭಾರತೀಯ ಶಿಕ್ಷಣ ವ್ಯವಸ್ಥೆಯ ಆ 'ಮನೋಹರ ವೃಕ್ಷ' ದೇಶದ ಗ್ರಾಮಗ್ರಾಮಗಳಲ್ಲಿ ತನ್ನ ಶಾಖೆಗಳನ್ನು ಹರಡಿ ದೇಶದ ಸಂಸ್ಕೃತಿಯ ಸೌಂದರ್ಯವನ್ನು ವಿಜೃಂಭಿಸಿತ್ತು ಎಂಬುದನ್ನು ತಿಳಿದುಕೊಳ್ಳಬಹುದಾಗಿತ್ತು.

ಮದ್ರಾಸ್ ಪ್ರೆಸಿಡೆನ್ಸಿಯ ಎಲ್ಲಾ ಜಿಲ್ಲೆಗಳ ರಿಪೋರ್ಟ್‌ಗಳನ್ನು ಸಂಗ್ರಹಿಸಿ ಅದರ ಆಧಾರದ ಮೇಲೆ 1826ರಲ್ಲಿ ತನ್ನ ಟಿಪ್ಪಣಿಯನ್ನು ಬರೆಯುತ್ತಾ ಸರ್ ಥಾಮಸ್ ಮನ್ರೋ ತನ್ನ ಆಡಳಿತ ಕ್ಷೇತ್ರದಲ್ಲಿ ಆಗ 1,88,650 ಮಂದಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುವ 12,498 ಪಾಠಶಾಲೆಗಳು ಇದ್ದವೆಂದು ಹೇಳಿದ್ದಾನೆ. ಅದಲ್ಲದೆ ತಮ್ಮ ತಮ್ಮ ಮನೆಗಳಲ್ಲೇ ಶಿಕ್ಷಣ ಪಡೆಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯೇ ಅಧಿಕವಾಗಿತ್ತು. ಕೇವಲ ಮದ್ರಾಸ್ ಜಿಲ್ಲೆಯೊಂದರಲ್ಲೇ ಅಂತಹ ವಿದ್ಯಾರ್ಥಿಗಳ ಸಂಖ್ಯೆ ಪಾಠಶಾಲೆಗೆ ಹೋಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗಿಂತ ಐದು ಪಟ್ಟು ಹೆಚ್ಚಿತ್ತು. ಎರಡೂ ಪ್ರಕಾರದ ವಿದ್ಯಾರ್ಥಿಗಳ ಸಂಖ್ಯೆಯನ್ನು ಸೇರಿಸಿಕೊಂಡು ಸರ್ ಮನ್ರೋ ಶಾಲೆಗೆ ಹೋಗುವ ವಯಸ್ಸಿನ ಹುಡುಗರಲ್ಲಿ ಪ್ರತಿ ಮೂವರು ಹುಡುಗರಲ್ಲಿ ಒಬ್ಬರಿಗೆ ಶಿಕ್ಷಣ ಸಿಗುತ್ತಿರುವುದಾಗಿ ನಿಷ್ಕರ್ಷೆ ತಳೆದಿದ್ದ. ಅವನ ಈ ನಿಷ್ಕರ್ಷೆಯನ್ನು ಅನಂತರ ಏಡಮ್ ಕೂಡ ಸಮರ್ಥಿಸಿದ್ದಾನೆ.

ಅದೇ ಸಮಯದಲ್ಲಿ ಸಂಪೂರ್ಣ ಮುಂಬಯಿ ಪ್ರೆಸಿಡೆನ್ಸಿಯಲ್ಲೂ ಕೂಡ ಅದೇ ತರಹದ ಪಾಠಶಾಲೆಗಳು ಯಥೇಚ್ಛವಾಗಿದ್ದವು. ಲಿಟ್ನರ್‌ನ ಸಂಶೋಧನೆಯೂ ಕೂಡ ಕೆಲವಾರು ವಿಷಯಗಳನ್ನು ಸ್ಪಷ್ಟಪಡಿಸುತ್ತದೆ. ಮುಂಬಯಿ ಪ್ರೆಸಿಡೆನ್ಸಿಯಲ್ಲಿ 30 ವರ್ಷಕ್ಕೂ ಅಧಿಕ ಕಾಲದಿಂದ ಬ್ರಿಟಿಷ್ ಆಡಳಿತ ಉತ್ಪೇಕ್ಷೆ ಹಾಗೂ ದಮನಕಾರಿ ನೀತಿಗಳು ನಡೆಸಿದ್ದರೂ ಕೂಡ ಆ ಸಮಯದಲ್ಲಿ 80 ಸಾವಿರ ವಿದ್ಯಾರ್ಥಿಗಳು ಪಂಜಾಬಿನ ದೇಶೀಯ ಪಾಠಶಾಲೆಗಳಲ್ಲಿ ಹಾಗೂ ವಿದ್ಯಾಲಯಗಳಲ್ಲಿ ಶಿಕ್ಷಣ ಪಡೆಯುತ್ತಿದರು ಎಂದು ಲಿಟ್ನರ್ ತಿಳಿಸುತ್ತಾನೆ. ಇದಕ್ಕೂ ಮೊದಲು ಸರ್ ಥಾಮಸ್ ಮನ್ರೋ 1810ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ ಕುರಿತಾಗಿ ಬರೆಯುತ್ತಾ ಅಲ್ಲಿ ಪ್ರತಿ ಗ್ರಾಮಕ್ಕೆ ಒಂದರಂತೆ ಪಾಠಶಾಲೆ ಇತ್ತು ಎಂದೂ ಹೇಳಿದ್ದಾನೆ. ವಿಲಿಯಂ ಏಡಮ್ ಕೂಡ ಬಂಗಾಲ ಮತ್ತು ಬಿಹಾರಗಳಲ್ಲಿ ಸುಮಾರು ಒಂದು ಲಕ್ಷ ಪಾಠಶಾಲೆಗಳಿದ್ದಿರಬಹುದು ಎಂದು ಅನುಮಾನಿಸಿದ್ದ. ಜಿ.ಎಲ್ ಪೆಂಡರ್‌ಗಾಸ್ಟ್ ಮತ್ತು ಬಿ.ಡಬ್ಲ್ಯು. ಲಿಟ್ನರ್ ಕೂಡ ಮುಂಬಯಿ ಹಾಗೂ ಪಂಜಾಬ್ ಪ್ರೆಸಿಡೆನ್ಸಿಗಳ ಬಗ್ಗೆ ಇಂತಹುದೇ ನಿಷ್ಕರ್ಷೆಗೆ ಬಂದಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಉನ್ನತ ಶಿಕ್ಷಣ : ಆಗಿನ ಕಾಲದಲ್ಲಿ ಈ ರೀತಿಯ ಪಾಠಶಾಲೆ ಹಾಗೂ ವಿದ್ಯಾಲಯಗಳಲ್ಲಿ ದೊರಕುವ ಪ್ರಾಥಮಿಕ ಶಿಕ್ಷಣದ ನಂತರ ಉನ್ನತ ಶಿಕ್ಷಣ ನೀಡುವುದಕ್ಕಾಗಿ ಕೂಡ ದೇಶವ್ಯಾಪೀ ವ್ಯವಸ್ಥೆಯಿತ್ತು. ಕಲ್ಕತ್ತಾದ Monthly Register 1891ರ ಜನವರಿಯಲ್ಲಿ ಬಂಗಾಳದ ಪ್ರಸಿದ್ಧ ಶಿಕ್ಷಣಾ ಕೇಂದ್ರವಾದ 'ನದಿಯಾ' (ನವದ್ವೀಪ)ದ ಬಗ್ಗೆ ಈ ರೀತಿ ಅಭಿಪ್ರಾಯಪಟ್ಟಿದೆ. ''ಕೇವಲ ನದಿಯ ವಿಶ್ವವಿದ್ಯಾಲಯದಲ್ಲಿ 1100 ವಿದ್ಯಾರ್ಥಿಗಳು ಹಾಗೂ 150 ಮಂದಿ ಅಧ್ಯಾಪಕರು ಇದ್ದಾರೆ. ಆದರೆ ಈ ಸಂಖ್ಯೆ ಇಂದು ಕಡಿಮೆಯಾಗುತ್ತಿರುವುದೂ ಅಷ್ಟೇ ನಿಜ. ಏಕೆಂದರೆ 1680ರ ಸುಮಾರಿಗೆ ರಾಜಾರುದ್ರನ ಕಾಲದಲ್ಲಿ ನದಿಯಾದಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ 4000ಕ್ಕೂ ಅಧಿಕವಿತ್ತು ಮತ್ತು ಅದಕ್ಕೆ ಅನುಗುಣವಾಗಿ ಅಧ್ಯಾಪಕರ ಸಂಖ್ಯೆಯೂ ಇತ್ತು''.

ಈ ಎಲ್ಲ ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಹಾಗೂ ವಿದ್ಯಾಲಯದ ಖರ್ಚು ನಿರ್ವಹಣೆ ಅಂದಿನ ಕಾಲದಲ್ಲಿ ದಾನಭೂಮಿಗಳಿಂದ ನಡೆಯುತ್ತಿತ್ತು. ಖರ್ಚು ಇನ್ನೂ ಅಧಿಕವಾದರೆ ಆಗ ರಾಜಕೋಶದಿಂದ ಅದನ್ನು ತುಂಬಿಕೊಡಲಾಗುತ್ತಿತ್ತು. ವಾರ್ಡ್ ಎಂಬ ಒಬ್ಬ ಸಂಶೋಧಕನ ಅಭಿಮತದಂತೆ 1818ರಲ್ಲಿ ಕಲ್ಕತ್ತಾದಲ್ಲಿ ಇಂತಹ 28 ಮಹಾವಿದ್ಯಾಲಯಗಳಿದ್ದವು. ರಾಜಶಾಹೀ ಜಿಲ್ಲೆಯ ಥಾಣಾ ನೈಟೋರ್‌ನಲ್ಲಿ 397 ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದ 38 ಮಹಾವಿದ್ಯಾಲಯಗಳು ಇದ್ದುದನ್ನು ಏಡಮ್ ಕಂಡುಕೊಂಡಿದ್ದ. ಅವುಗಳಲ್ಲಿ 26 ಮಹಾವಿದ್ಯಾಲಯಗಳಲ್ಲಿ ದೂರದೂರದ ಪ್ರದೇಶಗಳಿಂದ ವಿದ್ಯಾಭ್ಯಾಸಕ್ಕೆಂದು ವಿದ್ಯಾರ್ಥಿಗಳು ಬರುತ್ತಿದ್ದರು ಎಂದೂ ಅವರು ತಿಳಿಸಿದ್ದಾನೆ.

ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಉಚ್ಚಶಿಕ್ಷಣಕ್ಕಾಗಿ 5431 ವಿದ್ಯಾರ್ಥಿಗಳಿಂದ ಕೂಡಿದ 1101 ಮಹಾವಿದ್ಯಾಲಯ ಇದ್ದ ಬಗ್ಗೆ ವರದಿಯಿದೆ. ಇದರಲ್ಲಿ 279 ಮಹಾವಿದ್ಯಾಲಯಗಳಿಂದ ಕೂಡಿದ ರಾಜಮಹೇಂದ್ರೀ ಜಿಲ್ಲೆ ಪ್ರಥಮ ಸ್ಥಾನ ಗಳಿಸಿತ್ತು. ತಿರುಚನಾಪಳ್ಳಿಯಲ್ಲಿ 173, ನೆಲ್ಲೂರಿನಲ್ಲಿ 137 ಮತ್ತು ತಂಜಾವೂರಿನಲ್ಲಿ 109 ಮಹಾವಿದ್ಯಾಲಯಗಳು ಇದ್ದವು. ಈ 5431 ವಿದ್ಯಾರ್ಥಿಗಳಿಗೆ ಅವರವರ ವಿಶೇಷ ಯೋಗ್ಯತೆಗೆ ಅನುಸಾರವಾಗಿ ವೇದ, ನ್ಯಾಯ, ಜ್ಯೋತಿರ್ವಿಜ್ಞಾನ, ಕಾವ್ಯ, ಶಾಸ್ತ್ರ ಸಂಗೀತ ಮೊದಲಾದ ಶಿಕ್ಷಣವನ್ನು ನೀಡಲಾಗುತ್ತಿತ್ತು. ಸರ್ ಮನ್ರೋನ ಪ್ರಕಾರ ಮಲಬಾರ್ ಜಿಲ್ಲೆಯಲ್ಲಿ 1094 ಹಿಂದೂ ವಿದ್ಯಾರ್ಥಿಗಳು ಸ್ವಂತದ ಆಧಾರದ ಮೇಲೆ ಉಚ್ಚ ಶಿಕ್ಷಣವನ್ನು ಪಡೆಯುತ್ತಿದ್ದರು. ಏಕೆಂದರೆ ಅಲ್ಲಿನ ರಾಜ ಪರಿವಾರ ಆ ದಿನಗಳಲ್ಲಿ ಆರ್ಥಿಕವಾಗಿ ದಿವಾಳಿ ಸ್ಥಿತಿಯನ್ನು ತಲುಪಿದ್ದರಲ್ಲದೆ, ಅವರಿಂದ ನಡೆಸಲ್ಪಡುತ್ತಿದ್ದ ಒಂದೇ ಒಂದು ಸಾರ್ವಜನಿಕ ಮಹಾವಿದ್ಯಾಲಯದಲ್ಲಿ ಕೇವಲ 75 ಮಂದಿ ವಿದ್ಯಾರ್ಥಿಗಳು ಮಾತ್ರ ಉಳಿದಿದ್ದರು. ಅಲ್ಲಿಯ ಜಿಲ್ಲಾಧಿಕಾರಿ ಈ ಪ್ರಾಚೀನ ಶಿಕ್ಷಣ ಸಂಸ್ಥೆಯ ಅಂದಿನ ದಯನೀಯ ಸ್ಥಿತಿಯನ್ನು ವಿವರಿಸುತ್ತಾ ''1966ನೇ ಇಸವಿಯಲ್ಲಿ ಈ ಸಂಸ್ಥೆಯನ್ನು ಮುಸಲ್ಮಾನರು ಉಧ್ವಸ್ತಗೊಳಿಸಿದರೆ, ತದನಂತರ ಇಂಗ್ಲೀಷರ ಆಡಳಿತ ಆ ಸಂಸ್ಥೆಗೆ ದೊರಕುತ್ತಿದ್ದ ಅನುದಾನವನ್ನು ನಿಲ್ಲಿಸಿ ಅದನ್ನು ಸಂಪೂರ್ಣವಾಗಿ ಹಾಳುಮಾಡಿದರು'' ಎಂದು ಹೇಳಿದ್ದಾನೆ.

ಮುಂದುವರೆಯುವುದು...

CC-0. In Public Domain. Digitized by eGangotri

ಕಾರ್ಗಿಲ್ ಕದನ
ಮರೆಯಲೇ ಬಾರದ ವೀರ ಕಥನ

5

– ಕುಮಾರಿ ಕಾವ್ಯಶ್ರೀ ಭಟ್, ಶಿವಮೊಗ್ಗ

ಜಸವಿಂದರ್ ಸಿಂಗ್

1999, ಮೇ ತಿಂಗಳು. ಅದೊಂದು ಪಂಜಾಬ್‌ನ ಪುಟ್ಟ ಗ್ರಾಮ. ಇಪ್ಪತ್ತು ವರ್ಷದ ಗುರುದಯಾಲ್ ಕೌರ್ ಎಂಬ ಹೆಣ್ಣುಮಗಳು ಕಣ್ಣು ತುಂಬಾ ಬಣ್ಣ ಬಣ್ಣದ ಕನಸು ಹೊತ್ತುಕೊಂಡು, ಕಪ್ಪು ಬಿಳಿಯ ಟಿ.ವಿ.ಯ ಮುಂದೆ ಕುಳಿತು, ತನ್ನ ಸಿಪಾಯಿ ಗಂಡನಾದ ಜಸವಿಂದರ್ ಸಿಂಗ್ ಬಗ್ಗೆ ಏನಾದರೂ ತಿಳಿಯಬಹುದೇನೋ ಎಂಬ ಮಹದಾಸೆಯಿಂದ ಕಣ್ಣರಳಿಸಿ ನೋಡುತ್ತಿದ್ದಳು. ಆದರೆ ಕೇವಲ ನಾಲ್ಕು ತಿಂಗಳ ಹಿಂದಷ್ಟೇ ಮದುವೆಯಾಗಿದ್ದ ಆಕೆಯ ಕಂಗಳು ಮುಂದೆಂದೂ ಗಂಡನನ್ನು ಕಾಣಲೇ ಇಲ್ಲ. ಟಿವಿಯಲ್ಲಿ ಗಂಡನನ್ನು ಹುಡುಕುತ್ತಿದ್ದವಳ ಮನೆಯ ಬಾಗಿಲಿಗೆ ತ್ರಿವರ್ಣ ಧ್ವಜ ಹೊತ್ತಿದ್ದ ಆತನ ಶವ ತಲುಪಿತ್ತು.

ಪಂಜಾಬ್‌ನ ಅಂಧರೈತನಾಗಿದ್ದ ಜೋಗಿಂದರ್ ಸಿಂಗ್‌ನ ಮೂರು ಗಂಡು ಮಕ್ಕಳಲ್ಲಿ ಜಸವಿಂದರ್ ಸಿಂಗ್ ಕೊನೆಯ ಮಗ. ಇರುವ ಮೂರು ಎಕರೆ ಜಮೀನು ಮನೆಮಂದಿಯ ಹೊಟ್ಟೆ ತುಂಬಿಸಲು ಸಾಧ್ಯವಾಗದಾದಾಗ ಮನೆ ಬಿಟ್ಟು ಬಂದ 17 ವರ್ಷದ ಜಸವಿಂದರ್ ಸಿಂಗ್‌ಗೆ ಕೈ ಬೀಸಿ ಕರೆದದ್ದು 'ಭಾರತೀಯ ಸೇನೆ'. ಮೊದಲಿನಿಂದಲೂ ಸಾಹಸದ ಹುಚ್ಚಿದ್ದ ಜಸವಿಂದರ್ ಸಿಂಗ್‌ಗೆ ಬೇಕಾಗಿದ್ದೆಲ್ಲಾ ಸೈನ್ಯ ಕೊಟ್ಟಿತು ಎನ್ನುತ್ತಾರೆ ಜಸವಿಂದರ್ ಸಿಂಗ್‌ನ ಅಣ್ಣ ಸೀತಾರಾಮ್ ಸಿಂಗ್.

ಭಾರತೀಯ ಸೇನೆಯಲ್ಲಿ ಸಿಖ್ ಸೈನ್ಯ ತುಕಡಿಯ ಸಾಹಸ ಪರಾಕ್ರಮಗಳಿಗೆ ಅದರದ್ದೇ ಆದ ಇತಿಹಾಸವಿದೆ. '8 ಸಿಖ್' ಹಾಗೂ '14 ಸಿಖ್' ತುಕಡಿಗಳು ಕಾರ್ಗಿಲ್ ಯುದ್ಧದ ಸಮಯದಲ್ಲಿ ತ್ಯಾಗ – ಬಲಿದಾನಗಳ ಸಂಕೇತದಂತಿದ್ದವು. '14 ಸಿಖ್' ತುಕಡಿ 'ಚೋರ್‌ಬಾತ್ಲಾ' ಮುಂತಾದ ಪ್ರದೇಶಗಳ ಆಕ್ರಮಣಕ್ಕೆ ಹೆಸರುವಾಸಿಯಾದರೆ '8 ಸಿಖ್' ತುಕಡಿ 'ಟೈಗರ್ ಹಿಲ್ಸ್'ನ ಆಕ್ರಮಣಕ್ಕೆ ಹೆಸರುವಾಸಿ. ಜಸವಿಂದರ್ ಸಿಂಗ್‌ನ ಬಲಿದಾನದ ಭೂಮಿಯಾದ 'ಟೈಗರ್ ಹಿಲ್ಸ್' ಹಾಗೂ ಅದರ ಕಾರ್ಯಾಚರಣೆಯ ಬಗ್ಗೆ ತಿಳಿದುಕೊಳ್ಳೋಣ.

ಟೈಗರ್ ಹಿಲ್ಸ್ ಎನ್ನುವುದು ಯುದ್ಧದ ಸಂದರ್ಭದಲ್ಲಿ ಮೊದಲಿಗೆ ಪಾಕಿಗಳು ಆಕ್ರಮಿಸಿದ್ದ ಎಷ್ಟೋ ಬೆಟ್ಟಗಳಲ್ಲಿ ಒಂದು. ಹಿಮದಿಂದ ಕೂಡಿದ ಪ್ರದೇಶ ಅಂದ ತಕ್ಷಣ ನಮಗೆಲ್ಲಾ ಸಿನಿಮಾಗಳಲ್ಲಿನೋಡಿರುವಂತೆ ಸಿಮ್ಲಾ, ಡಾರ್ಜಲಿಂಗ್‌ನ ಸುಂದರ ಶುಭ್ರಹಿಮದ ಎತ್ತರದ ಪರ್ವತಗಳು ನೆನಪಿಗೆ ಬರುತ್ತವೆ. ಆದರೆ ವಾಸ್ತವವಾಗಿ LOC (Line of Control)ನಲ್ಲಿ ಸೈನಿಕರು ಹೋರಾಡಿದ

Sri Vidyabharathi Book Centre, Sringeri

ಪ್ರದೇಶ ಹಾಗಿಲ್ಲ. ಅತ್ಯಂತ ಕಠಿಣವಾದ ಮಾರ್ಗಗಳು, ಹರಿತವಾದ ಬಂಡೆಗಳು, ಗಟ್ಟಿ ಕಲ್ಲು, ಒರಟು ಪೊದೆಗಳು ಇವೆಲ್ಲಾ ಸೈನಿಕರ ದಿನನಿತ್ಯದ ಪಯಣದ ಭಾಗ. ಟೈಗರ್ ಹಿಲ್ಸ್ ಪ್ರದೇಶ ಕೂಡಾ ಹೀಗೆಯೇ ಕಠಿಣವಾದ ದಾರಿಗಳುಳ್ಳ, ಕಡಿದಾದ ಪರ್ವತಗಳನ್ನೊಳಗೊಂಡ ಪ್ರದೇಶ.

ಟೈಗರ್ ಹಿಲ್ಸ್ ಪ್ರದೇಶ ವಶಪಡಿಸಿಕೊಳ್ಳುವ ಮುನ್ನ ಅದರ ಸುತ್ತಲಿರುವ ಪ್ರದೇಶವನ್ನು ಶತ್ರು ಸೈನಿಕರಿಂದ ಮುಕ್ತಗೊಳಿಸುವ ಯೋಜನೆಯನ್ನು ನಿರೂಪಿಸಲಾಯಿತು. ಈ ಕಾರ್ಯಾಚರಣೆಯನ್ನು ಸಫಲಗೊಳಿಸಲು ಮೇ 14ರಂದು ಸಿಪಾಯಿ ಜಸವಿಂದರ್ ಸಿಂಗ್‌ನನ್ನು ಒಳಗೊಂಡ '8 ಸಿಖ್' ತುಕಡಿಯನ್ನು ನಿಯೋಜಿಸಲಾಯಿತು. ಜಸವಿಂದರ್ ಸಿಂಗ್, ರಷ್ವಿಂದರ್ ಸಿಂಗ್ ಹಾಗೂ ಸುಖವಿಂದರ್ ಸಿಂಗ್ ಈ ಕಾರ್ಯಾಚರಣೆಯ ಪ್ರಮುಖ ಯೋಧರಾಗಿದ್ದರು.

ಟೈಗರ್ ಹಿಲ್ಸ್‌ನ ಬಗ್ಗೆ ಅಷ್ಟೇನೂ ಮಾಹಿತಿ ಭಾರತೀಯ ಸೇನೆಯ ಬಳಿ ಇರಲಿಲ್ಲ. ಇದ್ದಷ್ಟು ಮಾಹಿತಿಯೂ ನಿಖರವಾಗಿರದ ಕಾರಣ ಕೇವಲ ಕೆಲವೇ ಮುಜಾಹಿದೀನ್‌ಗಳು ಅಲ್ಲಿದ್ದಾರೆಂದು ಭಾವಿಸಿ ಸೈನಿಕರು ಬೆಟ್ಟ ವಶಪಡಿಸಿಕೊಳ್ಳುವತ್ತ ಧಾವಿಸಿದರು. ಧೈರ್ಯದಿಂದ ಸಾಗುತ್ತಿದ್ದ ನಮ್ಮ ಸೈನಿಕರ ಮೇಲೆ ನಿರೀಕ್ಷಿಸಿದ್ದಕ್ಕಿಂತಲೂ ದೊಡ್ಡ ಪ್ರಮಾಣದಲ್ಲಿ ಗುಂಡಿನ ದಾಳಿಯಾಗಲು ಆರಂಭಿಸಿತು. ಗುಂಡುಗಳಿಗೆ ಎದೆಯೊಡ್ಡಿ ಧೈರ್ಯದಿಂದ ಮುನ್ನುಗ್ಗಿದ ನಮ್ಮ ವೀರರು ಹತ್ತುತ್ತಿದ್ದ ಬೆಟ್ಟಗಳ ಎತ್ತರ ಜಾಸ್ತಿಯಾಗುತ್ತಿದ್ದಂತೆ ಅವರ ಆಯಸ್ಸು ತೀವ್ರಗತಿಯಲ್ಲಿ ಕಡಿಮೆಯಾಗುತ್ತಿತ್ತು. ವೈರಿಗಳ ಗುಂಡಿನ ದಾಳಿಯನ್ನು ಸಮರ್ಪಕವಾಗಿ ತಡೆದು, ತನ್ನ ಜೊತೆಗಾರರನ್ನೆಲ್ಲಾ ರಕ್ಷಿಸಿಕೊಂಡು ಟೈಗರ್ ಹಿಲ್ಸ್‌ನ ತಳಪ್ರದೇಶ ತಲುಪುವಷ್ಟರಲ್ಲಿ ಸುಬೇದಾರ್ ಜೋಗಿಂದರ್ ಸಿಂಗ್ ಹಾಗೂ ನಾಯಕ ರಣಜಿತ್ ಸಿಂಗ್‌ರ ವೀರಮರಣವಾಯಿತು. ಉಳಿದ ಪಡೆ ತನ್ನ ಕಾರ್ಯಾಚರಣೆಯನ್ನು ಮುಂದುವರೆಸಿತು. ಜೊತೆಗಾರರು ಸತ್ತು ಬಿದ್ದಿದ್ದರೂ ಅವರಿಗಾಗಿ ಮರುಗುವ ಅವಕಾಶ, ಸಮಯ ಯಾವುದೂ ಸೈನಿಕರಿಗಿರುವುದಿಲ್ಲ. ಎದುರಾದ ಸಾವಿರ ಅಡೆತಡೆಗಳನ್ನೆಲ್ಲಾ ದಾಟಿ, ಆದ ಭೀಕರ ಗಾಯಗಳನ್ನೆಲ್ಲಾ ಸಹಿಸಿಕೊಂಡು ಜಸವಿಂದರ್ ಮತ್ತು ಸಂಗಡಿಗರು ಟೈಗರ್ ಹಿಲ್ಸ್‌ನ ಶಿಖರ ಭಾಗದೆಡೆ ಮುನ್ನುಗ್ಗುತ್ತಿದ್ದರು. ದುರ್ಗಮ ದಾರಿಯಲ್ಲಿ ಮುನ್ನುಗ್ಗುತ್ತಿದ್ದ ಜಸವಿಂದರ್ ಸಿಂಗ್ ಕೊನೆಗೂ ಮೇಲೆ ತಲುಪಿದ. ಅತ್ತಕಡೆಯಿಂದ ಯಮರೂಪಿ ಗುಂಡುಗಳನ್ನು ಹಾರಿಸುತ್ತಿದ್ದ ಮದ್ದುಗುಂಡು ಬಂಕರ್‌ಗಳನ್ನು ನಾಶಪಡಿಸುತ್ತಾ ಮುಜಾಹಿದೀನ್ ಸೈನಿಕರ ಮೇಲೆ ದಾಳಿ ಮಾಡಿ ಹೋರಾಡುತ್ತಿದ್ದ ಜಸವಿಂದರ್ ಸಿಂಗ್‌ನ ಎರಡೂ ತೊಡೆಗಳಿಗೆ ಗುಂಡುಗಳು ತಾಗಿ, ತೊಡೆಗಳು ಛಿದ್ರ ಛಿದ್ರವಾದವು. ಆದರೆ ಕಣಕಣದಲ್ಲಿ ಸಾಹಸ ತುಂಬಿದ್ದ ಜಸವಿಂದರ್, ತನ್ನ ಪ್ರಾಣಪಕ್ಷಿ ಹಾರುವವರೆಗೂ ಎದುರಾಳಿಗಳ ಮೇಲೆ ಗುಂಡುಗಳನ್ನು ಹಾರಿಸುತ್ತಲೇ ಇದ್ದ. ಈ ಎಲ್ಲಾ ಬಲಿದಾನಗಳ ಪ್ರತಿಫಲವಾಗಿ ಟೈಗರ್ ಹಿಲ್ಸ್ ಕೊನೆಗೂ ಭಾರತದ ವಶವಾಯಿತು. ಕಾರ್ಗಿಲ್ ವಿಜಯಕ್ಕೆ ಒಂದು ದೊಡ್ಡದಾದ ಅಡಿಪಾಯವಾಯಿತು.

43ನೇ ಪುಟಕ್ಕೆ ▶▶

Sri Vidyabharathi Book Centre, Sringeri

ದೊಡ್ಡಪತ್ರೆ

- ಡಾ|| ಪಾರ್ವತಿ ನಾಗೇಂದ್ರ, ಆಯುರ್ವೇದ ವೈದ್ಯೆ ಮತ್ತು ಯೋಗ ತಜ್ಞೆ

ಮನೆ ಅಂಗಳದಲ್ಲಿ ಹೆಚ್ಚು ನೀರಿಲ್ಲದೆ ಹೂವಿನ ಕುಂಡದಲ್ಲಿ ಬೆಳೆಯಬಹುದಾದ ಸಸ್ಯ ದೊಡ್ಡಪತ್ರೆ. ಇದರ ಎಲೆಗಳ ಮೇಲೆ ಸಣ್ಣ ಸಣ್ಣ ರೋಮಗಳನ್ನುನೋಡಬಹುದು. ಇದರ ಪರಿಮಳ ಓಮಕಾಳಿನಂತೆ ಇರುವುದರಿಂದ ದೊಡ್ಡಪತ್ರೆಯನ್ನು ಸಂಸ್ಕೃತದಲ್ಲಿ 'ಪರ್ಣಯವಾನಿ' ಎಂದು ಕರೆದಿದ್ದಾರೆ. ಇದು ರುಚಿಯಲ್ಲಿ ಖಾರ, ಗುಣದಲ್ಲಿ ಉಷ್ಣ ಮತ್ತು ವಾಸನೆಯಲ್ಲಿ ಓಮಕಾಳಿಗಿಂತ ತೀಕ್ಷ್ಣ ವಾಗಿದೆ. ದೊಡ್ಡಪತ್ರೆ ವಾತ ಮತ್ತು ಕಫದಿಂದ ಉಂಟಾಗುವ ರೋಗ ಗಳಲ್ಲಿ ಉಪಯುಕ್ತ. ಇದನ್ನು ಆಂಗ್ಲಭಾಷೆಯಲ್ಲಿ "Country Borage" ಎಂದು ಕರೆಯುತ್ತಾರೆ.

- ದೊಡ್ಡಪತ್ರೆ ತಂಬುಳಿ ಸೇವನೆಯಿಂದ ಬಾಯಿ ರುಚಿ ಮತ್ತು ಜೀರ್ಣಶಕ್ತಿ ಹೆಚ್ಚಾಗುತ್ತದೆ.
- ಹೊಟ್ಟೆನೋವು, ಅಜೀರ್ಣ, ಬೇಧಿ, ಉಬ್ಬರ ಮುಂತಾದ ತೊಂದರೆಗಳಲ್ಲಿ ದೊಡ್ಡಪತ್ರೆ ಎಲೆಯೊಂದಿಗೆ ಜೀರಿಗೆ ಸೇರಿಸಿ ಬಾಡಿಸಿ ನಂತರ ಜಜ್ಜಿ ರಸ ತೆಗೆದು ಅದಕ್ಕೆ ಉಪ್ಪು ಮತ್ತು ಜೇನುತುಪ್ಪ ಸೇರಿಸಿ ಸೇವಿಸಬೇಕು. ಮಕ್ಕಳಲ್ಲಿ ಉಂಟಾಗುವ ಹೊಟ್ಟೆನೋವು ಮತ್ತು ಉಬ್ಬರಕ್ಕೆ ದೊಡ್ಡಪತ್ರೆ ಎಲೆ ರಸಕ್ಕೆ ಜೇನುತುಪ್ಪ ಬೆರಸಿ ದಿನದಲ್ಲಿ 3 ಸಲ ಆಹಾರಕ್ಕೆ ಮೊದಲು ಕೊಡ ಬೇಕು. ಇದರಿಂದ ನೋವು ಕಡಿಮೆಯಾಗುತ್ತದೆ ಮತ್ತು ಜೀರ್ಣಶಕ್ತಿಯು ಹೆಚ್ಚಾಗುತ್ತದೆ.
- ದೀರ್ಘಕಾಲ ಜ್ವರ ರೋಗದಿಂದ ಬಾಯಿರುಚಿ ಕೆಟ್ಟಿದ್ದರೆ ದೊಡ್ಡಪತ್ರೆ ಎಲೆಯೊಂದಿಗೆ ಉಪ್ಪು ಸೇರಿಸಿ ಅಗೆದು ರಸವನ್ನು ಕುಡಿಯುವುದರಿಂದ ಬಾಯಿರುಚಿ ಸರಿಹೋಗುತ್ತದೆ.
- ಕಾಲರಾದಲ್ಲಿ ಉಂಟಾಗುವ ಅತಿಸಾರಕ್ಕೆ ದೊಡ್ಡಪತ್ರೆ ಸರ್ವೋತ್ತಮ ಔಷಧಿ. ಇದರ ರಸವನ್ನು ಮೊದಲು ಎರಡು ಚಮಚ ಕೊಟ್ಟು ನಂತರ ಗಂಟೆ ಗಂಟೆಗೆ ಒಂದೊಂದು ಚಮಚ ಕೊಡುತ್ತಾ ಬಂದರೆ ಅತಿಸಾರ ಕಡಿಮೆಯಾಗುತ್ತದೆ.
- ದೊಡ್ಡಪತ್ರೆ ಎಲೆಯರಸಕ್ಕೆ ಸಮಪ್ರಮಾಣ ತುಳಸಿ ರಸ ಮತ್ತು ಜೇನುತುಪ್ಪ ಬೆರಸಿ ದಿನದಲ್ಲಿ ಮೂರು ಅಥವಾ ನಾಲ್ಕು ಸಲ ಕೊಟ್ಟರೆ ಮಕ್ಕಳಲ್ಲಿ ಬರುವ ಸಾಮಾನ್ಯ ನೆಗಡಿ ಮತ್ತು ಕೆಮ್ಮು ಕಡಿಮೆಯಾಗುತ್ತದೆ.
- ಬಿಕ್ಕಳಿಕೆಯಲ್ಲಿ ಇದರ ರಸಕ್ಕೆ ಜೇನುತುಪ್ಪ ಸೇರಿಸಿ ಆಗಿಂದಾಗ ಕೊಡುತ್ತಿದ್ದರೆ ಬಿಕ್ಕಳಿಕೆ ಶಮನವಾಗುತ್ತದೆ.
- ಉರಿಮೂತ್ರ ಮತ್ತು ಮೂತ್ರದಲ್ಲಿಕಲ್ಲಿದ್ದರೆ ಇದರ ರಸ ಸೇವಿಸಬಹುದು.
- ದೊಡ್ಡಪತ್ರೆ ಸೊಪ್ಪಿನ ರಸಕ್ಕೆ ನುಣ್ಣಗೆ ಪುಡಿ ಮಾಡಿದ ಜೀರಿಗೆ ಸೇರಿಸಿ ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ ಪಿತ್ತದ ಗಂಜಿ ಮತ್ತು ಗಜಕರ್ಣ ವಾಸಿಯಾಗುತ್ತದೆ.

Sri Vidyabharathi Book Centre, Sringeri

- ದೊಡ್ಡಪತ್ರೆ ಎಲೆಗಳೊಂದಿಗೆ ಜೀರಿಗೆ ಸೇರಿಸಿ ಒಲೆಯ ಮೇಲೆ ಬಿಸಿಮಾಡಿ ನಂತರ ಜಜ್ಜಿ ರಸ ತೆಗೆದು ಅದಕ್ಕೆ ಜೇನುತುಪ್ಪ ಸೇರಿಸಿ ಹೊಟ್ಟೆಗೆ ತೆಗೆದುಕೊಳ್ಳುವುದರಿಂದ ಪದೇ ಪದೆ ಆಗುವ ಪಿತ್ತದ ಗಂಧೆ ಕಡಿಮೆಯಾಗುತ್ತದೆ. ಕ್ರಿಮಿಕೀಟ ಕಚ್ಚಿದಾಗಲೂ ಇದೇ ರೀತಿ ಮಾಡಬಹುದು.
- ದೊಡ್ಡಪತ್ರೆ ಎಲೆಗಳ ರಸವನ್ನು ಸಕ್ಕರೆಯೊಂದಿಗೆ ಬೆರಸಿ ತೆಗೆದುಕೊಳ್ಳುವುದರಿಂದ ದೇಹದಲ್ಲಿ ಹೆಚ್ಚಾಗಿರುವ ವಾತವು ಕಡಿಮೆಯಾಗುತ್ತದೆ.
- ದೀರ್ಘ ಕಾಲದ ಕೆಮ್ಮು ಮತ್ತು ಅಸ್ತಮಾ ತೊಂದರೆಗಳಲ್ಲಿ ದೊಡ್ಡಪತ್ರೆ ಎಲೆಯ ಕಷಾಯ ಸೇವಿಸುವುದು ಉತ್ತಮ.
- ದೊಡ್ಡಪತ್ರೆ ಎಲೆಯ ರಸಕ್ಕೆ ಅರಿಶಿನ, ಕಡಲೆಹಿಟ್ಟು ಬೆರಸಿ ಮುಖಕ್ಕೆ ಹಚ್ಚಿ ಇಪ್ಪತ್ತು ನಿಮಿಷದ ನಂತರ ತೊಳೆಯಬೇಕು, ಇದರಿಂದ ಮುಖದ ಕಾಂತಿ ಹೆಚ್ಚಾಗುತ್ತದೆ.

ದೊಡ್ಡಪತ್ರೆಯನ್ನು ಅಡುಗೆಯಲ್ಲಿ ಬಳಸುತ್ತಾರೆ. ದೊಡ್ಡಪತ್ರೆ ತಂಬುಳಿ, ಚಟ್ನಿ ಮತ್ತು ಬಜ್ಜಿ ತಯಾರಿಸಬಹುದು. ಬೇರೆ ಬಜ್ಜಿಗಳಿಗಿಂತ ಇದು ರುಚಿಕರ ಮತ್ತು ಆರೋಗ್ಯಕರ.

ಆಯುರ್ವೇದೀಯ ಪರಿಹಾರಗಳಿಗಾಗಿ ಡಾ|| ಪಾರ್ವತಿ ನಾಗೇಂದ್ರರವರನ್ನು 94485 07196 ಅಥವಾ 080 26646506 ಇಲ್ಲಿ ಸಂಪರ್ಕಿಸಬಹುದು

◀◀ 41ನೇ ಪುಟದಿಂದ

ಕಣ್ಣೀರು ಬತ್ತಿದ ಕಂಗಳಿಂದ ಆಕಾಶ ನೋಡುತ್ತಾ ಕುಳಿತಿರುವ ಜಸವಿಂದರ್ ಪತ್ನಿ ಗುರುದಯಾಲ್ ಕೌರ್ ಈಗ ಮಹಾಮೌನಿ. ಗಂಡ ಕೊನೆಯ ಬಾರಿ ಆಡಿದ ಮಾತುಗಳು ಇನ್ನೂ ಆಕೆಯ ಕಿವಿಗಳಲ್ಲಿವೆ. ''ಇದೇನು ಹೊಸತೇ? ಮೂರು ವರ್ಷಗಳಿಂದ ಕಾಶ್ಮೀರದಲ್ಲಿ ಇಂತಹ ಪ್ರದೇಶಗಳಲ್ಲಿಯೇ ಹೋರಾಡಿದ್ದೇನೆ, ಧೈರ್ಯವಾಗಿರು'' ಎಂದು ಆ ನಾಲ್ಕುತಿಂಗಳ ದಾಂಪತ್ಯ ಜೀವನದಲ್ಲಿ ಜೊತೆಗಿದ್ದ ಬೆರಳಿಣಿಕೆಯಷ್ಟು ದಿನಗಳನ್ನೇ ನೆನಪಿಸಿಕೊಂಡು ಕಾಲ ಕಳೆಯುವ ಕೌರ್, ನನ್ನ ಗಂಡನ ಸಾವು ಸಿಡಿಲನಂತೆ ಅಪ್ಪಳಿಸಿದ ದುರಂತ. ಆದರೆ ಅದರಿಂದ ದೇಶಕ್ಕೆ ಒಳಿತಾಗುವುದು ಎನ್ನುವುದೊಂದೇ ಸಮಾಧಾನ, ಎನ್ನುತ್ತಾಳೆ.

ತಂದೆ ಜೋಗಿಂದರ್ ಸಿಂಗ್ ಕೂಡ 'ಯಾರಾದರೊಬ್ಬರು ಶತ್ರು ಪಡೆಯನ್ನು ಸಾಯಿಸಲು ಸಾಯಲೇಬೇಕು' ಎಂದು ಸಮಾಧಾನಪಡಿಸಿಕೊಳ್ಳುತ್ತಾ ಕಣ್ಣೀರಾಗುತ್ತಾರೆ.

ಜಸವಿಂದರ್ ಸಿಂಗ್‌ನಂತಹ ಇನ್ನಷ್ಟು ವೀರ ಸೈನಿಕರು ತಾಯಿ ಭಾರತಿಯ ರಕ್ಷಣೆಗಾಗಿ ದೀರ್ಘಾಯುಸ್ಸೆಂಬ ವರದೊಂದಿಗೆ ಜನಿಸಲಿ ಎಂದು ಪ್ರಾರ್ಥಿಸೋಣ.

ಜೋ ಶಹೀದ ಹುಯೆ ಹೈ ಉನಕೀ ಜರಾ ಯಾದ್ ಕರೋ ಕುರ್ಬಾನಿ ||

Sri Vidyabharathi Book Centre, Sringeri

CC-0. In Public Domain. Digitized by eGangotri

ಚಿಣ್ಣರಿಗಾಗಿ

ತಸ್ಮೈ ಶ್ರೀ ಗುರವೇ ನಮಃ

– ವಿದ್ವಾನ್ ಶ್ರೀ ಬಿ.ಕೆ. ಶೇಷಗಿರಿ ಭಟ್, ಶೃಂಗೇರಿ

ದ್ವಿತೀಯ ಭಾಗ

ಯಾವುದೇ ಕಾರ್ಯವನ್ನು ಮಾಡುವ ಮೊದಲು ಗುರು ಪ್ರಾರ್ಥನೆ ಆಗತ್ಯ. ಇದು ಪ್ರಾಚೀನ ಸಂಪ್ರದಾಯವೂ ಹೌದು. ಸಾಕ್ಷಾತ್ ಪರಶಿವನ ಅಪರಾವತಾರಿಗಳಾದ ಶ್ರೀ ಶಂಕರ ಭಗವತ್ಪಾದರಿಗೂ ಒಬ್ಬ ಗುರುವಿನ ಅಗತ್ಯವಿತ್ತು. ಗೋವಿಂದ ಭಗವತ್ಪಾದರನ್ನು ಗುರುವಾಗಿ ಪಡೆದು ಅವರಿಂದ ತತ್ತ್ವಮಸಿ – ಅಹಂ ಬ್ರಹ್ಮಾಸ್ಮಿ – ಅಯಮಾತ್ಮಾ ಬ್ರಹ್ಮ – ಪ್ರಜ್ಞಾನಂ ಬ್ರಹ್ಮ ಎಂಬ ನಾಲ್ಕು ಮಹಾವಾಕ್ಯಗಳನ್ನು ಉಪದೇಶ ಪಡೆದರು. ಈ ನಾಲ್ಕು ಮಹಾಮಂತ್ರಗಳೇ ಅಂದು ಆಚಾರ್ಯರು ಸ್ಥಾಪಿಸಿದ ಚತುರಾಮ್ನಾಯ ಪೀಠಗಳಿಗೆ ಭದ್ರಬುನಾದಿಯಾಯಿತು, ತಾರಕ ಮಂತ್ರವಾಯಿತು, ಅದ್ವೈತ ಸಿದ್ಧಾಂತದ ಬೀಜಾಕ್ಷರವಾಯಿತು.

ಒಬ್ಬನು ಇನ್ನೊಬ್ಬನನ್ನು ಕೇಳಿದ. ನಿನ್ನ ಗುರುವಿನ ಪಕ್ಕದಲ್ಲಿಯೇ ಆ ದೇವರೂ ಪ್ರತ್ಯಕ್ಷನಾದರೆ ಪ್ರಥಮ ಪ್ರಣಾಮ ಯಾರಿಗೆ? ಅದಕ್ಕೆ ಅವನಂದ ಮೊದಲು ಗುರುವಿಗೆ, ನಂತರ ದೇವರಿಗೆ. ಏಕೆಂದರೆ ನನಗೆ ಭಗವಂತನ ಸಾಕ್ಷಾತ್ಕಾರದ ಸೋಪಾನಗಳನ್ನು ತೋರಿಸಿದವನು ಗುರು ಎಂದನಂತೆ. ''ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ'' ಎಂಬ ದಾಸವರೇಣ್ಯ ಪುರಂದರ ದಾಸರ ಸಂದೇಶವೂ ಇಲ್ಲಿ ಸಕಾಲಿಕ. ಗುರುನಿಂದೆ ಮಹಾಪಾಪ, ಅದು ಅಕ್ಷಮ್ಯ ಅಪರಾಧವೂ ಕೂಡ. ಗುರುವಿಗೆ ತಿರುಮಂತ್ರ ಹೇಳಿದವರ್ಯಾರೂ ಅಂದು, ಇಂದು, ಮುಂದು ಎಂದೆಂದೂ ಉದ್ಧಾರವಾಗುವುದಿಲ್ಲ. ಆ ಪಾಪಿಗಳಿಗೆ ನರಕಪ್ರಾಪ್ತಿ ನಿಶ್ಚಿತ.

ನಮ್ಮ ಜೀವನ ಯಾತ್ರೆಯಲ್ಲಿ ಸಂಭವಿಸಬಹುದಾದ ಆಧ್ಯಾತ್ಮಿಕ, ಸಾಂಸಾರಿಕ, ವ್ಯಾವಹಾರಿಕ, ದೈಹಿಕ, ಸಾಮಾಜಿಕ, ಮಾನಸಿಕ ಹೀಗೆ ಯಾವುದೇ ಸಮಸ್ಯೆಗಳಿಗೆ ಪರಿಹಾರ ಗುರುವಿನಿಂದ ಮಾತ್ರ ಸಾಧ್ಯ. ನಮ್ಮ ನಡೆ – ನುಡಿ, ಆಚಾರ – ವಿಚಾರ, ರೀತಿ – ನೀತಿ, ನಯ – ವಿನಯ, ಭಕ್ತಿ – ಶ್ರದ್ಧೆಗಳಿಂದ ಗುರುವನ್ನು ಸಂತೃಪ್ತಿಪಡಿಸಿದರೆ ಸಾಕು. ಅದುವೇ ನಾವು ಗುರುವಿಗೆ ನೀಡುವ ಗೌರವ ಸಮರ್ಪಣೆ, ಗುರುದಕ್ಷಿಣೆ, ಗುರುವಂದನೆ. ಇಂತಹ ಪ್ರತ್ಯಕ್ಷ ಪರಬ್ರಹ್ಮ ಸ್ವರೂಪನಾದ ಜ್ಞಾನಿ ನಿಧಿ ಗುರುವಿನ ಸೇವೆ, ಶುಶ್ರೂಷೆ ಮಾಡುತ್ತಾ ಆ ಜ್ಞಾನಜ್ಯೋತಿಯ ಬೆಳಕಿನಲ್ಲಿ ಆತ್ಮ ಶೋಧನೆ ಮಾಡಿಕೊಂಡು ತನ್ಮೂಲಕ ಆತ್ಮ ಸಾಕ್ಷಾತ್ಕಾರವನ್ನು ಹೊಂದಲು ಅಂಬೆಗಾಲಿಕ್ಕುವ ಕಿರು ಪ್ರಯತ್ನವನ್ನಾದರೂ ಮಾಡೋಣ. ಅಪರೂಪವಾಗಿ ಪ್ರಾಪ್ತವಾದ ಈ ಮನುಷ್ಯ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳೋಣ. ಬದುಕಿಗೆ ಒಂದು ಸುಂದರ ಅರ್ಥವನ್ನು ಕಂಡುಕೊಳ್ಳೋಣ.

ಯಸ್ಯ ದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

Sri Vidyabharati Book Centre, Shringeri

CC-0. In Public Domain. Digitized by eGangotri

ಪುರಾಣ – ರಾಮಾಯಣ – ಮಹಾಭಾರತ ಆಧಾರಿತ

ಗಾದೆಗೊಂದು ಕಥೆ – 28

- ಶ್ರೀ ಪರಿಹರಪುರ ಮಂಜುನಾಥ್, ಜೆ. ಪಿ. ನಗರ, ಬೆಂಗಳೂರು

ಕತ್ತೆಗೇನು ಗೊತ್ತು ಕಸ್ತೂರಿ ಪರಿಮಳ?

ಒಂದು ವಸ್ತು, ವಿಚಾರ ಅಥವಾ ವ್ಯಕ್ತಿಯ ಶ್ರೇಷ್ಠತೆಯನ್ನು ಅರಿಯದೆ ಆ ಕುರಿತು ಹಗುರಾಗಿ ಮಾತನಾಡುವ ಅವಿವೇಕಿಗಳಿಂದಾಗಿ ಹುಟ್ಟಿಕೊಂಡಿರುವ ಗಾದೆ ಮಾತಿದು. ಕತ್ತೆ ಎಂಬುದು ಶ್ರಮ ಜೀವಿಯಾದರೂ ಬುದ್ಧಿ ಅಷ್ಟಕ್ಕಷ್ಟೆ ಎಂಬರ್ಥದಲ್ಲಿ ಈ ಗಾದೆ ಮಾತನ್ನು ಬಳಸಲಾಗುತ್ತಿದೆ.

ಇಲ್ಲಿ 'ಕಸ್ತೂರಿ' ಎಂದರೆ ಕೊಂಬಿಲ್ಲದ ಜಿಂಕೆಯ ಜಾತಿಯ ಪ್ರಾಣಿಯೊಂದರ ಮೈಯಿಂದ ಜಿನುಗುವ ಪರಿಮಳ ಭರಿತ ಅಂಟು. ಅದನ್ನು ಕಸ್ತೂರಿ ಎನ್ನುತ್ತಾರೆ. ಇದೇ ಕಾರಣಕ್ಕೆ ಆ ಪ್ರಾಣಿಯನ್ನು ಕಸ್ತೂರಿ ಮೃಗ ಎಂದು ಕರೆಯಲಾಗಿದೆ. ಇದೇ ರೀತಿ ತನ್ನ ಮೈಯಿಂದ ಪರಿಮಳ ಭರಿಸುವ ವಸ್ತುವನ್ನು ಜಿನುಗಿಸುವ ಒಂದು ಜಾತಿಯ ಬೆಕ್ಕೂ ಉಂಟು ಅದಕ್ಕೆ ಕಸ್ತೂರಿ ಬೆಕ್ಕು ಎಂಬ ಹೆಸರಿದೆ. ಇದರ ದೇಹದಿಂದ ಹೊರಹೊಮ್ಮುವ ಪರಿಮಳ ದ್ರವ್ಯವನ್ನು 'ಪುನುಗು' ಎನ್ನುವ ಕಾರಣಕ್ಕೆ ಇದಕ್ಕೆ ಪುನುಗಿನ ಬೆಕ್ಕು ಎಂಬ ಹೆಸರೂ ಉಂಟು.

ಇದೆಲ್ಲ 'ಕಸ್ತೂರಿ'ಯ ಸಮಾಚಾರವಾಯಿತು. 'ಇದಕ್ಕೂ ಪುರಾಣಕ್ಕೂ ಏನು ಸಂಬಂಧ?' ಎಂದು ಹುಡುಕಲು ಹೊರಟರೆ ಸ್ವಾರಸ್ಯಕರ ಕಥೆಯೊಂದು ಎದುರಾಗುತ್ತದೆ.

ಒಂದು ಕಾಲದಲ್ಲಿ ದಟ್ಟವಾದ ಅರಣ್ಯದಲ್ಲಿ ರಾಕ್ಷಸನೊಬ್ಬ ಕಸ್ತೂರಿ ಮೃಗದ ರೂಪದಲ್ಲಿದ್ದ. ಆಗಿನ್ನೂ ಆ ಪ್ರಾಣಿಗಳ ಮೈಯಿಂದ ಪರಿಮಳ ದ್ರವ್ಯ ಒಸರುವ ಅದ್ಭುತ ಚಾಲ್ತಿಯಲ್ಲಿರಲಿಲ್ಲ. ಈ ರಾಕ್ಷಸನ ಹೆಸರು ಪುಲಕ. ಆತ ಒಮ್ಮೆ ಶಿವನನ್ನು ಕುರಿತು ತಪಸ್ಸು ಮಾಡಿದ. ಯಾರೇ ತಪಸ್ಸು ಮಾಡಿದರೂ ಅದು ಭಕ್ತಿ ಶ್ರದ್ಧೆ ಏಕಾಗ್ರತೆಯಿಂದ ಕೂಡಿದ್ದಲ್ಲಿ ಅವರೆದುರು ಪ್ರತ್ಯಕ್ಷವಾಗ ಬೇಕಾದ್ದು ಅನಿವಾರ್ಯವಾದ್ದರಿಂದ ಶಿವ ಪುಲಕನೆದುರು ಪ್ರತ್ಯಕ್ಷನಾದ. ಶಿವನನ್ನು ಕಂಡೊಡನೆ ಪುಲಕ ತನ್ನ ದೇಹ ಪರಿಮಳಯುಕ್ತವಾಗಿರಬೇಕೆಂದು ವರ ಬೇಡಿದ. ಶಿವ ತಥಾಸ್ತು ಎಂದ. ಅಂದಿನಿಂದ ಪುಲಕನ ಮೈ ಸುತ್ತಮುತ್ತಲಿನವರನ್ನು ಮರುಳು ಮಾಡುವಂತೆ ಸುವಾಸನೆಯನ್ನು ಸೂಸತೊಡಗಿತು.

ಇದರಿಂದ ಆತನೆಡೆಗೆ ಆಕರ್ಷಿಸಲ್ಪಡುವ (ಸ್ತ್ರೀ)ಯರ ಸಂಖ್ಯೆ ಜಾಸ್ತಿಯಾಯಿತು. ಕೊನೆ ಕೊನೆಗೆ ಮಾನವ – ದಾನವರಿರಲಿ, ದೇವತಾ ಸ್ತ್ರೀಯರೂ ಪುಲಕನ್ನು ಕಂಡು ಮರುಳಾಗತೊಡಗಿದರು. ಹೀಗೆ ತಮ್ಮ ಪತ್ನಿಯರೆಲ್ಲ ಪುಲಕನತ್ತ ಸೆಳೆಯಲ್ಪಡುವುದನ್ನು ಕಂಡು ಕಂಗಾಲಾದ ದೇವತೆಗಳು ಬೇರೆ ದಾರಿಯಿಲ್ಲದೆ ಶಿವನನ್ನು ಕಂಡು ತಮ್ಮ ಅಳಲನ್ನು ತೋಡಿಕೊಂಡರು. ಅವರ ಅಹವಾಲನ್ನು ಕೇಳಿದ ಶಿವ ಪುಲಕನನ್ನು ಕರೆದು ಅವನಲ್ಲಿ ಬದಲಾವಣೆ ತರಲು ಪ್ರಯತ್ನಿಸಿದ. ಶಿವನ ಪರಮಭಕ್ತ

CC-O. In Public Domain. Digitized by eGangotri

ನಾದ ಪುಲಕ ಮರು ಮಾತಾಡದೆ ತನ್ನ ದೇಹವನ್ನು ಬಿಡಲು ಒಪ್ಪಿಕೊಂಡ. ಆದರೆ ತನ್ನ ನಂತರ ಕಸ್ತೂರಿ ಮೃಗಗಳ ಸಂತತಿಯ ಮೈಯಲ್ಲಿ ನಿರಂತರವಾಗಿ ಪರಿಮಳ ದ್ರವ್ಯ ಜಿನುಗುವಂತಾಗಲಿ ಎಂದು ವರ ಬೇಡಿದ. ಜೊತೆಗೆ ಆ ದ್ರವ್ಯವು ಶಿವ ಪಾರ್ವತಿಯರಿಗೆ ಅತ್ಯಂತ ಪ್ರಿಯವಾದದ್ದೆನಿಸ ಬೇಕು ಹಾಗೂ ಈ ಮೃಗ ಮದವು ಎಲ್ಲ ದೇವತಾ ಪೂಜೆಗಳಿಗೆ ಬಳಸುವ ಶ್ರೇಷ್ಠ ವಸ್ತುವಾಗ ಬೇಕೆಂದೂ ಕೇಳಿಕೊಂಡ. ಶಿವ ತಥಾಸ್ತು ಎಂದ ಮೇಲೆ ಪುಲಕ ದೇಹತ್ಯಾಗ ಮಾಡಿದ. ಅಂದಿನಿಂದ ಕಸ್ತೂರಿ ಮೃಗಗಳ ಮೈಯಿಂದ ಈ ಪರಿಮಳಯುಕ್ತ ದ್ರವ್ಯ ಹೊರಹೊಮ್ಮುವಂತಾಯಿತು. ಅಷ್ಟೇ ಅಲ್ಲ **''ಕತ್ತೆಗೇನು ಗೊತ್ತು ಕಸ್ತೂರಿ ಪರಿಮಳ?''** ಎಂಬ ಗಾದೆ ಮಾತಿನ ಹುಟ್ಟಿಗೂ ಕಾರಣವಾಯಿತು.

ಈ ಕಸ್ತೂರಿ ಅದೆಷ್ಟು ಶ್ರೇಷ್ಠವೆಂದರೆ ನಮ್ಮ ಮಾತೃಭಾಷೆಯಾದ ಕನ್ನಡವನ್ನು 'ಕಸ್ತೂರಿ ಕನ್ನಡ' ಎನ್ನುತ್ತೇವೆ. ಕನ್ನಡದ ಟಿವಿ ವಾಹಿನಿಯೊಂದು ಇದೇ ಹೆಸರಿನಿಂದ ಪ್ರಖ್ಯಾತಿ ಪಡೆದಿದೆ. ಇನ್ನು ಕನ್ನಡ ಪತ್ರಿಕೋದ್ಯಮದಲ್ಲಿ ತನ್ನದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿರುವ 'ಲೋಕ ಶಿಕ್ಷಣಾ ಟ್ರಸ್ಟ್' 'ಕಸ್ತೂರಿ' ಹೆಸರಿನ ಮಾಸಪತ್ರಿಕೆಯೊಂದನ್ನು ದಶಕಗಳಿಂದ ಹೊರತರುತ್ತಿದ್ದು ಅದು ಇಂದಿಗೂ ತನ್ನದೇ ಆದ ಓದುಗ ಬಳಗವನ್ನು ಹೊಂದಿರುವುದಲ್ಲದೆ ತನ್ನ ಮೌಲ್ಯಯುತ ಬರಹಗಳಿಂದಾಗಿ ಕರ್ನಾಟಕದಾದ್ಯಂತ ಹೆಸರುವಾಸಿಯಾಗಿದೆ.

ಶ್ರೀ ಮಠದಲ್ಲಿ ಒಂದು ಪರಿಪೂರ್ಣ 'ಗೋಶಾಲೆ' ಯನ್ನು ನಿರ್ವಹಿಸಲಾಗುತ್ತಿದೆ. ಪ್ರಸ್ತುತ ಇಲ್ಲಿ 65ಕ್ಕೂ ಹಸುಗಳು ಕರುಗಳೊಂದಿಗಿವೆ. ಇವುಗಳ ಸಂಖ್ಯೆ ಬೆಳೆಯುತ್ತಿರುವುದರಿಂದ ಹೆಚ್ಚುವರಿ ಗೋಶಾಲೆಗಳ ನಿರ್ಮಾಣವಾಗ ಬೇಕಾಗಿದೆ. ಗೋಶಾಲೆಯಲ್ಲಿನ ಈ ಹಸು - ಕರುಗಳ ನಿರ್ವಹಣಾ ವೆಚ್ಚವನ್ನು ಭಕ್ತಾದಿಗಳು ಭರಿಸುವುದರ ಮೂಲಕ ಗೋಮಾತೆಯ ಸೇವೆಯಲ್ಲಿ ಭಾಗವಹಿಸಬಹುದಾಗಿದೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ಬೋಧರೂಪಾನುಸಂಧಾನಮ್

(ದಕ್ಷಿಣಾಮೂರ್ತಿಸ್ತೋತ್ರತ್ರಯಪಠನಮಹಾಭಿಯಾನ)

ಬ್ರಹ್ಮಾದಿದೇವವಂದ್ಯಾಯ ಸರ್ವಲೋಕಾಶ್ರಯಾಯ ತೇ ।
ದಕ್ಷಿಣಾಮೂರ್ತಿರೂಪಾಯ ಶಂಕರಾಯ ನಮೋ ನಮಃ

''**ನ ಹಿ ಜ್ಞಾನೇನ ಸದೃಶಮ್**'' ಜ್ಞಾನದಂಥ ಪಾವನಕರ ವಸ್ತು ಇನ್ನೊಂದಿಲ್ಲ ಎಂಬುದು ಭಗವಂತನ ಸ್ಪಷ್ಟೋಕ್ತಿ. ಆದ್ದರಿಂದಲೇ ವಿವೇಕಿಗಳು ಜ್ಞಾನವೊಂದನ್ನೇ ಬಯಸುತ್ತಾರೆ. ಜ್ಞಾನವನ್ನು ಪಡೆದರೆ ಎಲ್ಲವನ್ನೂ ಪಡೆದಂತೆ. ಅಂಥ ಜ್ಞಾನವನ್ನು ನೀಡಬಲ್ಲ ಗುರು ಜ್ಞಾನಸ್ವರೂಪನೇ ಆದ **ಶ್ರೀ ದಕ್ಷಿಣಾಮೂರ್ತಿ**. ಆತ ಗುರುವಾಗಿ, ಈಶ್ವರನಾಗಿ, ನಮ್ಮೆಲ್ಲರ ಆತ್ಮನಾಗಿ ಹೀಗೆ ಮೂರು ರೂಪದಿಂದ ತೋರುತ್ತಿರುವ ಸರ್ವವ್ಯಾಪಿ ಎಂದು **ಶ್ರೀ ಸುರೇಶ್ವರಾಚಾರ್ಯರು** ದಕ್ಷಿಣಾಮೂರ್ತಿಯನ್ನು ಸ್ತುತಿಸಿದ್ದಾರೆ. ಇಂಥ ಮಹಾನುಭಾವನನ್ನು **ಶ್ರೀ ಶಂಕರಾಚಾರ್ಯರು** ರಚಿಸಿದ ಶ್ಲೋಕಗಳ ಮೂಲಕ ನಮಗೆ ಅಭಿಮುಖನನ್ನಾಗಿ ಮಾಡಿಕೊಂಡು ನಮ್ಮ ಹೃದಯದಲ್ಲೂ ಆ ಜ್ಞಾನಜ್ಯೋತಿಯನ್ನು ಬೆಳಗಿಸಿಕೊಂಡಾಗ ಸರ್ವಾತ್ಮಭಾವ ನಮ್ಮದಾಗುತ್ತದೆ.

ಈ ಹಿನ್ನೆಲೆಯೊಂದಿಗೆ ವೇದಾಂತಭಾರತಿಯು ''**ಬೋಧನಾರೂಪಾನುಸಂಧಾನಮ್**'' ಎನ್ನುವ ಹೆಸರಿನಲ್ಲಿ ಸಮಸ್ತ ಸಮಾಜದ ಶ್ರೇಯೋಭಿವೃದ್ಧಿಗಾಗಿ ಈಗ ದಕ್ಷಿಣಾಮೂರ್ತಿ ಸ್ತೋತ್ರ, ದಕ್ಷಿಣಾಮೂರ್ತಿ ವರ್ಣಮಾಲಾ, ಶ್ರೀ ದಕ್ಷಿಣಾಮೂರ್ತ್ಯಷ್ಟಕಗಳನ್ನು ಆಯ್ಕೆ ಮಾಡಲಾಗಿದೆ. ಈ ಸ್ತೋತ್ರಗಳ ಪಠನವು ಆಯುರಾರೋಗ್ಯ – ಐಶ್ವರ್ಯ, ವಿದ್ಯಾ – ಬುದ್ಧಿಗಳನ್ನು ನೀಡುವುದೆಂದು ಶ್ರೀ ಶಂಕರಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀ ಸುರೇಶ್ವರಾಚಾರ್ಯರು ತಮ್ಮ ಗ್ರಂಥದಲ್ಲಿ ತಿಳಿಸಿದ್ದಾರೆ. ಇದರಲ್ಲಿ ಜಾತಿ, ಮತ, ಲಿಂಗ, ವಯಸ್ಸು ಎಂಬ ಭೇದವಿಲ್ಲದೆ ಎಲ್ಲರೂ ಭಾಗವಹಿಸಬಹುದು. ಇದು ಇದೇ ಡಿಸೆಂಬರ್ – ಜನವರಿ ತಿಂಗಳಿನಲ್ಲಿ ನಡೆಯಲಿದೆ.

ವೇದಾಂತಭಾರತಿಯ ಮಹಾ ಸಂರಕ್ಷಕರಾದ **ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ** ದಿವ್ಯಾನುಗ್ರಹದೊಂದಿಗೆ, ಸಂಸ್ಥೆಯ ಸಂರಕ್ಷಕರಾದ ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧೀಶರಾದ ಪರಮಪೂಜ್ಯ **ಶ್ರೀ ಶ್ರೀ ಶಂಕರ ಭಾರತೀ ಮಹಾಸ್ವಾಮಿಗಳವರ** ಮಾರ್ಗದರ್ಶನದಲ್ಲಿ, ವೇದಾಂತ ಭಾರತಿಯು ಎಲ್ಲರ ಏಳಿಗೆಗೆ ಹಾಗೂ ಲೋಕ ಕ್ಷೇಮಕ್ಕಾಗಿ ಸ್ತೋತ್ರ ಪಾರಾಯಣ ಅಭಿಯಾನವನ್ನು ಪ್ರಾರಂಭಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 9845121153, 9845049550, 9448568930, 9449912121, 9742387448, 9845210654, 9880289460
Sri Vidyabharathi Book Centre, Sringeri

CC-0. In Public Domain. Digitized by eGangotri

ಪದಕ್ರೀಡೆ 135

ಶ್ರೀ ಹರಿಹರಪುರ ಮಂಜುನಾಥ



ಮೇಲಿನಿಂದ ಕೆಳಕ್ಕೆ

1. ವೇದಗಳಲ್ಲಿ ಮೂರನೆಯದು (4)
2. ಕೆಳಗಿನಿಂದ ಹರಿಯುತ್ತಿದೆ ನರಕದ ಹಾದಿಯ ನದಿ! (4)
4. ಈ ಹುಟ್ಟು ಬಹಳ ದೊಡ್ಡದೋ ಎಂದು ದಾಸರೇ ಹೇಳಿದ್ದಾರೆ. (5)
5. ಇವನಿಗೆ ವೈರಿಗಳೆಂಬುವವರ್ಯಾರೂ ಇಲ್ಲ (5)
7. ಎಲ್ಲ ಸ್ಥಾವರ ಹಾಗೂ ಜಂಗಮ ವಸ್ತುಗಳು (7)
10. ಎಂದಿಗೂ ಬತ್ತದ ತಾಯಿಯ ಮೇಲಿನ ಪ್ರೀತಿ (4)
11. ಇದು ನಮ್ಮ ಆಯಸ್ಸನ್ನು ವೃದ್ಧಿಸುವ ವೇದ ಸಮಾನವಾದ ವೈದ್ಯ ಪದ್ಧತಿ (4)
12. ಬಿಲ್ಲಿನಿಂದ ಹೊರಟ ಬಾಣದ ರಭಸ (4)

ಎಡದಿಂದ ಬಲಕ್ಕೆ

1. ಕುಮಾರಸ್ವಾಮಿಯ ಮತ್ತೊಂದು ಹೆಸರು (5)
3. ತಬ್ಬಿಬ್ಬಾಗಿರುವ ಹಳ್ಳಿಯವ ! (3)
6. 'ಶ'ಕಾರಕ್ಕೆ ಬದಲು 'ಸ'ಕಾರವಾಗಿರುವ ರೋಷ ಅಸ್ತವ್ಯಸ್ತವಾಗಿದೆ. (3)
8. ಜನಕನ ಮಗಳು ಚೆಲ್ಲಾಪಿಲ್ಲಿಯಾಗಿದ್ದಾಳೆ! (3)
9. ಲಲಿತ ವಿದ್ಯೆಯ ಮೆರೆದಾಟವನ್ನು ಹೀಗೆ ಬಣ್ಣಿಸಬಹುದಲ್ಲವೆ? (5)
10. ರಾವಣನ ಮಂತ್ರಿಯಾಗಿದ್ದ ಆತನ ಸೋದರಮಾವ (3)
11. ಈತ ಹುಟ್ಟಿನಿಂದಲೇ ವೈರಿಯಾಗಿರುವಾತ (5)
13. ನಾಲ್ಕು ವೇದಗಳಲ್ಲೂ ಪಾರಂಗತನಾಗಿರುವವನೇ ಈತ (4)
14. 'ಮರ'ದ ಮಧ್ಯೆ ಕಂಡ ಮೊಸಳೆ (3)
15. ಮೂರನೆಯವನಿಗೆ ಲಾಭವಾಗಬೇಕಾದರೆ ಇಬ್ಬರು ಮಾಡಬೇಕಾದ್ದೇನು? (3)

ಪದಕ್ರೀಡೆ 135ರ ಉತ್ತರ ಮುಂದಿನ ಸಂಚಿಕೆಯಲ್ಲಿ

ಪದಕ್ರೀಡೆ 135ರ ಸರಿ ಉತ್ತರ

1 ಅಂ	ಬಾ	ರಿ			2 ಬಾ		3 ಬಾ	ಲ್ಯ	
ಬಾ			4 ಅ	ಜಾ	ನು	ಬಾ	ಹು		
5 ಸ	ದಾ	ರ	ಮೆ		ಲಿ		6 ಬ	ಸ್ಥಿ	
ದ			ವೇ				ಲಿ		
ನ		7 ಜ	ಗ	8 ದ್ವಿ	ಪ್ಯಾ	9 ತ		10 ಅ	
	11 ಗೂ			ದ		ಲೆ		ಹ	
12 ಕೋ	ಳಿ	13 ಜ	ಗ	ಳ		ಮಾ		ವಾ	
		ಠ		ಧಾ		14 ರು	15 ಮಾ	ಲು	
16 ಸ್ಥಾ	ಗ	ರ	ಜ	ನ್ಯ			ದ್ರಿ		

Sri Vidyabharathi Book Centre, Sringeri



CC-O. In Public Domain. Digitized by eGangotri

ಪ್ರಾಯೋಜಕತ್ವ ವಹಿಸಿ
ಶ್ರೀ ಶ್ರೀಗಳ ಅನುಗ್ರಹ ಬಯಸುವವರು

ಶ್ರೀ ರಾಜೇಶ್ ಭಟ್, ಕೊಪ್ಪ

ಶ್ರೀ ಎ.ಬಿ. ಕಿರಣ್ ಭಟ್, ಬಸವಾನಿ

ಶ್ರೀ ಡಿ.ಎಸ್. ಅನುದೀಪ ಹೆಬ್ಬಾರ

ಶ್ರೀ ಗುರುಪ್ರಸನ್ನ ಭಟ್ ಎನ್.ಎಸ್.

ಶ್ರೀ ಹೆಚ್.ಕೆ. ಆದಿತ್ಯ ಹೆಬ್ಬಾರ

ಶ್ರೀ ಕಿರಣ್ ಭಟ್ ಬಿ. ಕಲ್ಮನೆ

ಶ್ರೀ ಸುದೀರ ಭಟ್ ಕೆ.ಸಿ.

ಶ್ರೀ ಕೆ.ಎನ್. ಸುಬ್ರಹ್ಮಣ್ಯ ಭಟ್

ಶ್ರೀ ವೆಂಕಟೇಶ ಮೂರ್ತಿ ಎಸ್.ವಿ.

ಶ್ರೀ ಶೃಂಗೇಶ್ವರ ಸಣ್ಣಾನೆಗುಂದ

ಶ್ರೀ ಟಿ.ವಿ. ಲಕ್ಷ್ಮೀನಾರಾಯಣ, ಕೊಪ್ಪ

ಶ್ರೀ ನಾಗರೀ ಭಟ್, ಆನೆಗುಂದ

ಶ್ರೀ ಸತ್ಯನಾರಾಯಣ ಶಾಸ್ತ್ರಿ

ಶ್ರೀ ಕೃಷ್ಣಮೂರ್ತಿ ಹೆಚ್.ಸಿ.

ಶ್ರೀ ವೇಣುಗೋಪಾಲ ಭಟ್, ಸಣ್ಣಾನೆಗುಂದ

ಶ್ರೀ ಮಂಜುನಾಥ ಹೆಚ್.ಎಂ.

ಶ್ರೀ ರಮೇಶ್ ಭಟ್, ದಿಂಡೋಡಿ

''ಸ್ವಯಂಪ್ರಕಾಶ''ದ ಈ ಸಂಚಿಕೆಯ ಪೂರ್ಣ ಪ್ರಾಯೋಜಕತ್ವವನ್ನು ಮೇಲ್ಕಂಡ ಶ್ರೀಮಠದ ಭಕ್ತಾದಿಗಳು ವಹಿಸಿಕೊಂಡು, ಈ ತಿಂಗಳ ಮುದ್ರಣ ವೆಚ್ಚವನ್ನು ಭರಿಸುವುದರ ಮೂಲಕ ಶ್ರೀ ಶ್ರೀಗಳವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಿರುತ್ತಾರೆ.

Sri Vidyabharathi Book Centre, Sringeri

ಆಡಳಿತಾಧಿಕಾರಿಗಳು, ಶ್ರೀಮಠ, ಹರಿಹರಪುರ

Registered with RNI Reg No.KARKAN/2002/11821
Licensed to Post without Prepayment Licence No. WPP-256 below
Registration No. KA/SK/CKM-656/2013-15

CC-O. In Public Domain. Digitized by eGangotri

ಈ ಸಂಚಿಕೆಯನ್ನು ಪ್ರತಿ ತಿಂಗಳ 26ನೇ ದಿನಾಂಕದಂದು ಬೆಂಗಳೂರಿನ ಜಿಪಿಓ ಅಂಚೆ ಕಛೇರಿಯಿಂದ ಕಳುಹಿಸಲಾಗುತ್ತದೆ

ಬಲಿಪಾಡ್ಯಮಿ ಸಂದರ್ಭದಲ್ಲಿ ಹರಿಹರಪುರದ ಗೋಶಾಲೆಯಲ್ಲಿ ನಡೆದ ''ಗೋಪೂಜೆ''

ಶ್ರೀ ಶ್ರೀಗಳವರಿಂದ ಹೊಸಪೇಟೆಯಲ್ಲಿ ''ಪ್ರಜ್ಞಾ ಸಭಾ ಮಂಟಪ''ದ ಉದ್ಘಾಟನೆ

Printed by Shivakumar, Published by P.N. Viswanathan behalf of Swayamprakasha Publications Trust, Bhaktimandiram, 377, 9th Main Road, Girinagar, Bangalore-560 085,
Printed at Jwalamukhi Mudranalaya Pvt. Ltd., No. 44/1, K.R. Road, Basavanagudi, Bangalore - 4
Editor: Hariharapura B. Subramanyam

CC-O. Vidyabharathi Book Centre, Sringeri